
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರಪತ್ರಿಕೆ


ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 27 | ಜೂನ್ 27–ಜುಲೈ 3, 2022 | ಪುಟ 16 | ರೂ.10/-
Volume: 16 Issue: 27 June 27-JULY 3, 2022 Pages: 16 Price: 10/-
https://janashakthi.wordpress.com e-mail : js_weekly@yahoo.com



ಬಂಗಲೆಗಳ ಕಟ್ಟಿದವರು ತಳಾದಿಗೆ ಸಿಕ್ಕಿದವರ ಕಥೆ-ವ್ಯಥೆ

ಕಟ್ಟಡ ಉದ್ಯಮದ ಒಳ-ಹೊರಗು



ನರೇಂದ್ರ ಮೋದಿ ಮೈಸೂರು ಭೇಟಿ: ಲಾಭ ಸೊನ್ನೆ, ಖರ್ಚೇ ಜಾಸ್ತಿ



ಓರಿಯಂಟಲ್ ಕಂಪನಿಯೊಂದಿಗೆ ಜಿಲ್ಲಾಧಿಕಾರಿಯ ಶಾಮೀಲು –ದಬ್ಬಾಳಿಕೆ



ಹಾಸನ: ಶಿಲ್ಪಕಲೆಗಳ ನಾಡಿನಲ್ಲಿ ಕೋಮುವಾದದ ಮೋಡ ಮುಸುಕುತ್ತಿದೆ



ಪೆತ್ರೊ ಕೊಲಂಬಿಯದ ಮೊದಲ ಎಡ ಅಧ್ಯಕ್ಷ ಲ್ಯಾಟಿನ್ ಅಮೆರಿಕದಲ್ಲಿ ಮತ್ತೆ 'ಎಳೆಗೆಂಪು ಅಲೆ'

ಮಹಾರಾಷ್ಟ್ರದ ಎಂ.ವಿ.ಎ. ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ

ಶಿವಸೇನಾ ಪಕ್ಷಕ್ಕೆ ಸೇರಿದ ಶಾಸಕರನ್ನು ಮೊದಲಿಗೆ ಸೂರತ್‌ಗೆ, ನಂತರ ಗುವಹಾಟಿಗೆ ಹಾರಿಸಿಕೊಂಡು ಹೋಗಿರುವ ರೀತಿಯನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಇವೆರಡೂ ಬಿಜೆಪಿ ಆಳ್ವಿಕೆಯ ರಾಜ್ಯಗಳು. ಇದನ್ನು ಬಿಜೆಪಿ ಎರಡೂ ರಾಜ್ಯಗಳಲ್ಲಿ ಪ್ರಭುತ್ವ ಯಂತ್ರವನ್ನು ಉಪಯೋಗಿಸಿಕೊಂಡು ಮಾಡಿದೆ. 'ಮಂತ್ರಿಗಳು ಮತ್ತು ಶಾಸಕರ ಮೇಲೆ ಗುರಿಯಿಡಲು ಕೇಂದ್ರೀಯ ಏಜೆನ್ಸಿಗಳನ್ನು ಕೂಡ ಬಳಸಿಕೊಳ್ಳಲಾಗಿದೆ. ಎಂವಿಎ ಸರ್ಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಇದನ್ನು ಮಾಡಲಾಗುತ್ತಿದೆ.

ಪ್ರಭುತ್ವ ಅಧಿಕಾರದ ಈ ನಾಚಿಕೆಗೆಟ್ಟ ಬಳಕೆಯು ಪ್ರತಿಪಕ್ಷಗಳ ಆಳ್ವಿಕೆಯ ರಾಜ್ಯ ಸರ್ಕಾರಗಳನ್ನು ಬೀಳಿಸುವುದಕ್ಕಾಗಿ ನಡೆಸಿದ ಈ ಹಿಂದಿನ ಪ್ರಯತ್ನಗಳಿಗೆ ಅನುಗುಣವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ರೀತಿಯ ದುರುಪಯೋಗದ ಮೂಲಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದರ ವಿರುದ್ಧ ಪ್ರತಿಭಟಿಸುವಂತೆ ಎಲ್ಲಾ ಪ್ರಜಾಪ್ರಭುತ್ವವಾದಿ ವಿಭಾಗಗಳಿಗೆ ಕರೆ ನೀಡಿದೆ.

ಅಗ್ನಿಪಥ ಸ್ಕೀಮ್ ರೈತರ ಮೇಲೆ ಮುಯ್ಯಿ ತೀರಿಸುವ ಇನ್ನೊಂದು ಹಂಚಿಕೆ-ಎಸ್.ಕೆ.ಎಂ.



ಸಶಸ್ತ್ರ ಪಡೆಗಳ ನೇಮಕಾತಿಗೆ ಹೊಸ ಅಗ್ನಿಪಥ್ ಯೋಜನೆ ವಿರುದ್ಧ ಯುವಕರ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ತನ್ನ ಬೆಂಬಲವನ್ನು ಘೋಷಿಸಿದೆ. ಪ್ರತಿಭಟನೆಯನ್ನು ಶಾಂತಿಯುತವಾಗಿಡಲು ಮನವಿ ಮಾಡಿದ ಸಂಯುಕ್ತ ರೈತ ಮೋರ್ಚಾವು ಈ ಯೋಜನೆಯನ್ನು ಸೈನ್ಯ-ವಿರೋಧಿ, ರೈತ ವಿರೋಧಿ ಮತ್ತು ದೇಶ ವಿರೋಧಿ ಎಂದು ಬಣ್ಣಿಸಿದೆ. "ಜೈ ಜವಾನ್ ಜೈ ಕಿಸಾನ್" ಘೋಷಣೆಯ ಸ್ಫೂರ್ತಿಯನ್ನು ನಾಶಮಾಡಲು ಕೇಂದ್ರ ಸರ್ಕಾರವು ಮುಂದಾಗಿರುವಾಗ, ಈ ಹೋರಾಟದಲ್ಲಿ ಯೋಧರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವುದು ರೈತ ಚಳವಳಿಯ ಕರ್ತವ್ಯವಾಗಿದೆ. ಅದರಂತೆ, ಸಂಯುಕ್ತ ಕಿಸಾನ್ ಮೋರ್ಚಾ ಜೂನ್ 24 ರಂದು ದೇಶಾದ್ಯಂತ ಪ್ರತಿಭಟನಾ ದಿನವನ್ನು ಆಚರಿಸಲು ಕರೆ ನೀಡಿದೆ. ಹರಿಯಾಣದ ಕರ್ನಾಲ್ ನಲ್ಲಿ ನಡೆದ ಸಂಯುಕ್ತ ಕಿಸಾನ್ ಮೋರ್ಚಾದ 7 ಸದಸ್ಯರ ಸಮನ್ವಯ ಸಮಿತಿಯು ಈ ನಿರ್ಧಾರವನ್ನು ತೆಗೆದುಕೊಂಡಿದೆ.

ಈ ಯೋಜನೆಯು ದೇಶದ ಭವಿಷ್ಯದ ಜೊತೆ ಆಟವಾಡುತ್ತಿದೆ ಎಂದು ಬಣ್ಣಿಸಿದ ಸಂಯುಕ್ತ ಕಿಸಾನ್ ಮೋರ್ಚಾ, ಇದು ರಾಷ್ಟ್ರೀಯ ಭದ್ರತೆ ಮತ್ತು ನಿರುದ್ಯೋಗಿ ಯುವಕರ ಕನಸುಗಳೊಂದಿಗೆ ಮಾತ್ರವಲ್ಲ, ದೇಶದ ರೈತ ಕುಟುಂಬಗಳೊಂದಿಗೆ ಆಟವಾಡುತ್ತಿದೆ ಎಂದು ಹೇಳಿದರು. ಈ ದೇಶದ ಜವಾನ ಸಮವಸ್ತ್ರಧಾರಿ ರೈತ. ಬಹುತೇಕ ಸೈನಿಕರು ರೈತ ಕುಟುಂಬದವರು. ಸೇನಾ ಉದ್ಯೋಗವು ಲಕ್ಷಾಂತರ ರೈತ ಕುಟುಂಬಗಳ ಗೌರವ ಮತ್ತು ಆರ್ಥಿಕ ಶಕ್ತಿಯೊಂದಿಗೆ ಸಂಬಂಧ ಹೊಂದಿದೆ. "ಒಂದು ಶ್ರೇಣಿ ಒಂದು ಪಿಂಚಣಿ' ಎಂಬ ಆಶ್ವಾಸನೆಯೊಂದಿಗೆ ಮಾಜಿ ಸೈನಿಕರನ್ನು ಒಗ್ಗೂಡಿಸಿ ವಿಜಯಯಾತ್ರೆ ಆರಂಭಿಸಿದ ಪ್ರಧಾನಿ ನರೇಂದ್ರ ಮೋದಿ ಇದೀಗ ಈ 'ಶ್ರೇಣಿ ಇಲ್ಲ-ಪಿಂಚಣಿ ಇಲ್ಲ' ಯೋಜನೆಗೆ ಚಾಲನೆ ನೀಡಿರುವುದು ದೇಶಕ್ಕೆ ನಾಚಿಕೆಗೇಡಿನ ಸಂಗತಿ. ಸೇನೆಯಲ್ಲಿ ನಿಯಮಿತ ನೇಮಕಾತಿಗೆ ಭಾರೀ ಕಡಿವಾಣ ಹಾಕಿರುವುದು ಹಲವು ವರ್ಷಗಳಿಂದ ಸೇನೆಯಲ್ಲಿ ಸೇವೆ ಸಲ್ಲಿಸುವ ಕನಸನ್ನು ನನಸು ಮಾಡಿಕೊಳ್ಳುವ ನಿರೀಕ್ಷೆಯಿಟ್ಟುಕೊಂಡಿದ್ದ ರೈತ ಪುತ್ರರಿಗೆ ಮಾಡಿದ ದ್ರೋಹ. ಈ ಯೋಜನೆಯಲ್ಲಿ, "ಅಖಿಲ ಭಾರತ ಅಖಿಲ ದರ್ಜೆ" ನಿಯಮದಡಿಯಲ್ಲಿ ನೇಮಕಾತಿ ಮಾಡುವುದರಿಂದ ರೈತ ಚಳುವಳಿ ಹೆಚ್ಚು ಸಕ್ರಿಯವಾಗಿರುವ ಪ್ರದೇಶಗಳ ನೇಮಕಾತಿಯಲ್ಲಿ ದೊಡ್ಡ ಕಡಿತ ಉಂಟಾಗುತ್ತದೆ ಎಂಬುದು ಕಾಕತಾಳೀಯವಲ್ಲ. ರೈತ ಚಳವಳಿಯ ಸೋಲಿನಿಂದ ಕಂಗೆಟ್ಟಿರುವ ಈ ಸರ್ಕಾರ ರೈತರ ಮೇಲೆ ಸೇಡು ತೀರಿಸಿಕೊಳ್ಳಲು ಮತ್ತೊಂದು ತಂತ್ರ ಹೂಡಿದೆ ಎಂದು ಎಸ್‌ಕೆಎಂ ಹೇಳಿದೆ.

ಅಗ್ನಿವೀರ್ ನೇಮಕಾತಿ ಆರಂಭದ ದಿನವಾದ ಜೂನ್ 24 ಶುಕ್ರವಾರದಂದು ಯೋಜನೆಯ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನಾ ದಿನವನ್ನು ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ. ಅಂದು "ಜೈ ಜವಾನ್ ಜೈ ಕಿಸಾನ್" ಘೋಷಣೆಯೊಂದಿಗೆ ಎಲ್ಲಾ ಜಿಲ್ಲೆ, ತಹಸಿಲ್ ಅಥವಾ ಬ್ಲಾಕ್ ಮುಖ್ಯಕಚೇರಿಗಳಲ್ಲಿ ಶಾಂತಿಯುತ ಪ್ರದರ್ಶನಗಳನ್ನು ಆಯೋಜಿಸಿದ ನಂತರ ಭಾರತದ, ಸಶಸ್ತ್ರ ಪಡೆಗಳ ಸರ್ವೋಚ್ಚ ಕಮಾಂಡರ್ ಆಗಿರುವ ರಾಷ್ಟ್ರಪತಿಗಳಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಲಾಗುವುದು ಮತ್ತು ಕೇಂದ್ರ ಸರ್ಕಾರದ ಪ್ರತಿಕೃತಿಯನ್ನು ಸುಡಲಾಗುವುದು. ಈ ಯೋಜನೆಯನ್ನು ವಿರೋಧಿಸುವ ಎಲ್ಲಾ ಯುವಕರು ಈ ಶಾಂತಿಯುತ ಪ್ರತಿಭಟನೆಯ ಘನತೆಯನ್ನು ಗೌರವಿಸುತ್ತ ಈ ಪ್ರತಿಭಟನಾ ದಿನದಲ್ಲಿ ಪಾಲ್ಗೊಳ್ಳುವಂತೆ ಸಂಯುಕ್ತ ಕಿಸಾನ್ ಮೋರ್ಚಾ ಮನವಿ ಮಾಡಿದೆ. ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ದೇಶದ ಎಲ್ಲಾ ಸಾಮೂಹಿಕ ಸಂಘಟನೆಗಳು, ಜನಾಂದೋಲನಗಳು ಮತ್ತು ರಾಜಕೀಯ ಪಕ್ಷಗಳಿಗೆ ಎಸ್‌ಕೆಎಂ ಮನವಿ ಮಾಡಿದೆ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕಾವಾರು ಒಕ್ಕೂಟಗಳು, ಕಾರ್ಮಿಕರೂ ದೇಶದ ರೈತರೊಂದಿಗೆ ಈ ಪ್ರತಿಭಟನೆಯಲ್ಲಿ ಕೈಜೋಡಿಸುವುದಾಗಿ ಘೋಷಿಸಿವೆ.

"ನಿಗದಿತ ಅವಧಿಯ ಗುತ್ತಿಗೆ' ಮೂಲಕ ದೇಶದ ಸಶಸ್ತ್ರ ಪಡೆಗಳಲ್ಲೂ ಉದ್ಯೋಗದ ಗುಣಮಟ್ಟವನ್ನು ಇಳಿಸಲು ಮತ್ತು ಕ್ಯಾಶುವಲ್ ಸ್ವರೂಪಕ್ಕೆ ತರಲು ರೂಪಿಸುವ ಹುನ್ನಾರದ ಸ್ಕೀಮ್ ಇದು ಎಂದು ಅವು ಹೇಳಿವೆ. ಈ ಹೊಸ ಧೋರಣೆ ನಮ್ಮ ಮಿಲಿಟರಿ ವ್ಯವಸ್ಥೆಯನ್ನು ದರ್ಬಲಗೊಳಿಸುವುದಲ್ಲದೆ, ಒಟ್ಟಾರೆ ಸಮಾಜಕ್ಕೂ ಅಪಾಯವುಂಟಮಾಡುತ್ತದೆ ಎಂದು ನಿವೃತ್ತ ಸೇನಾಧಿಕಾರಿಗಳು ಹೇಳುತ್ತಿರುವ ಸಂಗತಿಯತ್ತ ಅವು ತಮ್ಮ ಜಂಟಿ ಹೇಳಿಕೆಯಲ್ಲಿ ಗಮನ ಸೆಳೆದಿವೆ. ಯುವಜನರ ಪ್ರತಿಭಟನೆಗಳ ನಂತರ ರಕ್ಷಣಾ ಮಂತ್ರಾಲಯ ನಾಲ್ಕು ವರ್ಷಗಳ ನಂತರ ಉದ್ಯೋಗದಿಂದ ಹೊರ ಹೋಗುವ 'ಅಗ್ನಿವೀರ'ರಿಗೆ ತನ್ನ ಎಲ್ಲ 16 ಉದ್ದಿಮೆಗಳಲ್ಲಿ 10% ಮೀಸಲಾತಿ ಘೋಷಿಸಿದೆ, ಆದರೆ ಅದೇ ಸರಕಾರ ಈಗಾಗಲೇ ಈ ಉದ್ದಿಮೆಗಳನ್ನು ಖಾಸಗೀಕರಿಸುವ ಅಥವ ಅದರ ಕೆಲಸಗಳನ್ನು ಹೊರಗುತ್ತಿಗೆ ಕೊಡುವ ಧಾವಂತದಲ್ಲಿದೆ ಎಂದು ಕಾರ್ಮಿಕ ಮುಖಂಡರು ನೆನಪಿಸಿದ್ದಾರೆ.

ಯಶವಂತ ಸಿನ್ಹ -ರಾಷ್ಟ್ರಪತಿ ಸ್ಥಾನಕ್ಕೆ ಪ್ರತಿಪಕ್ಷಗಳ ಒಮ್ಮತದ ಅಭ್ಯರ್ಥಿ

ಜುಲೈ 18 ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗಳಲ್ಲಿ ಎಡಪಕ್ಷಗಳು ಸೇರಿದಂತೆ ಜಾತ್ಯತೀತ ಪ್ರತಿಪಕ್ಷಗಳು ಶ್ರೀ ಯಶವಂತ ಸಿನ್ಹ ರವರನ್ನು ತಮ್ಮ ಒಮ್ಮತದ ಅಭ್ಯರ್ಥಿಯಾಗಿ ನಿಲ್ಲಿಸಲು ನಿರ್ಧರಿಸಿವೆ. ಈ ಮೊದಲು ತಮ್ಮ ಜೂನ್ 15ರ ಸಭೆಯಲ್ಲಿ "ಭಾರತದ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ವರ್ಷದಲ್ಲಿ ನಡೆಯಲಿರುವ ಈ ಚುನಾವಣೆಯಲ್ಲಿ ನಿಜವಾಗಿಯೂ ಸಂವಿಧಾನದ ರಕ್ಷಕರಾಗಿ ಕೆಲಸ ಮಾಡಬಲ್ಲ ಮತ್ತು ಮೋದಿ ಸರಕಾರ ಭಾರತೀಯ ಪ್ರಭುತ್ವಕ್ಕೆ ಮತ್ತು ಅದರ ಸಾಮಾಜಿಕ ಹಂದರಕ್ಕೆ ಮತ್ತಷ್ಟು ಹಾನಿ ಮಾಡದಂತೆ ತಡೆಯಬಲ್ಲ ಒಮ್ಮತದ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಲು ನಿರ್ಧರಿಸಿದ್ದವು.

"ತಮ್ಮ ದೀರ್ಘ ಮತ್ತು ಗೌರವಶಾಲೀ ಸಾರ್ವಜನಿಕ ಜೀವನದಲ್ಲಿ, ವಿವಿಧ ಸ್ಥಾನಗಳಲ್ಲಿ-ಆಡಳಿತಗಾರರಾಗಿ, ಸಂಸದೀಯ ಪಟ್ಟುವಾಗಿ ಮತ್ತು ಹಣಕಾಸು ಹಾಗೂ ವಿದೇಶಾಂಗ ವ್ಯವಹಾರಗಳ ಕೇಂದ್ರ ಮಂತ್ರಿಯಾಗಿ ಶ್ರೀ ಯಶವಂತ ಸಿನ್ಹ ದೇಶಕ್ಕೆ ಸೇವೆ ಸಲ್ಲಿಸಿದ್ದಾರೆ" ಎಂದು ಜೂನ್ 21 ರಂದು ಸಭೆ ಸೇರಿದ ತಮ್ಮ ಜಂಟಿ ಹೇಳಿಕೆಯಲ್ಲಿ ತಿಳಿಸಿರುವ ಈ ಪಕ್ಷಗಳ ಮುಖಂಡರು, ಇವರು ಭಾರತೀಯ ಗಣತಂತ್ರದ ಮತ್ತು ಅದರ ಸಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯಬಲ್ಲವರಾಗಿದ್ದಾರೆ ಎಂದಿದ್ದಾರೆ.

ಗಣತಂತ್ರದ ಈ ಅತ್ಯುನ್ನತ ಹುದ್ದೆಗೆ ಸರಕಾರ ಮತ್ತು ಪ್ರತಿಪಕ್ಷಗಳ ಒಮ್ಮತದ ಅಭ್ಯರ್ಥಿಯೊಬ್ಬರನ್ನು ಆಯ್ಕೆಮಾಡಬೇಕಾಗಿತ್ತು. ಮತ್ತು ಇದಕ್ಕೆ ಸರಕಾರ ಮುತುವರ್ಜಿ ವಹಿಸಬೇಕಾಗಿತ್ತು. ಮೋದಿ ಸರಕಾರ ಈ ದಿಕ್ಕಿನಲ್ಲಿ ಯಾವುದೇ ಗಂಭೀರ ಪ್ರಯತ್ನ ನಡೆಸಲಿಲ್ಲ ಎಂದು ಖೇದ ವ್ಯಕ್ತಪಡಿಸಿರುವ ಪ್ರತಿಪಕ್ಷಗಳ ಮುಖಂಡರು, ಇದರಿಂದಾಗಿ ಶ್ರೀ ಯಶವಂತ ಸಿನ್ಹರನ್ನು ಬೆಂಬಲಿಸಿ ಒಬ್ಬ ಸುಯೋಗ್ಯ ರಾಷ್ಟ್ರಪತಿಯವರನ್ನು ಅವಿರೋಧವಾಗಿ ಚುನಾಯಿಸಬೇಕು ಎಂದು ಎಲ್ಲ ಪಕ್ಷಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಭಾರತ ಒಂದು ಕಠಿಣ ಸಮಯವನ್ನು ಹಾದು ಹೋಗುತ್ತಿರುವ ಸಮಯದಲ್ಲಿ ರಾಷ್ಟ್ರಪತಿ ಚುನಾವಣೆಗಾಗಿ ಸಮಾನತೆ, ಸಮಾನ ಬದ್ಧತೆ ಮತ್ತು ಸಂವಾದಗಳಿಂದ ಒಮ್ಮತದ ರೂಪೀಕರಣದ ಭಾವದಿಂದ ಬೆಸೆದ ಪ್ರತಿಪಕ್ಷಗಳ ಐಕ್ಯತೆಯನ್ನು ಮುಂಬರುವ ತಿಂಗಳುಗಳಲ್ಲಿ ಮತ್ತಷ್ಟು ಕ್ರೋಡೀಕರಿಸಲಾಗುವುದು ಎಂದು ಜನತೆಗೆ ಈ ಜಾತ್ಯತೀತ ಪಕ್ಷಗಳ ಮುಖಂಡರು ತಮ್ಮ ಹೇಳಿಕೆಯಲ್ಲಿ ಆಶ್ವಾಸನೆ ನೀಡಿದ್ದಾರೆ. ಅಂದೇ ಯಶವಂತ ಸಿನ್ಹರವರ ಪ್ರಚಾರ ಕಾರ್ಯದ ಉಸ್ತುವಾರಿಗೆ ಒಂದು ಸಮಿತಿಯನ್ನು ರಚಿಸಿರುವುದಾಗಿ ಈ ಹೇಳಿಕೆ ತಿಳಿಸಿದೆ.

ಎರಡು ತತ್ವಸಿದ್ಧಾಂತಗಳ ನಡುವಿನ ಸಮರ-ಯಶವಂತ ಸಿನ್ಹ



ತಮ್ಮನ್ನು ಅಭ್ಯರ್ಥಿಯಾಗಿ ಆರಿಸಿ ವಿಶ್ವಾಸ ತೋರಿದ್ದಕ್ಕಾಗಿ ಅಭಿವಂದಿಸುತ್ತ ಶ್ರೀ ಯಶವಂತ ಸಿನ್ಹ, ಚುನಾಯಿತರಾದರೆ ತಾವು ಭಾರತೀಯ ಸಂವಿಧಾನದ ಮೂಲ ಮೌಲ್ಯಗಳನ್ನು ಮತ್ತು ಮಾರ್ಗದರ್ಶಕ ಆದರ್ಶಗಳನ್ನು ಪ್ರಜ್ಞಾಪೂರ್ವಕವಾಗಿ ಎತ್ತಿ ಹಿಡಿಯುವುದಾಗಿ ಭಾರತದ ಜನತೆಗೆ ಆಶ್ವಾಸನೆ ನೀಡಿದ್ದಾರೆ., ಕಾರ್ಯಾಂಗ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ದೀಪವನ್ನು ಮಖುಗೊಳಿಸಲು ಬಿಡುವುದಿಲ್ಲ ಎಂದಿರುವ ಯಶವಂತ ಸಿನ್ಹ..

ಬಿಜೆಪಿ ತನ್ನ ಅಭ್ಯರ್ಥಿಯಾಗಿ ಆರಿಸಿರುವ ಶ್ರೀಮತಿ ದ್ರೌಪದಿ ಮುರ್ಮು ಬಗ್ಗೆ ತನಗೆ ಬಹಳ ಗೌರವ ಭಾವನೆಯಿದೆ, ಆದರೆ ಇದು ಇಬ್ಬರು ವ್ಯಕ್ತಿಗಳ ನಡುವಿನ ಸ್ಪರ್ಧೆಯಲ್ಲ, ಎರಡು ತತ್ವಸಿದ್ಧಾಂತಗಳ ನಡುವಿನ ಸಮರ ಎಂದು ಸಿನ್ಹ ಹೇಳಿದರು. ಒಂದು ತತ್ವಸಿದ್ಧಾಂತದ ಮುಖಂಡರು ಸಂವಿಧಾನದ ಕತ್ತು ಹಿಸುಕಲು ಟೊಂಕ ಕಟ್ಟಿದ್ದಾರೆ. ಭಾರತದ ರಾಷ್ಟ್ರಪತಿ ತನ್ನ ಸ್ವಂತ ಮನಸ್ಸಿನಿಂದ ಕಾರ್ಯನಿರ್ವಹಿಸ ಬಾರದು, ಸರಕಾರ ಹೇಳಿದಂತೆ ಕೇಳಿಕೊಂಡು ರಬ್ಬರ್ ಸ್ಟಾಂಪಿನಂತೆ ಇರಬೇಕು ಎಂದು ಅವರು ನಂಬುತ್ತಾರೆ. ನಾನು, ಸಂವಿಧಾನ ಮತ್ತು ಹಗಣತಂತ್ರವನ್ನು ಉಳಿಸಲು ದೃಢನಿರ್ಧಾರ ಮಾಡಿರುವ ತತ್ವ ಸಿದ್ಧಾಂತಕ್ಕೆ ಸೇರಿದವನೆಂಬ ಹೆಮ್ಮೆ ನನಗಿದೆ ಎಂದು ಯಶವಂತ ಸಿನ್ಹ ಜೂನ್ 22ರಂದು ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಿರುದ್ಯೋಗಿ ಯುವಜನರ ಆಕಾಂಕ್ಷೆಗಳನ್ನು ಗುರುತಿಸಿ-ಸಶಸ್ತ್ರ ಪಡೆಗಳನ್ನು ದುರ್ಬಲಗೊಳಿಸುವುದನ್ನು ನಿಲ್ಲಿಸಿ" -ಎಐಕೆಎಸ್

ದೇಶದ ಸಶಸ್ತ್ರ ಪಡೆಗಳಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ತರಬೇಕೆಂದಿರುವ "ಅಗ್ನಿಪಥ್" ಯೋಜನೆ ದೇಶವಿರೋಧಿ ಮತ್ತು ಜನವಿರೋಧಿ ನಡೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಖಂಡಿಸಿದೆ. ಇದು, ಸಶಸ್ತ್ರ ಪಡೆಗಳಲ್ಲಿ ಉದ್ಯೋಗಗಳ ಕ್ಯಾಶುವಲೀಕರಣವನ್ನು ಕಳ್ಳತನದಿಂದ ತರಬೇಕೆಂದಿರುವುದನ್ನು ಅತಿ-ರಾಷ್ಟ್ರವಾದೀ ವಾಕ್ಚಾತುರ್ಯದಿಂದ ಮರೆಮಾಚುವ ಯೋಜನೆ ಎಂಬುದು ತನ್ನ ದೃಢ ಅಭಿಪ್ರಾಯ ಎಂದಿರುವ ಎಐಕೆಎಸ್, ಇದು ಭಾರತದ ಯುವಕರಿಗೆ ಉದ್ಯೋಗ ಒದಗಿಸುವಲ್ಲಿ ತನ್ನ ವೈಫಲ್ಯವನ್ನು ಮರೆಮಾಚುವ ಹತಾಶ ಪ್ರಯತ್ನ ಕೂಡ ಆಗಿದೆ ಎಂದು ಹೇಳಿದೆ. ಇದು ಸಶಸ್ತ್ರ ಪಡೆಗಳಲ್ಲಿ ವೃತ್ತಿಪರತೆ, ಉದ್ಯೋಗದ ಗುಣಮಟ್ಟ ಮತ್ತು ದಕ್ಷತೆಯ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರಲಿದೆ. ಪ್ರತಿಭಟನಾಕಾರರ ವಿರುದ್ಧ ಬಿಜೆಪಿ-ಆರ್‌ಎಸ್‌ಎಸ್ ಅಪಪ್ರಚಾರ ನಡೆಸುತ್ತಿವೆ ಮತ್ತು ಸರಕಾರ ವಿವೇಚನಾರಹಿತ ಬಲಪ್ರಯೋಗದಿಂದ ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದೆ ಎಂದು ಎಐಕೆಎಸ್ ಬಲವಾಗಿ ಖಂಡಿಸಿದೆ. ಈ ಕ್ರಮವು ಸುರಕ್ಷಿತ ಉದ್ಯೋಗಗಳನ್ನು ಪಡೆಯುವ ಬಹಳಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿರುವ ಲಕ್ಷಾಂತರ ನಿರುದ್ಯೋಗಿ ಯುವಕರ ಆಕಾಂಕ್ಷೆಗಳನ್ನು ಅವಮಾನಿಸುವ ಈ ನಡೆ, ನಮ್ಮ ದೇಶದ ಸಶಸ್ತ್ರ ಪಡೆಗಳನ್ನು ದುರ್ಬಲಗೊಳಿಸುತ್ತದೆ ಕೂಡ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

2014ರಲ್ಲಿ, ಪ್ರತಿ ವರ್ಷ 2 ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿದ ಸರಕಾರ ಇದೀಗ ಪಿಂಚಣಿ ನೀಡದೆ ನಿಗದಿತ ಅವಧಿಯ ಒಪ್ಪಂದ (ನಾಲ್ಕು ವರ್ಷ) ಘೋಷಣೆ ಮಾಡುವ ಮೂಲಕ ನಿರುದ್ಯೋಗಿ ಯುವಕರನ್ನು ಮೂರ್ಖರನ್ನಾಗಿಸಲು ಯತ್ನಿಸುತ್ತಿದೆ. ಐತಿಹಾಸಿಕವಾಗಿ ಸಶಸ್ತ್ರ ಪಡೆಗಳಲ್ಲಿ ಇರುವ ಸೈನಿಕರಲ್ಲಿ ಬಹುಪಾಲು ರೈತ ಕುಟುಂಬಗಳಿಂದ ಬಂದಿರುವ ಯುವಕರು. ರೈತರು ಮತ್ತು ಸಶಸ್ತ್ರ ಪಡೆಗಳ ನಡುವಿನ ಈ ಐತಿಹಾಸಿಕ ಮತ್ತು ಸಾವಯವ ಸಂಬಂಧ ಕಠೋರವಾದ ಕೃಷಿ ಕಾನೂನುಗಳ ವಿರುದ್ಧ ಐತಿಹಾಸಿಕ ಪುಟ 6 ಕ್ಕೆ

ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣದ ಪ್ರಕ್ರಿಯೆ ದುರ್ಬಲವಾಗದಿರಲಿ

ಸಂಪಾದಕೀಯ

ಸುಪ್ರೀಂಕೋರ್ಟಿನ ನಿರ್ದೇಶನ ಮತ್ತು ಅದನ್ನು ಅನುಸರಿಸಿ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಂತೆ ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಮತ್ತು ಬೆಂಗಳೂರು ಬೃಹತ್ ನಗರಪಾಲಿಕೆಗೆ ಚುನಾವಣೆಗಳನ್ನು ಕೂಡಲೇ ನಡೆಸುವ ಹೊಣೆಗಾರಿಕೆ ಕರ್ನಾಟಕ ಚುನಾವಣಾ ಆಯೋಗ ಮತ್ತು ಕರ್ನಾಟಕ ಸರ್ಕಾರದ ಹೆಗಲ ಮೇಲಿದೆ. ಈ ಚುನಾವಣೆಗಳನ್ನು ಇನ್ನು ಹನ್ನೆರಡು ವಾರಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ನ್ಯಾಯಾಲಯವು ಗಡುವು ವಿಧಿಸಿದೆ. ಅದರಂತೆ ಈ ಕೂಡಲೇ ಕ್ಷೇತ್ರಗಳ ಪುನರ್ವಿಂಗಡನೆ ಮತ್ತು ಮೀಸಲಾತಿ ಹಂಚಿಕೆಯ ಪಟ್ಟಿಯನ್ನು ಸಿದ್ಧಗೊಳಿಸಿ ಚುನಾವಣಾ ಪ್ರಕ್ರಿಯೆಗೆ ಚಾಲನೆಯನ್ನು ಕೊಡಬೇಕಿದೆ.

ಜನತೆಯ ಕೈಗೆ ಅಧಿಕಾರವನ್ನು ನೀಡುವ ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣದ ಅತ್ಯಂತ ಮಹತ್ವದ ಕರ್ತವ್ಯವನ್ನು ಯಶಸ್ವಿಯಾಗಿ ನೆರವೇರಿಸುವಲ್ಲಿ ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸಂವಿಧಾನಾತ್ಮಕ ಕರ್ತವ್ಯವನ್ನು ಅದು ನಿರ್ವಹಿಸಿಲ್ಲ. ಈ ಚುನಾವಣೆಗಳು ಕಳೆದ ವರ್ಷವೇ 2021 ರಲ್ಲೇ ನಡೆದು ನೂತನ ಸಮಿತಿಗಳು ಮತ್ತು ನಾಯಕತ್ವ ಅಧಿಕಾರ ವಹಿಸಿಕೊಳ್ಳಬೇಕಿತ್ತು. ಆದರೆ ಅಂತಹ ಯಾವುದೇ ರಾಜಕೀಯ ಇಚ್ಛಾಶಕ್ತಿ ಇಲ್ಲದ್ದರಿಂದ ಈ ಪ್ರಕ್ರಿಯೆಯನ್ನು ಅನೇಕ ನೆಪಗಳನ್ನೊಡ್ಡಿ ವಿಳಂಬಿಸುತ್ತಾ ಬಂದದ್ದು ಅತ್ಯಂತ ಖಂಡನೀಯ. ಸರಕಾರದ ನಿರ್ಲಕ್ಷ್ಯತನದಿಂದಾಗಿ ಹಿಂದುಳಿದ ವರ್ಗಗಳು ಮೀಸಲಾತಿಯನ್ನು ಕಳೆದುಕೊಳ್ಳುವ ಒಂದು ಅಪಾಯಕಾರಿ ಸನ್ನಿವೇಶವೂ ನಿರ್ಮಾಣಗೊಂಡಿತ್ತು ಎನ್ನುವುದನ್ನು ಮರೆಯುವಂತಿಲ್ಲ. ಎಲ್ಲವುಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಮತ್ತು ಕರ್ನಾಟಕ ಸರಕಾರದ ಆಡಳಿತ ಅತ್ಯಂತ ತ್ವರಿತವಾಗಿ ಮತ್ತು ಸಮರ್ಥವಾಗಿ ಕ್ಷೇತ್ರಗಳ ಪುನರ್ ವಿಂಗಡನೆ ಮತ್ತು ಮೀಸಲಾತಿ ಪಟ್ಟಿಯನ್ನು ರೂಪಿಸಿ ಮಂಡಿಸಬೇಕಿದೆ.

ಜನತೆಯ ಕೈಗೆ ಅಧಿಕಾರವನ್ನು ನೀಡುವ ಇಂತಹ ಮಹತ್ವದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಬಲಗೊಳಿಸುವುದು ಆಡಳಿತರೂಢ ಬಿಜೆಪಿಗೆ ಸುತರಾಂ ಇಚ್ಛೆಯಿಲ್ಲ ಎನ್ನುವುದನ್ನು ಪ್ರತಿಹಂತದಲ್ಲೂ ತೋರಿಸಿದೆ. ಅದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡುವಿಕೆಯನ್ನು ತಾತ್ವಿಕವಾಗಿ ಸಹ ಒಪ್ಪುವುದಿಲ್ಲ. ಈ ಸಂಸ್ಥೆಗಳು ಅದಕ್ಕೆ ಏನಿದ್ದರೂ ಕೇವಲ ತನ್ನ ರಾಜಕೀಯ ಅಧಿಕಾರವನ್ನು ಹಿಡಿಯುವ ಒಂದು ಸಾಧನ ಎಂದಷ್ಟೇ ನೋಡುತ್ತದೆ. ಈ ಕಾರಣದಿಂದಾಗಿಯೂ ಈಗಿರುವ ಹಾಲಿ ವ್ಯವಸ್ಥೆಯಲ್ಲಿ ಚುನಾವಣೆಗಳು ನಡೆದರೆ ತಾನು ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎನ್ನುವ ರಾಜಕೀಯ ಸಂಕುಚಿತತೆ ಉದ್ದೇಶ ಗೊಂದಲ ಹುಟ್ಟುಹಾಕುವಲ್ಲಿ ಮತ್ತು ವಿಳಂಬಿ ಸುವುದರ ಹಿಂದೆ ಇಲ್ಲದಿಲ್ಲ. ಬಿ.ಬಿ.ಎಂ.ಪಿ. ಪ್ರದೇಶ ವ್ಯಾಪ್ತಿಯಲ್ಲಿನ ಕ್ಷೇತ್ರಗಳ ಪುನರ್ವಿಂಗಡಣೆಯಲ್ಲಿ ತನ್ನ ಬಲ ಇರುವ ಪ್ರದೇಶಗಳನ್ನು ಒಟ್ಟಿಗೆ ಮಾಡುವ ವಿರೋಧಪಕ್ಷಗಳು ಬಲ ಇರುವಲ್ಲಿ ಅವುಗಳನ್ನು ದುರ್ಬಲಗೊಳಿಸುವ ಹಂಚಿಕೆ ಇದೆ ಎನ್ನುವ ದೂರುಗಳು ಕೇಳಿ ಬರುತ್ತಿವೆ. ಮೀಸಲಾತಿ ಹಂಚಿಕೆಯು ಇಂತಹದೇ ಲೆಕ್ಕಾಚಾರಗಳಿಂದ ಹೊರತಾಗಿ ಇರುವುದಿಲ್ಲ ಎನ್ನುವ ಅಭಿಪ್ರಾಯಗಳು ಇವೆ.

ಹಲವಾರು ಪ್ರಾದೇಶಿಕ ವೈಶಿಷ್ಟಗಳು, ವಿಭಿನ್ನತೆಗಳು ಇರುವ ಒಕ್ಕೂಟ ವ್ಯವಸ್ಥೆಯ ಭಾರತದಲ್ಲಿ ಅವೆಲ್ಲವನ್ನೂ ಮೂಲೆಗೆ ತಳ್ಳುವಂತೆ ಒಂದು ರಾಷ್ಟ್ರ ಒಂದು ಚುನಾವಣೆ ಯಂತಹ ಏಕಸ್ವಾಮ್ಯ ಸರ್ವಾಧಿಕಾರತ್ವದ ಚುನಾವಣೆಯ ಸ್ವರೂಪವನ್ನು ಹೇರುವುದಕ್ಕೆ ಹಂಬಲಿಸುತ್ತಿರುವ ಬಿಜೆಪಿಗೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ತದ್ವಿರುದ್ಧವಾಗಿವೆಯೇ ಕಾಣುತ್ತದೆ. ತಳ ಹಂತದಿಂದಲೂ ಜನತೆಯ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ಮತ್ತು ಪ್ರಜಾಪ್ರಭುತ್ವವನ್ನು ಬಲಗೊಳಿಸುತ್ತಾ ಒಂದು ಅತ್ಯಂತ ಬಲಿಷ್ಠ ವ್ಯವಸ್ಥೆಯನ್ನಾಗಿ ರೂಪಿಸುವುದಕ್ಕೆ ಅದು ಖಂಡಿತ ಸಿದ್ಧವಿಲ್ಲ. ರಾಜ್ಯಗಳಿಗೆ ಸಿಗಬೇಕಾದ ಸಂಪನ್ಮೂಲಗಳನ್ನು ನೀಡದೇ ಸೊರಗುವಂತೆ ಕೇಂದ್ರದ ಬಿಜೆಪಿ ನೋಡಿಕೊಳ್ಳುತ್ತಿದೆ. ಹೇಗೆ ದುರ್ಬಲ ರಾಜ್ಯಗಳು ಕೇಂದ್ರದ ಅಧೀನವಾಗಿ ಇರಬೇಕೆಂದು ಬಯಸುತ್ತದೆಯೋ ಹಾಗೆಯೇ ಪಂಚಾಯತ್ ಮತ್ತು ಸ್ಥಳೀಯ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ನೋಡುತ್ತದೆ. ಹೀಗಾಗಿಯೇ ಪಂಚಾಯತಿಗಳಿಗೆ ಅಗತ್ಯವಿರುವಷ್ಟು ಸಂಪನ್ಮೂಲವನ್ನು ನೀಡಿ ಅಭಿವೃದ್ಧಿಯಾಗುವಂತೆ ನೋಡುವುದಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆ ಅಥವಾ ಆಡಳಿತ ವಿಕೇಂದ್ರೀಕರಣದ ಒಟ್ಟು ವ್ಯವಸ್ಥೆಯನ್ನು ಅದು ತನ್ನ ವೋಟ್ ಬ್ಯಾಂಕಿನ ಉಪಕರಣವೆಂದು ಮತ್ತು ಇವುಗಳ ಹೆಸರಿನಲ್ಲಿ ಮೀಸಲಿಡುವ ಅಪಾರ ಹಣ ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ಒಂದು ಕ್ಷೇತ್ರವೆಂದು ಅದು ಭಾವಿಸಿದೆ. ಪಂಚಾಯತ್ ರಾಜ್ ಇಲಾಖೆಯಲ್ಲಿ ಶೇ 40ರಷ್ಟು ಕಮಿಷನ್ ಬಾಚುವ ಭ್ರಷ್ಟ ದಂದೆಯಲ್ಲಿ ಪಂಚಾಯತ್ ರಾಜ್ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅಧಿಕಾರ ಕಳೆದುಕೊಂಡದ್ದು ಬಿಜೆಪಿಯ ಅನೈತಿಕತೆಗೆ ಇತ್ತೀಚಿನ ಜ್ವಲಂತ ಉದಾಹರಣೆ. ಹೀಗಿರುವಾಗಲೂ ನ್ಯಾಯಾಲಯಗಳ ನಿರ್ದೇಶನ ಮತ್ತು ಜನತೆಯ ಒತ್ತಡದ ಕಾರಣಗಳಿಂದ ಚುನಾವಣೆ ನಡೆಸುವುದು ಅದಕ್ಕೆ ಅತ್ಯಂತ ಅನಿವಾರ್ಯವಾಗಿದೆ.

ಹೀಗೆ ಪ್ರಜಾಸತ್ತಾತ್ಮಕ ಆಡಳಿತ ವಿಕೇಂದ್ರೀಕರಣದ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಮತ್ತು ಸ್ಥಾಪಿತ ಹಿತಾಸಕ್ತಿಗಳ ಕೈಗೊಂಬೆಯನ್ನಾಗಿಸುವ ಹುನ್ನಾರಗಳ ಎದುರು ರಾಜ್ಯದ ಜನತೆ ಅತ್ಯಂತ ಜಾಗರೂಕವಾಗಬೇಕಿದೆ. ಮುಖ್ಯವಾಗಿ, ಕ್ಷೇತ್ರಗಳ ಪುನರ್ ವಿಂಗಡನೆ ನ್ಯಾಯ ಸಮ್ಮತವಾಗಿ ಆಗುವಂತೆ ಮತ್ತು ಮೀಸಲಾತಿ ಪಟ್ಟಿಯು ಸಂವಿಧಾನಾತ್ಮಕ ಮೌಲ್ಯಗಳ ಆಧಾರದಲ್ಲಿ ಆಗುವಂತೆ ಎಚ್ಚರವನ್ನು ವಹಿಸಬೇಕಾಗಿದೆ. ಇಡೀ ಚುನಾವಣಾ ಪ್ರಕ್ರಿಯೆಯನ್ನೇ ಜಾತಿ, ಕೋಮು ಧೃವೀಕರಣ, ಅಪಾರ ಹಣ,ಆಮಿಷಗಳ ಮೂಲಕ ಬುಡ ಮೇಲು ಗೊಳಿಸಬಹುದಾದ ಸಾಧ್ಯತೆಗಳನ್ನು ಗಮನದಲ್ಲಿರಿಸಿ ಮತದಾರರ ಪಟ್ಟಿಯ ಪರಿಷ್ಕರಣೆ ಇಂದ ಹಿಡಿದು ಪ್ರತಿ ಹಂತದಲ್ಲೂ ಎಚ್ಚರಿಕೆಯ ಕ್ರಮಗಳು ಅವಶ್ಯಕ. ಜೊತೆಗೆ ಈ ಚುನಾವಣೆಯಲ್ಲಿ ಪ್ರಜಾಸತ್ತಾತ್ಮಕ ,ಪ್ರಗತಿಪರ ಶಕ್ತಿಗಳು ಅಧಿಕಾರ ವಿಕೇಂದ್ರೀಕರಣ ಮತ್ತು ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯನ್ನು ಪ್ರತಿಪಾದಿಸುವ ಮತ್ತು ಜನತೆಯ ಕೈಗೆ ಅಧಿಕಾರ ಮತ್ತು ಸಂಪನ್ಮೂಲಗಳ ಸದ್ಬಳಕೆ ಮಾಡಿ ಪ್ರಗತಿ ಸಾಧಿಸುವುದು ಮುಖ್ಯ.ಇಂತಹ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಎಲ್ಲ ಹಂತದಿಂದ ಸರ್ವರೀತಿಯಲ್ಲೂ ಶಕ್ತಿ ನೀಡಿ ಬಲ ತುಂಬುವ ಅದಕ್ಕಾಗಿ ಶ್ರಮಿಸುವ ಶಕ್ತಿಗಳು ಅಧಿಕಾರಕ್ಕೆ ಬರುವುದು ಅತ್ಯಂತ ಅವಶ್ಯಕತೆ ಇದೆ. ವಿಶೇಷವಾಗಿ ಇಂದು ರಾಜ್ಯಗಳ ಸಂಪನ್ಮೂಲಗಳನ್ನು ಹಿಂಡಿ ಹಿಪ್ಪೆ ಮಾಡುವ ಕೇಂದ್ರೀಕರಣದ ವ್ಯವಸ್ಥೆಯ ವಿರುದ್ಧವಾಗಿ ಪಂಚಾಯತರಾಜ್ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಅತಿ ಹೆಚ್ಚಿನ ಸಂಪನ್ಮೂಲ ಮತ್ತು ಆ ಕಾಯ್ದೆಯಲ್ಲಿ ಇರುವ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಅಧಿಕಾರಗಳನ್ನು ಸಂಪೂರ್ಣವಾಗಿ ನಿಜ ಅರ್ಥದಲ್ಲಿ ಬಳಸುವ ಬಲಗೊಳಿಸುವುದೂ ಅಷ್ಟೇ ಮುಖ್ಯವಾಗಿದೆ. ಈ ಚುನಾವಣೆಗಳು ರಾಜಕೀಯ ಪಕ್ಷಗಳ ಚಿಹ್ನೆಗಳ ಆಧಾರದಲ್ಲಿ ನಡೆಯುತ್ತಿರುವುದರಿಂದ ಜನತೆ ಇಂದಿನ ಅತ್ಯಂತ ಭ್ರಷ್ಟ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳಿಗೆ ನೆಲೆ ದೊರೆಯದಂತೆ ಮಾಡುವುದು ಇಡೀ ಕರ್ನಾಟಕದ ಭವಿಷ್ಯದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಾಗಿದೆ.

ನಾಡು ಒಡೆಯುವ ಮಾತು ಬರೀ ಮಾತಲ್ಲವೋ!

ಈ ವಾರ

ಎಸ್.ವೈ. ಗುರುಶಾಂತ್

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗುವ ಬಗ್ಗೆ ಅರಣ್ಯ ಸಚಿವ ಉಮೇಶ್ ಕತ್ತಿ ಮತ್ತೆ ಮಾತನಾಡಿದ್ದಾರೆ. ಹೀಗೆ ಅವರು ಪ್ರತ್ಯೇಕ ರಾಜ್ಯದ ಬಗ್ಗೆ ಮಾತನಾಡುವುದು ಹೊಸದೇನಲ್ಲ. ಆದರೆ ಈ ಬಾರಿ ಅವರ ಹೇಳಿಕೆ ಕೆಲವು ಗಂಭೀರ ಅಂಶಗಳ ಮುನ್ಸೂಚನೆಯನ್ನು ಒಳಗೊಂಡಿದೆ. ಅವರು ಹೇಳುವಂತೆ '2024 ರ ಲೋಕಸಭಾ ಚುನಾವಣೆ ನಂತರ ಕರ್ನಾಟಕ ಎರಡು ರಾಜ್ಯಗಳಾಗುವುದು ಖಚಿತ. ಅಷ್ಟೇ ಅಲ್ಲ, ದೇಶದಲ್ಲಿ ಇಂತಹ 50 ಹೊಸ ರಾಜ್ಯಗಳು ಉದಯವಾಗಲಿವೆ. ಈ ಬಗ್ಗೆ ಚರ್ಚೆ ನಡೆದಿದ್ದು ಪ್ರಧಾನಿ ಮೋದಿಯವರೇ ಇವುಗಳನ್ನು ರಚನೆ ಮಾಡಲಿದ್ದಾರೆ' ಎಂದು ಹೇಳಿದ್ದಾರೆ. 'ಈ ಬಗ್ಗೆ ಯಾವುದೇ ಚರ್ಚೆ ತಮ್ಮಲ್ಲಿ ಇಲ್ಲ' ಎಂದು ಮುಖ್ಯಮಂತ್ರಿಗಳು ಸ್ಪಷ್ಟನೆ ನೀಡಿದ್ದಾರೆ. ನಿಜ, ಇದು ಇಂದೋ, ನಾಳೆಯೇ ಆಗಿ ಬಿಡುವ ನಿರ್ಧಾರವೇನೂ ಅಲ್ಲ. ಆದರೆ ಇಂತಹ ವಿಷಯ ಸಂಘಪರಿವಾರದ ವಲಯದಲ್ಲಿ ಜೀವಂತ ಇರುವುದರಲ್ಲಿ ಅನುಮಾನವೇ ಇಲ್ಲ.

ಉಮೇಶ ಕತ್ತಿಯವರ ಈ ಹೇಳಿಕೆ ಹಿಂದಿನಂತೆ ಕೇವಲ ಬೇಡಿಕೆಯ ಸ್ವರೂಪದಲ್ಲಿ ಇಲ್ಲ. ಬದಲಾಗಿ ಅದು ಈಡೇರುವ 'ಸುಳಿವು' ನೀಡಿದ್ದಾರೆ. ರಾಜ್ಯ ವಿಭಜನೆ ಮತ್ತು ಕತ್ತಿ ಮುಖ್ಯಮಂತ್ರಿಯಾಗುವುದು ಈಡೇರದ ಬೇಡಿಕೆ ಎಂದು ಭಾವಿಸಿದ ಬೆಂಬಲಿಗರಿಗೆ ಇಂತಹ ಮಾತುಗಳು ಒಂದಿಷ್ಟು ಭರವಸೆ ಹುಟ್ಟಿಸಲೂ ಬಹುದು. ಈ ಮೂಲಕ ವಿಭಜನೆಯ ಬೇಡಿಕೆಗೆ ಒಂದಿಷ್ಟು ಜೀವ ಕೊಡಲೂ ಬಹುದು. ಕೆಲವು ಪ್ರಾದೇಶಿಕ ಪಾಳೇಗಾರಿ ಶಕ್ತಿಗಳು ಹೊಸ ಜಿಲ್ಲೆಗಳ ರಚನೆ ಆಗಬೇಕೆಂದು ಕೇಳಿದರೆ, ಇನ್ನು ಕೆಲವರು ರಾಜ್ಯ ರಚನೆಯನ್ನೇ ಕೇಳುವರು. ಉತ್ತರ ಕರ್ನಾಟಕದಂತೆ ಮಾಜಿ ಸಚಿವ ವೈಜನಾಥ್ ಪಾಟೀಲ್ ಪ್ರತ್ಯೇಕ ಹೈದ್ರಾಬಾದ್ ಕರ್ನಾಟಕ ರಾಜ್ಯದ ಬೇಡಿಕೆಯನ್ನು ಬಹು ಹಿಂದಿನಿಂದಲೇ ಮಂಡಿಸುತ್ತಿದ್ದರು, ಆ ಬೇಡಿಕೆ ಈಗಲೂ ಇದೆ. ಈಗ ಕೊಂಚ ಮಲಗಿದಂತೆ ಇದೆ. ಹಾಗೇ ಪ್ರತ್ಯೇಕ ಕೊಡಗು ದೇಶ 'ಸುಧಾರಿತ'ಗೊಂಡು ಪ್ರತ್ಯೇಕ ರಾಜ್ಯ ರಚನೆ ಆಗಬೇಕೆಂಬ ಕೊಡವ ಲ್ಯಾಂಡ್ ನಾಚಪ್ಪನಂತಹವರ ಆಗ್ರಹ ಜೀವಂತವಿದೆ. ಮಾತ್ರವಲ್ಲ, ಅದಕ್ಕೆ ಬೇಕಾದ ತಾಂತ್ರಿಕತೆಯ ಭೂಮಿಕೆಯನ್ನೂ ಅವರು ಅತ್ಯಂತ ಎಚ್ಚರಿಕೆಯಿಂದ ಸಿದ್ಧಗೊಳಿಸುತ್ತಿದ್ದಾರೆ. ಕೊಡವರನ್ನು ಬುಡಕಟ್ಟೆಂದು ಪರಿಗಣಿಸಿ ಎಸ್.ಟಿ.ಸ್ಥಾನಮಾನ ನೀಡಬೇಕೆಂಬ ಬೇಡಿಕೆಯ ಹಿಂದೆ ಪ್ರತ್ಯೇಕ ರಾಜ್ಯದ ಬೇಡಿಕೆ ಬೆಸೆದುಕೊಂಡಿದೆ. ಜೊತೆಗೆ ಅಧಿಕಾರದ ಏಕಸ್ವಾಮ್ಯ ಸಾಧಿಸುವ ದುರಾಸೆ ಇದೆ. ಇಂತಹ ಪ್ರತ್ಯೇಕತೆಯ ಬೇಡಿಕೆಗಳನ್ನು ಮಂಡಿಸುವವರು ಎಲ್ಲರೂ ಆ ಭಾಗದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಸಾಕಷ್ಟು ಮುಂದುವರಿದವರೂ ಮತ್ತು ಒಂದಿಲ್ಲೊಂದು ಬಗೆಯಲ್ಲಿ ಚಲಾವಣೆಯಲ್ಲಿರುವ ಅಧಿಕಾರ ವಲಯದಲ್ಲಿ ಸ್ಥಾನ ಗಿಟ್ಟಿಸಿಕೊಂಡವರೇ ಆಗಿದ್ದಾರೆ. ಸಮಾಜದ ಬೆಳವಣಿಗೆಯಲ್ಲಿ ತಮ್ಮ ಅಭಿವೃದ್ದಿಯೂ ಅಡಗಿದೆ ಎನ್ನುವುದನ್ನು ಒಪ್ಪದ ಇವರು ಯಾರು ಏನಾದರೂ ಆಗಲಿ ತಾವು ಮಾತ್ರ ಬೆಳೆಯಬೇಕು, ಬೆಳಗಬೇಕು ಎಂದು ಬಯಸುವವರು ಇವರು. ಅಲ್ಲದೇ ಪ್ರತ್ಯೇಕತೆಯ ತಮ್ಮ ಬೇಡಿಕೆಗೆ ಹಿಂದುಳಿದಿರುವಿಕೆಯ ಸಬೂಬು ಹೇಳುವ ಇವರು ಆ ಭಾಗದಲ್ಲಿ ಅಧಿಕಾರದ ಕೇಂದ್ರವೂ ಆಗಿದ್ದವರು, ಗಂಟು ಕಟ್ಟಿದವರೂ ಆದವರು. ಅಭಿವೃದ್ಧಿ ಸಾಧಿಸುವ ಭರವಸೆಯೊಂದಿಗೆ ಚುಕ್ಕಾಣಿಯನ್ನು ಒಂದಿಲ್ಲೊಂದು ಬಾರಿ ಹಿಡಿದು ತಮ್ಮ ಅಭಿವೃದ್ಧಿ ಸಾಧಿಸಿದ ಸಾಧಕರೇ ಆಗಿದ್ದಾರೆ. ಬಂಡವಾಳದ ಗುಣದಂತೆ ಮಾರುಕಟ್ಟೆಯ ವಿಸ್ತರಣಾಕಾಂಕ್ಷಿಗಳೂ ಆಗಿದ್ದಾರೆ! ಇನ್ನೂ ಕೆಲವೊಮ್ಮೆ ಜನತೆಯ ಬೇಡಿಕೆಗಳಿಗೆ ಸರಕಾರ ಸ್ಪಂದಿಸದೇ ಹೋದಾಗ ಪ್ರತ್ಯೇಕ ರಾಜ್ಯ ಕೇಳಿದವರೂ ಇದ್ದಾರೆ. ಪ್ರೊ.ಚಂಪಾ ರವರು ಹಾಗೆ ಕೇಳುತ್ತಿದ್ದರು. ಅದಕ್ಕಾದರೂ ಅಧಿಕಾರಸ್ಥರು ಮಣಿಯಬಹುದು ಎಂದು!

ಅಖಂಡ ರಾಷ್ಟ್ರವನ್ನು ಪ್ರತಿಪಾದಿಸುವ, ಭಾರತದ ಗಡಿಯಾಚೆಗೂ ಕಾರ್ಪೊರೇಟ್ ಸಾಮ್ರಾಜ್ಯ ವಿಸ್ತರಿಸ ಬಯಸುವ ಬಿ.ಜೆ.ಪಿ. ಯು ವಿಭಜನೆಯನ್ನು ಪ್ರತಿಪಾದಿಸಬಲ್ಲುದೇ ಎಂಬ ಪ್ರಶ್ನೆ ಸಾಮಾನ್ಯರಲ್ಲಿ ಬರಬಹುದು. ಆದರೆ ವಿಭಜನೆಯೇ ಅದರ ಸಿದ್ಧಾಂತದ ಮೂಲ ಹೂರಣ ಎನ್ನುವುದು ಅದರ ಕೃತ್ಯಗಳನ್ನು ಕಂಡವರು ಆಶ್ಚರ್ಯ ಪಡುವುದಿಲ್ಲ. 'ಚಿಕ್ಕ ರಾಜ್ಯ ಚೊಕ್ಕ ರಾಜ್ಯ' ಎನ್ನುವ ವಾದವನ್ನು ಅದು ಅಧಿಕೃತವಾಗಿಯೇ ಪ್ರತಿಪಾದಿಸಿ ತಾನು ಭಾಷಾವಾರು ಪ್ರಾಂತ್ಯದ ಮೂಲ ಆಶಯದ ಕಡು ವಿರೋಧಿ ಎಂದು ಗಟ್ಟಿ ದನಿಯಲ್ಲೇ ಘೋಷಿಸಿದೆ. ಅದು ಒಕ್ಕೂಟದ ವ್ಯವಸ್ಥೆಯನ್ನೇ ಛಿದ್ರಗೊಳಿಸ ಬಯಸುತ್ತದೆ. ಮತ್ತು ಸಂಪನ್ಮೂಲ ಕಡಿತವನ್ನು ಒಳಗೊಂಡು ರಾಜ್ಯಗಳನ್ನು ಎಲ್ಲಾ ರೀತಿಯಿಂದ ದುರ್ಬಲಗೊಳಿಸಲು ಹವಣಿಸುತ್ತದೆ. ಆ ಮೂಲಕ ರಾಜ್ಯದ ಜನತೆ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲಾಗದಂತೆ ದುರ್ಬಲಗೊಳಿಸುತ್ತದೆ.



ವಿಭಜನೆಯ ರಾಜಕಾರಣಕ್ಕೆ ಅನುಗುಣವಾಗಿ ತನ್ನ ಬೆಂಬಲಿಗ ಲೂಟಿಕೋರರನ್ನು ಸಂತೃಪ್ತ ಪಡಿಸಲು ಸಹ ಅದು ಹಿಂಜರಿಯುವುದಿಲ್ಲ. ಆನಂದಸಿಂಗ್ ರಂತಹ ಗಣಿಗಳ್ಳರು ಪ್ರತ್ಯೇಕ ಜಿಲ್ಲೆ ಮಾಡಬೇಕೆಂದು ಕೇಳಿದಾಗ ರೆಡ್ಡಿ ಸಹೋದರರ ಪ್ರತಿಭಟನೆ ಇದ್ದರೂ ಒಂದು ಸಾಮ್ರಾಜ್ಯ ನಡೆಸಲು ಜಹಗೀರು ಸೃಷ್ಟಿಸಿ ಕೊಟ್ಟರಲ್ಲವೇ? ಹಿಂದೆ ಉತ್ತರ ಪ್ರದೇಶ, ಬಿಹಾರ, ದಂತಹ ರಾಜ್ಯಗಳನ್ನು ವಿಭಜಿಸಿ ಉತ್ತರಖಾಂಡ್, ಝಾರ್ಖಂಡ್, ಛತ್ತೀಸ್ ಘಡ್ ಎಂಬಿತ್ಯಾದಿ ರಾಜ್ಯಗಳನ್ನು ಸೃಷ್ಟಿಸಲಿಲ್ಲವೇ? ಅತ್ಯಂತ ನೈಸರ್ಗಿಕ ಸಂಪನ್ಮೂಲಗಳಿರುವ ಈ ಪ್ರದೇಶಗಳು ಸಂಪನ್ಮೂಲಗಳ ಕೊರತೆಯಿಂದ ಅಭಿವೃದ್ಧಿ ಕಾಣದೇ ಪ್ರತಿ ಬಾರಿಯೂ ಕೇಂದ್ರದ ಮುಂದೆ ಸದಾ ಸಹಾಯಕ್ಕೆ ಕೈ ಒಡ್ಡಿಯೇ ನಿಲ್ಲಬೇಕಾದ ದುಃಸ್ಥಿತಿ ಒದಗಿದೆ. ಮಾತ್ರವಲ್ಲ, ಸಣ್ಣ ಸಂಖ್ಯೆಯಲ್ಲಿ ಶಾಸನ ಸಭೆ ಹೊಂದಿರುವ ಇಲ್ಲಿ ಬಹು ಸುಲಭವಾಗಿ ಸರಕಾರವನ್ನು ಬದಲಿಸಿ ಬಿಡಬಹುದು.

ಹೀಗಾಗಿ ಕಂಪನಿಗಳ ಸಂಪನ್ಮೂಲ ಲೂಟಿಗೆ, ತಮ್ಮ ತಾಳಕ್ಕೆ, ಕುಣಿಯುವುದಿಲ್ಲ ಎನಿಸಿದಾಗ ಆ ಆಡಳಿತ ಪಕ್ಷ ವಿಭಜನೆಯಾಗಿ ಅಧಿಕಾರ ಕಳೆದುಕೊಳ್ಳುವ ಸದಾ ಅಸ್ಥಿರತೆ ಅಲ್ಲಿ ಕಾಣುತ್ತೇವೆ. ಹೀಗಾಗಿ ಭಾಷಾವಾರು ಪ್ರಾಂತ್ಯಗಳನ್ನು ವಿಭಜಿಸಿ ಚಿಕ್ಕ ರಾಜ್ಯಗಳನ್ನಾಗಿಸುವ ಉದ್ದೇಶದ ಹಿಂದೆ ಅಭಿವೃದ್ಧಿ ಸಾಧನೆಗಿಂತ ಸಂಪನ್ಮೂಲಗಳ ಲೂಟಿ, ಪಾಳೇಗಾರಿ ಶಕ್ತಿಗಳ ಅಧಿಕಾರ ದಾಹ ತಣಿಸುವಿಕೆ ಮತ್ತು ಅವನ್ನು ತಮಗಾಗಿ ಸೇವೆ ಸಲ್ಲಿಸುವಂತೆ ಬಗ್ಗಿಸುವ ಉದ್ದೇಶ ಅಡಗಿರುತ್ತದೆ.

ಕತ್ತಿಯವರ ಸೂಚನೆಯಂತೆ ಭಾರತ ಸರಕಾರ ಒಂದು ವೇಳೆ ಉತ್ತರ ಕರ್ನಾಟಕ ರಾಜ್ಯ ರಚನೆಗೆ ತಥಾಸ್ತು ಎಂದರೆ ಅದು ಅಷ್ಟಕ್ಕೇ ನಿಲ್ಲುವುದಿಲ್ಲ ಎನ್ನುವುದೂ ಸ್ಪಷ್ಟ. ಕಲ್ಯಾಣ ಕರ್ನಾಟಕ, ಪ್ರತ್ಯೇಕ ಕೊಡಗು ಬೇಡಿಕೆಗಳೂ ಎದ್ದು ನಿಲ್ಲುತ್ತವೆ. ಅಂದರೆ ಕರ್ನಾಟಕ ಹಲವು ಚೂರುಗಳಾಗಿ ಒಡೆಯ

ಪುಟ 4 ಕ್ಕೆ

ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು
ರಾಜ್ಯ ಸರ್ಕಾರ ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿಯ ಒತ್ತಾಯ
ಓರಿಯಂಟಲ್ ಕಂಪನಿಯೊಂದಿಗೆ ಜಿಲ್ಲಾಧಿಕಾರಿಯ ಶಾಮೀಲು – ದಬ್ಬಾಳಿಕೆ

ಓರಿಯಂಟ್ ಸಿಮೆಂಟ್ ಕಂಪನಿಯು ರೈತರಿಂದ ಭೂಮಿ ಖರೀದಿಸುವಲ್ಲಿ ಆಗಿರುವ ಮೋಸ, ಅನ್ಯಾಯಗಳನ್ನು ಸರಿಪಡಿಸಬೇಕು, ಭೂಸ್ವಾಧೀನ ಕಾಯ್ದೆ–2013 ರ ಅನ್ವಯ ನ್ಯಾಯಯುತ ಪರಿಹಾರವನ್ನು ನೀಡಬೇಕು, ಭೂಮಿಯನ್ನು ನೀಡಿದ ರೈತ ಕುಟುಂಬಗಳಿಗೆ ಉದ್ಯೋಗ ನೀಡಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸುತ್ತಿದ್ದ ಹೋರಾಟ ನಿರತ ಮಕ್ಕಳ, ಮಹಿಳೆಯರು ಸೇರಿದಂತೆ ರೈತರನ್ನು ಹಾಗೂ ರೈತ ಮುಖಂಡ, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಯು. ಬಸವರಾಜು ರವರನ್ನು ಕಲ್ಬುರ್ಗಿ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಬಂಧಿಸಿದ್ದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದ್ದು, ಕೂಡಲೇ ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು ಆಗ್ರಹಿಸಿದೆ.

ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಇಟಗಾ ಮತ್ತಿತರೆ ನಾಲ್ಕು ಗ್ರಾಮಗಳ ರೈತರಿಂದ ಸುಮಾರು 1750 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಾಗ ಓರಿಯಂಟ್ ಸಿಮೆಂಟ್ ಕಂಪನಿಯು ಅನೇಕ ಅಕ್ರಮಗಳನ್ನು ಎಸಗಿದೆ. ಈ ಅಕ್ರಮಗಳನ್ನು ಸರಿಪಡಿಸಬೇಕು, ಭೂಸ್ವಾಧೀನ ಕಾಯ್ದೆಯಂತೆ ಪರಿಹಾರ ನೀಡಿಕೆ, ಭೂಸಂತ್ರಸ್ಥರು ಕುಟುಂಬಗಳ ಮಕ್ಕಳಿಗೆ ಉದ್ಯೋಗ ನೀಡಿಕೆ, ಸಿಮೆಂಟ್ ಕಾರ್ಖಾನೆಯಿಂದ ಉಂಟಾಗುತ್ತಿರುವ ದೂಳಿನ ದುಷ್ಪರಿಣಾಮಗಳನ್ನು ತಡೆಗಟ್ಟುವುದು, ಇದರಿಂದ ಆಗಿರುವ ಬೆಳೆ ನಷ್ಟಕ್ಕೆ ಪರಿಹಾರ, ತೊಂದರೆಗೆ ಒಳಗಾಗಿರುವ ಗ್ರಾಮ ಅಭಿವೃದ್ಧಿಯಂತ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಎರಡು ದಿನ ಪಾದಯಾತ್ರೆಯ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳ ಅತ್ಯಂತ ಅನಾಗರೀಕವಾಗಿ ವರ್ತಿಸಿರುವುದನ್ನು ಸಿಪಿಐ(ಎಂ) ಖಂಡಿಸುತ್ತದೆ. ಮಕ್ಕಳು, ಮಹಿಳೆಯರು, ರೈತರು ಹಾಗು ರೈತ ಸಂಘದ ಮುಖಂಡರ ಜೊತೆ ಸೌಜನ್ಯದಿಂದ ಮಾತನಾಡದೇ ಎಲ್ಲವೂ ಕಾನೂನು ರೀತಿಯಲ್ಲಿಯೇ ನಡೆದಿವೆ, ಮನವಿ ಕೊಟ್ಟೂ ಹೋಗಿ, ನೋಡೋಣ ಎನ್ನುತ್ತಾ ಏರು ಧ್ವನಿಯಲ್ಲಿ ಮಾತನಾಡುತ್ತಾ ಸಿಮೆಂಟ್ ಕಂಪನಿಯನ್ನು ಸಮರ್ಥಿಸುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಜಿಲ್ಲಾಧಿಕಾರಿಗಳ ಈ ವರ್ತನೆಯನ್ನು ಪ್ರತಿಭಟಿಸಿದ ರೈತ ಮುಖಂಡರನ್ನು, ಮಕ್ಕಳು, ಮಹಿಳೆಯರನ್ನು ಬಂಧಿಸುವಂತೆ ಪೊಲೀಸರಿಗೆ ಆದೇಶ ನೀಡಿದ್ದಾರೆ. ಕಲ್ಬುಗಿ ಜಿಲ್ಲಾಧಿಕಾರಿಗಳ ಈ ವರ್ತನೆಯನ್ನು ಸಿಪಿಐ(ಎಂ) ಖಂಡಿಸುತ್ತದೆ ಹಾಗು ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಮಧ್ಯಪ್ರವೇಶ ಮಾಡಿ, ರೈತರ ಬೇಡಿಕೆಗಳನ್ನು ಈಡೇರಿಸಬೇಕು ಮತ್ತು ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿಯು ಆಗ್ರಹಿಸಿದೆ.





ಸ್ಥಳೀಯರಿಗೆ ಉದ್ಯೋಗ ಒದಗಿಸದ ಎಂಆರ್‌ಪಿಎಲ್ ಕಂಪನಿ ಗಡಿಪಾರು ಮಾಡಿ

ಉದ್ಯೋಗ ಸೃಷ್ಟಿಯ ಭರವಸೆ ನೀಡಿ ತುಳುನಾಡಿನ ಅಪಾರ ಜಮೀನು ಕಬಳಿಸಿಕೊಂಡಿರುವ ಬೃಹತ್ ಕೈಗಾರಿಕೆಗಳು ಪರಿಸರವನ್ನು ಎಗ್ಗಿಲ್ಲದೆ ನಾಶಪಡಿಸಿದೆ. ನೆಲ ಜಲವನ್ನು ವಿಷಮಯಗೊಳಿಸಿದ್ದು ಸಾಲದು ಎಂಬಂತೆ ಕಂಪೆನಿಯ ಸುತ್ತಲ ರಸ್ತೆ, ಚರಂಡಿಗಳನ್ನು ಬಳಕೆಗೆ ಆಯೋಗ್ಯ ಮಾಡಿಬಿಟ್ಟಿವೆ. ಇವೆಲ್ಲವುಗಳ ನಡುವೆ ಇಲ್ಲಿನ ಸ್ಥಳೀಯರ ವಿರೋಧಿ ನೀತಿಗಳಿಗೆ ಎಮ್‌ಆರ್‌ಪಿಎಲ್ ನಾಯಕತ್ವ ನೀಡುತ್ತಿದೆ. ಕಂಪೆನಿ ತನ್ನ ತಪ್ಪುಗಳನ್ನು ಸರಿಪಡಿಸದಿದ್ದಲ್ಲಿ ಅದನ್ನು ಜಿಲ್ಲೆಯಿಂದಲೇ ಗಡಿಪಾರು ಮಾಡಬೇಕು ಎಂದು ಮುನೀರ್ ಕಾಟಿಪಳ್ಳ ಆಕ್ರೋಶ ವ್ಯಕ್ತಪಡಿಸಿದರು.

ಕೂಳೂರು ಜೋಕಟ್ಟೆ ಎಸ್ಇಝಡ್ ಸಂಪರ್ಕದ ಎಮ್‌ಆರ್‌ಪಿಎಲ್ ಕಂಪೆನಿಯ ಸುಪರ್ದಿಯಲ್ಲಿರುವ ಕಾರಿಡಾರ್ ರಸ್ತೆಯ ಹೊಂಡ ಗುಂಡಿ ಮುಚ್ಚಲು, ಅವ್ಯವಸ್ಥೆ ಸರಿಪಡಿಸಲು ಒತ್ತಾಯಿಸಿ ರುಚಿಗೋಲ್ಡ್ ಕಂಪೆನಿ ಮುಂಭಾಗ "ನಾಗರಿಕ ಹೋರಾಟ ಸಮಿತಿ, ಜೋಕಟ್ಟೆ" ಹಮ್ಮಿಕೊಂಡಿದ್ದ ರಸ್ತೆ ತಡೆ ಪ್ರತಿಭಟನೆಯನ್ನು ಉದ್ದೇಶಿಸಿ ಮುನೀರ್ ಕಾಟಿಪಳ್ಳ ಮಾತನಾಡಿದರು.

ಕೂಳೂರು, ಎಸ್ಇಝಡ್ ರಸ್ತೆ ಈಗ ಎಮ್‌ಆರ್‌ಪಿಎಲ್ ಅಧೀನದಲ್ಲಿ ಇದೆ. ಎಸ್ಇಝಡ್, ಅನಘ, ರುಚಿಗೋಲ್ಡ್, ಅದಾನಿ ವಿಲ್ಮಾ ಸಹಿತ ಹಲವು ಕೈಗಾರಿಕೆಗಳು ಈ ರಸ್ತೆಯನ್ನು ಬಳಸುತ್ತಿವೆ. ಆದರೆ ರಸ್ತೆ ಪೂರ್ತಿ ಹೊಂಡಮಯ ಆಗಿದ್ದರೂ ಕಂಪೆನಿಗಳಾಗಲಿ, ಜಿಲ್ಲಾಡಳಿತವಾಗಲಿ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಇಲ್ಲಿಯ ಚರಂಡಿಗಳನ್ನು ಕಂಪೆನಿಗಳು ಅಕ್ರಮಿಸಿ ಮಣ್ಣು ತುಂಬಿಸಿದ್ದರೂ ಕೇಳುವವರಿಲ್ಲ. ಅದರಿಂದ ಕಂಪೆನಿಗಳ ಮಲಿನ ನೀರು ಆಳೆತ್ತರಕ್ಕೆ ನಿಂತು ರೋಗರೋಜಿನಗಳು ವ್ಯಾಪಕವಾಗಿ ಹರಡುತ್ತಿದೆ ಎಂದು ಆರೋಪಿಸಿದರು.

ಸಣ್ಣ ವಾಹನಗಳಲ್ಲಿ ಪ್ರಯಾಣಿಸುವ ಜನತೆ ರಸ್ತೆ ಹೊಂಡಕ್ಕೆ ಬಿದ್ದು ಕೈಕಾಲು ಮುರಿಸಿಕೊಳ್ಳುತ್ತಿದ್ದಾರೆ.



ಹೊಂಡ ಗುಂಡಿ ಮುಚ್ಚಲು ಜಿಲ್ಲಾಡಳಿತ ತಕ್ಷಣ ಸರಿಯಾದ ಕ್ರಮ ಕೈಗೊಳ್ಳದಿದ್ದಲ್ಲಿ ಸ್ಥಳೀಯ ಕಂಪೆನಿಗಳಿಗೆ ಘೆರಾವ್ ಮಾಡುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ ಕೆ ಇಮ್ತಿಯಾಜ್, ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಬಿ ಎಸ್ ಬಶೀರ್, ತೋಕೂರು ಗ್ರಾಮ ಪಂಚಾಯತಿ ಅಧ್ಯಕ್ಷ ಕೆವಿನ್, ಹೋರಾಟ ಸಮಿತಿ ಸಂಚಾಲಕ, ಗ್ರಾಮ ಪಂಚಾಯತಿ ಸದಸ್ಯ ಅಬೂಬಕ್ಕರ್ ಬಾವ, ಮಾಜಿ ಅಧ್ಯಕ್ಷ ಪ್ರಸಿಲ್ಲಾ ಮೊಂತೆರೊ, ಮಾಜಿ ಉಪಾಧ್ಯಕ್ಷ ಸಂಸು ಇದ್ದಿನಬ್ಬ, ಹೋರಾಟ ಸಮಿತಿಯ ಪ್ರಮುಖರಾದ ಹನೀಫ್ ಜೋಕಟ್ಟೆ, ಲಾನ್ಸಿ ಜೋಕಟ್ಟೆ, ಫಾರೂಕ್ ಕೆ ಬಿ ಎಸ್, ಇಕ್ಬಾಲ್ ಜೋಕಟ್ಟೆ, ಹಮೀದ್, ಶಂಸುದ್ದೀನ್ ಅರಿಕೆರೆ, ಇಸ್ಮಾಯಿಲ್ ಅಜಾದ್ ಮತ್ತಿತರರು ನಾಯಕತ್ವ ವಹಿಸಿದ್ದರು.

ನಾಡು ಒಡೆಯುವ ಮಾತು ಬರೀ ಮಾತಲ್ಲವೋ!... ಪುಟ 3 ರಿಂದ

ಬೇಕಾಗುತ್ತದೆ.

ಇತ್ತೀಚೆಗೆ 'ಹೈದ್ರಾಬಾದ್ ಕರ್ನಾಟಕ'ವೆಂದು ಚಾರಿತ್ರಿಕ ಹಿನ್ನೆಲೆಯಲ್ಲಿ ರೂಢೀಗತವಾಗಿ ಗುರುತಿಸಲಾಗುತ್ತಿದ್ದ ಭೌಗೋಳಿಕ ಪ್ರದೇಶವನ್ನು 'ಕಲ್ಯಾಣ ಕರ್ನಾಟಕ' ವೆಂದು ಸರಕಾರವೇ ನಾಮಕರಣ ಮಾಡಿದ್ದೇಕೆ? ಇದು ಈ ಪ್ರದೇಶದ ಚಾರಿತ್ರಿಕ, ರಾಜಕೀಯ ವಾಸ್ತವವನ್ನು ಮರೆಸಿದಂತೆ ಆಗಲಿಲ್ಲವೇ? ಇದು ಕೇವಲ ನಿಜಾಮ್ ಶಾಹಿಯನ್ನು ವಿರೋಧಿಸುವ ಅಂಶ ಇತ್ತೇ ಅಥವಾ ಬೇರೇನು? ಶರಣರ ಕಲ್ಯಾಣದ ವ್ಯಾಪ್ತಿ ಭೌಗೋಳಿಕವಾಗಿ ಅಥವಾ ಚಾರಿತ್ರಿಕವಾಗಿ ಆರು ಜಿಲ್ಲೆಗಳನ್ನು ಮೀರಿದ್ದಾಗಿದೆ. ಆದಾಗ್ಯೂ ಕಲ್ಯಾಣ ಕರ್ನಾಟಕದಂತಹ ಹೊಸ ಅಸ್ಮಿತೆಯ ಸೃಷ್ಟಿಯನ್ನು ಎತ್ತ ಕಡೆ ಕೊಂಡೊಯ್ಯಬಹುದು? ಎನ್ನುವುದು ಕಾಡುವ ಪ್ರಶ್ನೆ! ಜನತೆಯ ಸಮಗ್ರ ಅಭಿವೃದ್ಧಿ, ಅಭ್ಯುದಯದ ಸಾಧನೆ ಹಾಗೂ ಅವರ ಪ್ರಜಾಸತ್ತಾತ್ಮಕ ಆಸೆಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿರುವಾಗ ಆಳುವವರ್ಗಗಳು ವಿಭಜಕ ಮಾರ್ಗ ಅನುಸರಿಸುತ್ತವೆ.

ಬಿಜೆಪಿ ತಾತ್ವಿಕವಾಗಿಯೂ ಅದು ಭಾಷಾವಾರು ಪ್ರಾಂತ್ಯಗಳ ಪರವಾಗಿಲ್ಲ. ಒಕ್ಕೂಟದ ವ್ಯವಸ್ಥೆಗೂ ಕಡು ವಿರೋಧ. ಮಾತ್ರವಲ್ಲ, ಭಾರತದ ಪರಂಪರೆಯ ಹೃದಯವಾಗಿರುವ ಭಾಷಾ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ತನ್ನ ಪರಮ ಶತೃವೆಂದೇ ಭಾವಿಸುತ್ತದೆ. ಅದಕ್ಕಾಗಿ ಒಂದು ದೇಶ, ಒಂದು ಭಾಷೆಯಂತಹ ಭಾಷಾ ಏಕಸ್ವಾಮ್ಯದ ಹೇರಿಕೆಯನ್ನು ಪಟ್ಟು ಬಿಡದ ಒತ್ತಡದಿಂದ ಹೇರುತ್ತಿದೆ. ಆರ್.ಎಸ್.ಎಸ್. ಗುರಿಯಂತೆ 2025ಕ್ಕೆ ಮತನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿರುವ ಒಕ್ಕೂಟ ಭಾರತವನ್ನು ಅಸಹನೆಯ, ಫ್ಯಾಸಿಸ್ಟ್ 'ಹಿಂದೂ ರಾಷ್ಟ್ರ' ಎಂದು ಘೋಷಣೆ ಮಾಡುವುದಕ್ಕೆ ಮೊದಲು ಹಿಂದಿ, ಹಿಂದು, ಹಿಂದುಸ್ಥಾನ್ ನ ಘೋಷಿತ ಗುರಿ ಸಾಧಿಸ ಬಯಸಿದೆ. ಈ ಮೂಲಕ ಏಕಸ್ವಾಮ್ಯ ಬಂಡವಾಳಗಾರರಿಗೆ ಸುಲಭವಾಗುವಂತೆ ಭಾರತದ ಆರ್ಥಿಕತೆಯನ್ನೂ ಪೂರ್ಣ ಬಿಟ್ಟು ಕೊಡಲು ಧಾವಿಸುತ್ತಿರುವ ಹಿನ್ನೆಲೆಯಲ್ಲಿ ಅದರ ಮಾರುಕಟ್ಟೆ ಹಿತಾಸಕ್ತಿಗೆ ಬಿಜೆಪಿ–ಆರ್.ಎಸ್.ಎಸ್. ಸೋಪಾನ ಕಲ್ಪಿಸಲಿವೆ.

ಕತ್ತಿಯವರ ಮರುಕಳಿಸುವ ಇಂತಹ ಹೇಳಿಕೆ ವ್ಯಸನದಂತೆ ಕಂಡರೂ ರಾಜ್ಯಗಳ ವಿಭಜನಾ ಯೋಜನೆಯ ಪ್ರಬಲ ಸಾಧ್ಯತೆಗಳ ಮುನ್ಸೂಚನೆಯೂ ಆಗಿರಬಹುದು. ಆದ್ದರಿಂದ ಒಂದು ಭಾಷಿಕರು ಒಂದು ಆಡಳಿತದಡಿ ಇರಬೇಕೆಂಬ, ನಾಡು, ನುಡಿ, ಬದುಕಿನ ಅಸ್ಮಿತೆ ಬಯಸುವವರೆಲ್ಲಾ ಎಚ್ಚರದಿಂದಲೇ ಇರಬೇಕಾಗುತ್ತದೆ. ಸ್ವಾತಂತ್ರ್ಯದ ನಂತರದಲ್ಲಿ ಉದಯವಾದ ಈ ಚೆಲುವ ಕನ್ನಡ ನಾಡು ಸುಲಿಗೆಗಾರರ ಬಾಯಿಗೆ ಈಡಾಗದಂತೆ ನಾಡಿನ ಜನತೆ ನಡೆವ ಸಂಘರ್ಷದಲ್ಲಿ ರಕ್ಷಣಾ ಕೋಟೆಯಾಗಿ ನಿಲ್ಲಬೇಕು.

ದ.ಕ.ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಮ್ಮೇಳನ
ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ವಜಾಕ್ಕೆ ಆಗ್ರಹ

ವರದಿ: ವಾ.ಉ.

ಕರ್ನಾಟಕ ರಾಜ್ಯ ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಹಣವನ್ನು ಅವ್ಯವಹಾರ ಮಾಡಿದ್ದು, ಅವರನ್ನು ವಜಾಗೊಳಿಸಿ ಖರೀದಿಗೆ ಸಂಬಂಧಪಟ್ಟ ಎಲ್ಲಾ ದಾಖಲೆ ಪತ್ರಗಳನ್ನು ತನಿಖೆಗೊಳಪಡಿಸಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ಕಾರ್ಮಿಕರ ಫೆಡರೇಶನ್ನಿನ ದ.ಕ.ಜಿಲ್ಲಾ ಸಮ್ಮೇಳನವು ನಿರ್ಣಯ ಕೈಗೊಂಡಿದೆ.

ಜೂನ್ 20 ರಂದು ಮಂಗಳೂರಿನ ಬೋಳಾರದ ಕಾ. ಬಿ. ಮಾಧವ ವೇದಿಕೆಯಲ್ಲಿ ನಡೆದ ಜಿಲ್ಲಾ ಸಮ್ಮೇಳನವು ಈ ನಿರ್ಣಯ ಕೈಗೊಂಡಿದೆ.

ಫೆಡರೇಶನ್ನಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಕೊರೋನಾ ಲಾಕ್‌ಡೌನ್ ಪರಿಹಾರ ಬಾಕಿ ಇರುವ ನೋಂದಾಯಿತ ಎಲ್ಲಾ ನಮೂನೆಯ ಕಟ್ಟಡ ಕಾರ್ಮಿಕರಿಗೆ ಟೂಲ್‌ಕಿಟ್ ವಿತರಿಸಬೇಕು, ಬಾಕಿ ಇರುವ ಅರ್ಜಿದಾರರ ಎಲ್ಲಾ ಸವಲತ್ತುಗಳನ್ನು ಕೂಡಲೇ ವಿಲೇವಾರಿ ಮಾಡಬೇಕು ಎಂದವರು ಆಗ್ರಹಿಸಿದರು. ಈ ಬೇಡಿಕೆಗಳನ್ನು ಒತ್ತಾಯಿಸಿ ಜುಲೈ 7 ರಂದು ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿಯ ಮುಂದೆ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುವ ನಿರ್ಣಯವನ್ನು ಜಿಲ್ಲಾ ಸಮ್ಮೇಳನ ಕೈಗೊಂಡಿರುತ್ತದೆ.

ಫೆಡರೇಶನ್ನಿನ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ವಸಂತ ಆಚಾರಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮುಖ್ಯ ಅತಿಥಿಯಾಗಿದ್ದರು. ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯು.ಜಯಂತ ನಾಯ್ಕ್ ವರದಿಯನ್ನು ಕೋಶಾಧಿಕಾರಿ ರವಿಚಂದ್ರ ಕೊಂಚಾಡಿ ಲೆಕ್ಕಪತ್ರವನ್ನು ಮಂಡಿಸಿದರು.

ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ವಸಂತ ಆಚಾರಿ ಅಧ್ಯಕ್ಷರಾಗಿ, ಯೋಗೀಶ್ ಜಪ್ಪಿನಮೊಗರು ಪ್ರಧಾನ ಕಾರ್ಯದರ್ಶಿಯಾಗಿ, ರವಿಚಂದ್ರ ಕೊಂಚಾಡಿ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ ಸಮ್ಮೇಳನದ ಸಮಾರೋಪ ಭಾಷಣ ಮಾಡಿದರು.

ನರೇಂದ್ರ ಮೋದಿ ಮೈಸೂರು ಭೇಟಿ.... ಲಾಭ ಸೊನ್ನೆ, ಖರ್ಚೇ ಜಾಸ್ತಿ..

ಜಗದೀಶ್ ಸೂರ್ಯ

ಅಂತರ ರಾಷ್ಟ್ರೀಯ ಯೋಗ ದಿನದಲ್ಲಿ ಭಾಗವಹಿಸಲು ಜೂನ್ 20–21 ರಂದು ಎರಡು ದಿನಗಳ ಕಾಲ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿಗೆ ಭೇಟಿ ನೀಡಿದ್ದರು.

ಕೃಷಿ ಪ್ರಧಾನವಾದ, ಪ್ರವಾಸೋದ್ಯಮ ಕೇಂದ್ರಿತ ಮೈಸೂರು ನೋಟ್ ಬ್ಯಾನ್, ಕೋವಿಡ್ ನಿಂದಾಗಿ ಸಂಪೂರ್ಣ ಕುಗ್ಗಿ ಹೋಗಿತ್ತು. ಆದ್ದರಿಂದ ಮೋದಿಯ ಭೇಟಿಯ ಈ ಕಾರ್ಯಕ್ರಮದ ತಯಾರಿ ಹಾಗೂ ಅಬ್ಬರದ ಪ್ರಚಾರ ಮೈಸೂರಿಗರಲ್ಲಿ ಸಾಕಷ್ಟು ನಿರೀಕ್ಷೆ ಮೂಡಿಸಿತ್ತು..



ಇವರ ಭೇಟಿಯ ಹಿನ್ನೆಲೆಯಲ್ಲಿ ಸುಮಾರು 20 ದಿನಗಳ ತಯಾರಿ ಜೋರಾಗೇ ಇತ್ತು. ಪ್ರಧಾನಿಗಳು ಓಡಾಡುವ ರಸ್ತೆಗಳು, ಕಾರ್ಯಕ್ರಮ ನಡೆಯುವ ಸ್ಥಳದ ಸುತ್ತಮುತ್ತಲ ಪ್ರದೇಶಗಳ ರಸ್ತೆ ಕಾಮಗಾರಿ, ಸುಣ ಬಣ್ಣ ಬಳೆಯುವ ಕೆಲಸ, ವಿದ್ಯುತ್ ದೀಪ ಅಳವಡಿಕೆ, ಬ್ಯಾಕೇಡ್ ಗಳನ್ನು ಹಾಕುವುದು ರಸ್ತೆಯ ಇಕ್ಕಲಗಳಲ್ಲಿ ಕಂಬಗಳನ್ನು ನೆಡುವುದು, ಬ್ಯಾನರ್, ಬಂಟಿಂಗ್ಸ್ ಅಳವಡಿಕೆ ಕೆಲಸಗಳು ಭರದಿಂದ ಸಾಗಿತ್ತು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕಚೇರಿಗಳು ಹಾಗೂ ಸಿಬ್ಬಂದಿ ಸಂಪೂರ್ಣವಾಗಿ ಪ್ರಧಾನಿಗಳ ಕಾರ್ಯಕ್ರಮದ ತಯಾರಿಯಲ್ಲಿ ತೊಡಗಿಸಿಕೊಂಡಿತ್ತು...

ನರೇಂದ್ರ ಮೋದಿಯವರು ಜೂನ್ ಇಪ್ಪತ್ತರಂದು ಬೆಂಗಳೂರಿನಲ್ಲಿ ಕಾರ್ಯಕ್ರಮಗಳನ್ನು ಮುಗಿಸಿ ಸಂಜೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕೇಂದ್ರ ಸರ್ಕಾರಗಳ ಫಲಾನುಭವಿಗಳೋಂದಿಗಿನ ಸಂವಾದ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಮೋದಿಯವರ ಮೈಸೂರು ಪ್ರವಾಸ ಆರಂಭವಾಯಿತು. ಅಂದು ಕೇಂದ್ರ ಸರ್ಕಾರದ ಫಲಾನುಭವಿಗಳೊಂದಿಗೆ ಸಂವಾದ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಶ್ರೇಷ್ಠತೆಯ ಕೇಂದ್ರದ ಉದ್ಘಾಟನೆ ಹಾಗೂ ನಾಗನ ಹಳ್ಳಿಯ ರೈಲು ನಿಲ್ದಾಣದಲ್ಲಿ ಕೋಚಿಂಗ್ ಟರ್ಮಿನಲ್ ಗೆ ಶಂಕುಸ್ಥಾಪನೆ ಕಾರ್ಯಕ್ರಮ ವರ್ಚುಲ್ ಆಗಿ ನಡೆಯಿತು. ಈ ಕಾರ್ಯಕ್ರಮಕ್ಕೆ ಮಂಡ್ಯಾ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಂದ ಜನರನ್ನು ಕರೆತರಲಾಗಿತ್ತು. ಜನರನ್ನು ಕರೆತರುವ ಜವಾಬ್ದಾರಿಯನ್ನು ಪಂಚಾಯ್ತಿ ಪಿಡಿಓ, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರಿಗೆ ನೀಡಿ ಪ್ರತಿ ಪಂಚಾಯ್ತಿಗೆ ಬಸ್ ಅನ್ನು ಒದಗಿಸಲಾಗಿತ್ತು.

ನಂತರ ಮಾರನೇ ದಿನ ಜೂನ್ 21 ರಂದು ಅರಮನೆ ಆವರಣದಲ್ಲಿ ನಡೆದ ಅಂತರ ರಾಷ್ಟ್ರೀಯ ಯೋಗ ದಿನದಲ್ಲಿ ಮೋದಿ ಭಾಗವಹಿಸಿ ರಾಜ ವಂಶಸ್ಥರ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ ನಂತರ ದೆಹಲಿಗೆ ಹಿಂದಿರುಗುವುದರೊಂದಿಗೆ ಮೋದಿ ಮೈಸೂರು ಭೇಟಿ ಕೊನೆಗೊಂಡಿತು. ಮೋದಿ ಭೇಟಿಯ ಈ ಕಾರ್ಯಕ್ರಮಕ್ಕೆ ಸುಮಾರು 15 ಕೋಟಿ ರೂಪಾಯಿ ಕಾಮಗಾರಿಗೆ, 6ಕೋಟಿ ಭದ್ರತೆ, ಅಲಂಕಾರ, ಸ್ವಚ್ಚತೆ, ಯೋಗ ಕಾರ್ಯಕ್ರಮಕ್ಕೆ ಜನರ ತೆರಿಗೆ ಹಣವನ್ನು ವೆಚ್ಚ ಮಾಡಲಾಗಿದೆ.

ಆದರೆ ಮೋದಿಯವರು ತಮ್ಮ ಎರಡು ದಿನಗಳ ಕಾರ್ಯಕ್ರಮಗಗಳಲ್ಲಿ ಮೈಸೂರಿನ ಅಭಿವೃದ್ಧಿ ಬಗ್ಗೆ ಒಂದಕ್ಷರವನ್ನೂ ಮಾತನಾಡಲಿಲ್ಲ. ಇದರಿಂದಾಗಿ ಮೋದಿಯ ಭೇಟಿ ಬಗ್ಗೆ ನಿರೀಕ್ಷೆ ಇಟ್ಟಿದ ಜನರಿಗೆ ಭಾರಿ ನಿರಾಸೆ ಕಾದಿತ್ತು.

ಈ ನಡುವೆ ಮೋದಿಯವರಿಗೆ ಕೇವಲ ಅದ್ದೂರಿ ಸ್ವಾಗತ ಮಾತ್ರವಲ್ಲ ಪ್ರತಿಭಟನೆಯ ಸ್ವಾಗತವೂ ಇತ್ತು. 2014 ರಲ್ಲಿ ಮೋದಿ ಚುನಾವಣಾ ಪ್ರಚಾರಕ್ಕೆ ಮೈಸೂರಿಗೆ ಬಂದಾಗ ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಹೇಳಿದ್ದರು. ಮೋದಿ ಸರ್ಕಾರ ಈವರೆಗೆ 8 ಬಜೆಟ್ ಮಂಡಿಸಿದರೂ ಮೈಸೂರನ್ನು ಪ್ಯಾರಿಸ್ ಮಾಡುವ ಒಂದೇ ಒಂದು ಯೋಜನೆಯನ್ನು ನೀಡಿಲ್ಲ. ಈ ಸಂಭಂದ ಮೈಸೂರನ್ನು ಪ್ಯಾರಿಸ್ ಮಾಡಲು ಏನು ಮಾಡಿದ್ದರಿ... ಲೆಕ್ಕ ಕೊಡಿ ಅನ್ನು ಕಾರ್ಯಕ್ರಮವನ್ನು ಎಡ ಪಕ್ಷಗಳು, ರೈತ ಸಂಘಟನೆಗಳಿಂದ ನಗರದ ಗಾಂಧಿ ವೃತ್ತದಲ್ಲಿ ಹಮ್ಮಿಕೊಂಡು ಗೋ ಬ್ಯಾಕ್ ಮೋದಿ ಎನ್ನುವ ಘೋಷಣೆಯೊಂದಿಗೆ ಪ್ರತಿಭಟನೆ ನಡೆಯಿತು. ಆದರೆ ಜಿಲ್ಲಾಡಳಿತ ಪೋಲೀಸರನ್ನು ಬಳಸಿ ಮೋದಿ ವಿರುದ್ದ ಪ್ರತಿಭಟನೆ ನಡೆಸದಂತೆ ಪ್ರತಿಭಟನಾಕಾರರನ್ನು ಬಂಧಿಸಿ ಪ್ರತಿಭಡನೆಯನ್ನು ಮುರಿಯಲೆತ್ನಿಸಿತು. ದಲಿತ–ರೈತ ಸಂಘಟನೆಗಳಿಂದ ಬೆಳೆಗಳಿಗೆ ವೈಜ್ಞಾಜಿಕ ಬೆಲೆ ನಿಗದಿಪಡಿಸು ಸ್ವಾಮಿನಾಥನ್ ಆಯೋಗದ ವರದಿ ಜಾರಿ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಯಿತು.

ಮೋದಿ ಮೈಸೂರು ಭೇಟಿಯ ಉದ್ದೇಶವೇ ಬೇರೆ:

ಮೋದಿ ಅಂತರ ರಾಷ್ಟ್ರೀಯ ಯೋಗ ದಿನದಲ್ಲಿ ಭಾಗವಹಿಸಿದ್ದು ಕೇವಲ ನೆಪಮಾತ್ರ. ಆದರೆ ಮೈಸೂರು ಭೇಟಿಯ ಹಿಂದಿನ ಉದ್ದೇಶವೇ ಬೇರೇ ಇದೆ. 2023 ರಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆ ನಡೆಯನ್ನು ಗಮನದಲ್ಲಿಟ್ಟು ಮೋದಿ ಮೈಸೂರು ಭೇಟಿಯ ಕಾರ್ಯಕ್ರಮವನ್ನು ಸರ್ಕಾರಿ ವೆಚ್ಚದಲ್ಲಿ ಆಯೋಜಿಸಲಾಗಿತ್ತು. ಬಹು ಮುಖ್ಯವಾಗಿ ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಪಕ್ಷಕ್ಕೆ ಭದ್ರ ನೆಲೆ ಇಲ್ಲ. ಇಲ್ಲಿ ಏನಿದ್ದರೂ ಕಾಂಗ್ರೇಸ್, ಜೆಡಿಎಸ್‌ನದ್ದೇ ಪ್ರಾಬಲ್ಯ ಈ ನಿಟ್ಟಿಲ್ಲಿ ಬಿಜೆಪಿಯನ್ನು ಈ ಭಾಗದಲ್ಲಿ ನೆಲೆಗೊಳಿಸುವ ಪ್ರಯತ್ನವೇ ಮೋದಿ ಮೈಸೂರು ಭೇಟಿ ಉದ್ದೇಶವೆಂದು ಬಯಲಾಗಿದೆ. ಅಲ್ಲದೇ ಕೆಲವು ಬಿಜೆಪಿ ಶಾಸಕರು ಪಕ್ಷ ಬಿಡುವ ಸುದ್ದಿ ಇದ್ದು ಇದೂ ಒಂದು ಕಾರಣವಾಗಿದೆ ಮೋದಿ ಭೇಟಿ.


4 ದಿನ ಮೈಸೂರಿಗರ ಜೀವನ ಅಸ್ತವ್ಯಸ್ತ:

ಮೋದಿ ಭೇಟಿ ಹಿನ್ನೆಲೆಯಲ್ಲಿ ಕಾಮಾಗಾರಿ ಕೆಲಸಗಳಿಂದ, ಭದ್ರತೆಯ ನೆಪದಿಂದಾಗಿ ಹಲವು ರಸ್ತೆಗಳು ನಿರ್ಭಂದಿಸಲ್ಪಟ್ಟಿದ್ದವು, ಇದರಿಂದ ಸಾರ್ವಜನಿಕ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗಿತ್ತು. ಇನ್ನು ಬೀದಿ ಬದಿ ವ್ಯಾಪಾರವನ್ನೇ ನೆಚ್ಚಿಕೊಂಡಿದ್ದ ಸಣ್ಣಪುಟ್ಟ ವ್ಯಾಪಾರಿಗಳ ವ್ಯಾಪಾರವನ್ನು ಕಾರ್ಯಕ್ರಮ ನಡೆಯುವ ಸುತ್ತ ಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿತ್ತು, ಚೆನ್ನಾಗಿದ್ದ ರಸ್ತೆಗೆ ಮತ್ತೆ ಡಾಂಬರು, ಗುಂಡಿ ಬಿದ್ದ ರಸ್ತೆಗೆ ತೇಪೆ ಹಚ್ಚಲಾಗಿದೆ.

ಮತ್ತೊಂದು ಕಡೆ ಕಾರ್ಯಕ್ರಮದ ಯಶಸ್ಸಿನ ಹೆಗ್ಗಳಿಕೆ ಪಡೆಯಲು ಬಿಜೆಪಿ ಪಾಳಯದಲ್ಲಿ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಸಂಸದ ಪ್ರತಾಪ ಸಿಂಹ, ಶಾಸಕ ರಾಮದಾಸ್ ಮುಂಚೂಣಿಯಲ್ಲಿದ್ದರು. ಸರ್ಕಾರಿ ಸ್ವಾಮ್ಯದ ಆಕಾಶವಾಣಿ, ದೂರದರ್ಶನಗಳು ಪೈಪೋಟಿಗೆ ಬಿದ್ದವುಗಳಂತೆ ಮೋದಿ ಬಂದ ಹೆಲಿಕ್ಯಾಪ್ಟರ್ ಮೈಸೂರಿಗೆ ಲ್ಯಾಂಡ್ ಆಗಿದ್ದನಿಂದ ಹಿಡಿದು ಟೇಕ್ ಆಫ್ ಆಗುವವರೆಗೆ ಬಿತ್ತಸಿದ್ದವು. ಒಟ್ಟಿನಲ್ಲಿ ಸರ್ಕಾರಿ ಯಂತ್ರಗಳನ್ನು ದುರ್ಬಳಕೆ ಮಾಡಿಕೊಂಡು ಬಿಜೆಪಿ ತನ್ನ ರಾಜಕೀಯ ಕಾರ್ಯಕ್ರಮವನ್ನು ನಡೆಸುವಲ್ಲಿ ಯಶಸ್ವಿಯಾಯಿತೇ ಹೊರತು ಮೈಸೂರಿನ ದುಡಿವ ಜನರಿಗೆ ಅದರಲ್ಲೂ ರೈತ,ಕಾರ್ಮಿಕರಿಗೆ, ಯುವಜನರಿಗೆ ಯಾವುದೇ ಲಾಭವಾಗಲಿಲ್ಲ. ಇದು ಸಾರ್ವಜನಿಕರಲ್ಲೂ ಅಸಮಧಾನಕ್ಕೆ ಕಾರಣವಾಗಿದೆ.

ಯೋಗದ ನೆಪದಲ್ಲಿ ಐತಿಹಾಸಿಕ ಸ್ಥಳಗಳ ಬಳಕೆ:

75ನೇ ಸ್ವತಂತ್ರ್ಯದ ಸಮಯದಲ್ಲಿ ಆಜಾದಿ ಕ ಅಮೃತ್ ಮಹೋತ್ಸವ್ ಹೆಸರಿನಲ್ಲಿ ಈ ಬಾರಿಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕೇಂದ್ರ ಸರ್ಕಾರ ಐತಿಹಾಸಿಕ ಸ್ಥಳಗಳು, ದೇವಾಲಯಗಳಲ್ಲಿ ನಡೆಸುವಂತೆ ಸೂಚಿಸಿತು. ಮತ್ತು ಅಲ್ಲೇ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಮಾಡಿತು. ಆದರ ಭಾಗವಾಗೇಅ ಮೈಸೂರಿನಲ್ಲೂ ಅರಮನೆಯನ್ನೇ ಮೋದಿ ಯೋಗಾಸನ ಮಾಡಲು ಆಯ್ಕೆ ಮಾಡಲಾಗಿತ್ತು. ಒಟ್ಟಾರೆ ಮೋದಿಯ ಮೈಸೂರು ಭೇಟಿ ಮೂಗಿಗಿಂತ ಮೂಗುತಿ ಭಾರ ಎಂಬಂತಾಗಿದೆ.



‘ಅಗ್ನಿಪಥ್’ ಯೋಜನೆ ವಿರೋಧಿಸಿ ಮಂಗಳೂರಿನಲ್ಲಿ ಡಿವೈಎಫ್‌ಐ ಪ್ರತಿಭಟನೆ:

ಯುವಜನರ ಉದ್ಯೋಗದ ಹಕ್ಕನ್ನು ಕಸಿಯಲು ಹೊರಟಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ, ಅಗ್ನಿಪಥ್ ಯೋಜನೆಯ ಮೂಲಕ ಆರೆಸ್ಸೆಸ್ ಕಾರ್ಯಕರ್ತರಿಗೆ ಮಿಲಿಟರಿ ತರಬೇತಿ ಕೊಡಿಸಿ ಹಿಟ್ಲರ್ ಮಾದರಿಯ ಖಾಸಗಿ ಸೇನೆ ಕಟ್ಟುವ ಹುನ್ನಾರ ನಡೆಸಿದೆ ಎಂದು ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಸೇನೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವ ಅಗ್ನಿಪಥ್ ಯೋಜನೆ ವಿರೋಧಿಸಿ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನ ಮಿನಿ ವಿಧಾನಸೌಧದ ಎದುರು ಜೂನ್ 21 ರಂದು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಈಗಾಗಲೇ ಆರೆಸ್ಸೆಸ್ಸಿನಿಂದ ಯುವಕರಿಗೆ ಬಂದೂಕು ಸೇರಿದಂತೆ ಅರೆಬರೆ ಮಿಲಿಟರಿ ತರಬೇತಿಗೊಳಿಸುವ ಕಾರ್ಯ ನಡೆಯುತ್ತಿದೆ. ಇದೀಗ ಅಧಿಕೃತವಾಗಿ ಖಾಸಗಿ ಮಿಲಿಟರಿ ಕಟ್ಟಲು, ಅಗ್ನಿಪಥ ಯೋಜನಾ ತರಬೇತಿ ಹೊಂದಿದ ಯುವಕರನ್ನು ನಿಯೋಜಿಸುವ ಫ್ಯಾಸಿಸ್ಟ್ ಹುನ್ನಾರ ಇದಾಗಿದ್ದು, ಪ್ರಜ್ಞಾವಂತ ಯುವಕರು ಎಚ್ಚೆತ್ತುಕೊಳ್ಳಲು ಅವರು ಕರೆ ನೀಡಿದರು.

ಶಿಕ್ಷಣ ಪಡೆಯಲು ಮತ್ತು ಉದ್ಯೋಗವನ್ನು ಪಡೆಯಲು ಯುವಕರು ಹಕ್ಕು ಹೊಂದಿದ್ದಾರೆ. ಆದುದರಿಂದ ನಿರುದ್ಯೋಗಿ ಯುವಜನರ ಹೋರಾಟವನ್ನು ಡಿವೈಎಫ್‌ಐ ಇನ್ನಷ್ಟು ತೀವ್ರಗೊಳಿಸಲಿದೆ ಎಂದು ಅವರು ಹೇಳಿದರು.

ಪ್ರತಿಭಟನೆಯಲ್ಲಿ ಡಿವೈಎಫ್‌ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸಹ ಕಾರ್ಯದರ್ಶಿ ಮನೋಜ್ ವಾಮಂಜೂರು, ಮಾಜಿ ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು ಭಾಗವಹಿಸಿದ್ದರು.

ಎಸ್‌ಇಝಡ್ ಸಂಪರ್ಕ ಕಾರಿಡಾರ್ ರಸ್ತೆ ದುರಸ್ತಿಗೆ ಆಗ್ರಹಿಸಿ ಧರಣಿ

ಕೂಳೂರು–ಜೋಕಟ್ಟೆ ಎಸ್‌ಇಝಡ್ ಸಂಪರ್ಕದ ಎಂಆರ್‌ಪಿಎಲ್ ಕಂಪೆನಿ ಸುಪರ್ದಿಯಲ್ಲಿರುವ ಕಾರಿಡಾರ್ ರಸ್ತೆಯ ಹೊಂಡ ಗುಂಡಿ ಮುಚ್ಚಲು ಆಗ್ರಹಿಸಿ ಜೋಕಟ್ಟೆ ನಾಗರಿಕ ಹೋರಾಟ ಸಮಿತಿ ಹಾಗೂ ಡಿವೈಎಫ್‌ಐ ನೇತೃತ್ವದಲ್ಲಿ ಜೂನ್ 21 ರಂದು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಸದ್ರಿ ರಸ್ತೆಯು ಎಂಆರ್‌ಪಿಎಲ್‌ನ ಸ್ವಾಧೀನದಲ್ಲಿ ಇದ್ದರೂ, ಎಸ್‌ಇಝಡ್ ಹಲವಾರು ಕೈಗಾರಿಕೆಗಳು ಈ ರಸ್ತೆಯನ್ನು ಬಳಸುತ್ತಿದೆ. ರಸ್ತೆಯು ತೀರಾ ದುರವಸ್ಥೆಗೊಳಗಾಗಿದ್ದರೂ, ಎಂಆರ್‌ಪಿಎಲ್ ಆಗಲೇ ಅದನ್ನು ಬಳಕೆ ಮಾಡುತ್ತಿರುವ ಪ್ರತಿಷ್ಠಿತ ಕಂಪೆನಿಗಳೇ ಆಗಲೀ ಅಥವಾ ಜಿಲ್ಲಾಡಳಿತವಾಗಲೀ ಯಾವುದೇ ದುರಸ್ತಿ ಕ್ರಮ ಕೈಗೊಂಡಿಲ್ಲ. ಶೀಘ್ರದಲ್ಲಿ ಜಿಲ್ಲಾಡಳಿತ ಕ್ರಮಕೈಗೊಳ್ಳದಿದ್ದಲ್ಲಿ ಘೆರಾವ್ ಮಾಡುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಹೋರಾಟ ಸಮಿತಿಯ ಮುಖಂಡ ಮುನೀರ್ ಕಾಟಪಳ್ಳ, ಡಿವೈಎಫ್‌ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮಾತನಾಡಿದರು.



ಅತಿಥಿ ಅಂಕಣ

ಪ್ರೊ. ರಾಜೇಂದ್ರ ಚೆನ್ನಿ

'ಅಗ್ನಿಪಥ' ಅಗ್ನಿವೀರರನ್ನು ಸೃಷ್ಟಿಸುವುದೇ ಅಥವಾ ಕೋಮುವೀರರನ್ನು?

ಅಗ್ನಿಪಥ ಯೋಜನೆಯ ವಿವರಗಳನ್ನು ನೋಡಿದರೆ ಈ ಯೋಜನೆಯ ಒಳಗಿರುವ ಕರಾಳ ದುಷ್ಟತನ ಅರಿವಾಗುತ್ತದೆ. ಅನೇಕ ದುಷ್ಟ ಮಿದುಳುಗಳು ಶ್ರಮವಹಿಸಿ ಈ ಯೋಜನೆಯನ್ನು ಸಿದ್ಧಪಡಿಸಿವೆ. ಈ ಯೋಜನೆಯ ವಿರುದ್ಧ ಪ್ರತಿಭಟನೆ ಮತ್ತು ಆಕ್ರೋಶಗಳು ನೈಜವಾಗಿದ್ದವು ಮತ್ತು ಸಹಜವಾಗಿದ್ದವು. ಇದರ ಇನ್ನೊಂದು ಕರಾಳ ಮುಖವೆಂದರೆ 4 ವರ್ಷ ಆಯುಧ ಬಳಕೆ ಇತ್ಯಾದಿ ತರಬೇತಿ ಪಡೆದು (ಜೊತೆಗೆ ಸೈದ್ಧಾಂತಿಕ ತರಬೇತಿ ಪಡೆದು) ಹೊರಬರುವ ಯುವಕರು ಕೋಮು ಹಿಂಸೆಯಲ್ಲಿ ಕೋಮುವೀರರಾಗುವ ಸಾಧ್ಯತೆ ಇದೆ.

ಅಗ್ನಿಪಥ ಮತ್ತು ಅಗ್ನಿ ವೀರರನ್ನು ಕುರಿತು ದೇಶದ ಅನೇಕ ಭಾಗಗಳಲ್ಲಿ ಬೆಂಕಿ ಹತ್ತಿ ಉರಿದಿದೆ ಅಕ್ಷರಶಃ. ಎಂದಿನಂತೆ ನಿರೀಕ್ಷಿತವಾದ ರೀತಿಯಲ್ಲಿ ಈ ಪ್ರತಿಭಟನೆಯು ರಾಜಕೀಯ ಪಿತೂರಿ, ನೆರೆ ರಾಷ್ಟ್ರದ ಸಂಚು, "ಒಳಗಿನ ಶತ್ರುಗಳ ಸಂಚು" ಎನ್ನುವ ವಿವರಣೆಗಳು ಸರಕಾರದಿಂದ ಹಾಗೂ ಆಡಳಿತ ಪಕ್ಷದಿಂದ ಬಂದಿವೆ. ಅಲ್ಲದೆ ಪ್ರತಿಭಟನಾಕಾರರು ಹಿಂಸೆಗೆ ಇಳಿದಿದ್ದರಿಂದ ಅವರನ್ನು ದ್ರೋಹಿಗಳೆಂದು ಕರೆಯಲಾಗಿದೆ. ಆದರೆ ಅವರ ಮೇಲೆ UAPA ಇತ್ಯಾದಿ ಉಗ್ರ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಹಾಗೂ ಜೆಸಿಬಿಗಳನ್ನು ಅವರ ಮನೆಗಳನ್ನು ಉರುಳಿಸಲು ಕಳಿಸಲಾಗಿಲ್ಲ. ಕಾರಣ ಬಹಳ ಸರಳವಾಗಿದೆ. ಅವರು ಮುಸ್ಲಿಮರು ಅಲ್ಲ ಮತ್ತು ಈ ಪ್ರಕರಣದಲ್ಲಿ ಧಾರ್ಮಿಕವಾದ ಅಂಶಗಳಿಲ್ಲ. ಮುಖ್ಯವಾಗಿ ಈ ದೇಶದ ಪಡ್ಡೆಗಳು ಹಾಗೂ ಯುವಕರು ಮಾನ್ಯ ಪ್ರಧಾನ ಮಂತ್ರಿಗಳಾದ ಮೋದಿಯವರ ಪರವಾಗಿರುವುದರಿಂದ ಇಂಥ ಶಾಶ್ವತವೋಟ್ ಬ್ಯಾಂಕನ್ನು ಕಳೆದುಕೊಳ್ಳಲಾಗುವುದಿಲ್ಲ. ಅದೇ ಹೊತ್ತಿಗೆ ಪೊಲೀಸರ ಬಲಪ್ರಯೋಗದಿಂದ ಪ್ರತಿಭಟನೆಯನ್ನು ತಗ್ಗಿಸಲಾಗಿದೆ. ಅಲ್ಲದೆ ಪೋಲೀಸ್ ಠಾಣೆಯಲ್ಲಿ ಅಪರಾಧವೆಂದು ದಾಖಲೆಯಾದರೆ ಇನ್ನೆಂದೂ ಸೈನ್ಯಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲವೆಂದು ಸೇನಾ ಅಧಿಕಾರಿಗಳಿಂದಲೇ ಹೇಳಿಸಲಾಗಿದೆ. ಪ್ರತಿಭಟನೆಯ ಹಿಂಸೆಗೆ ಇಳಿದದ್ದು ಯಾವ ದೃಷ್ಟಿಯಿಂದಲೂ ಸರಿಯಲ್ಲ; ಸಮರ್ಥನೀಯವಲ್ಲ. ಅದರಲ್ಲೂ ಸಾರ್ವಜನಿಕ ಆಸ್ತಿಯನ್ನು ನಾಶಮಾಡಿದ್ದು ಕ್ಷಮಿಸಲಾಗದ ತಪ್ಪು ನಡೆ. ಅದೇ ಹೊತ್ತಿಗೆ ಅಗ್ನಿಪಥ ಯೋಜನೆಯ ಹಿಂದೆ ಇರುವ ಕರಾಳವಾದ ಅಪಾಯಕಾರಿಯಾದ ಚಿಂತನೆ ಹಾಗೂ ಸಿದ್ಧಾಂತಗಳು ಈ ಹಿಂಸೆಗಿಂತಲೂ ಭೀಕರವಾಗಿವೆ.

ಈ ಯೋಜನೆಯ ವಿರುದ್ಧ ಪ್ರತಿಭಟನೆ ಮತ್ತು ಆಕ್ರೋಶಗಳು ನೈಜವಾಗಿದ್ದವು ಮತ್ತು ಸಹಜವಾಗಿದ್ದವು ಎಂದು ಸರಕಾರವು ಯೋಚಿಸಿದ್ದರೆ ಸದ್ಯದ ಅನೇಕ ವಾಸ್ತವಗಳು ಅದಕ್ಕೆ ಅರ್ಥವಾಗುತ್ತಿದ್ದವು. ನಿರಂತರವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಕೋವಿಡ್ ಕಾಲದ ಕಾರ್ಮಿಕರ ವಲಸೆ, ಸಾವು ನೋವು, ಸರಕಾರದ ಅನೇಕ ಕಾರ್ಯಗಳು ದೇಶದ ಯುವಜನತೆಯಲ್ಲಿ ಅದೆಷ್ಟು ನಿರಾಸೆ ಹಾಗೂ ಅಸಮಾಧಾನ ಹುಟ್ಟಿಸಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದಿತ್ತು. ಹಾಗೆಯೆ ಕರ್ನಾಟಕ ರಾಜ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉದ್ಯೋಗಗಳಿಗೆ ಆಯ್ಕೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧವೂ ಯುವಜನತೆ ತುಂಬಾ ಅಸಮಾಧಾನದಲ್ಲಿದೆ. ಇದಕ್ಕೆ ಯಾವ ಪಕ್ಷ ಅಥವಾ ಸಿದ್ಧಾಂತದ ಒಳಸಂಚೂ ಕಾರಣವಲ್ಲ. ಅಸ್ತಿತ್ವದ ಸ್ಥಿತಿಗಳು ಅಷ್ಟು ಭಯಾನಕವಾಗಿರುತ್ತವೆ. ಬದುಕೂ ಇಲ್ಲ, ಭವಿಷ್ಯವೂ ಇಲ್ಲವೆನ್ನುವ ಸ್ಥಿತಿ ಯುವಜನರಿಗೆ ಬರಬಾರದು. ಬಂದರೆ ಅದು ಅಸಹನೀಯುವಾಗುತ್ತದೆ. ಅವರಲ್ಲಿ ಬಹುಪಾಲು ಜನ ಕೋಮುವಾದದ ಭ್ರಮಾತ್ಮಕ ರಾಜಕೀಯದಲ್ಲಿ ಕಳೆದುಹೋಗಿರಬಹುದು. ಇನ್ನೊಂದು ಬಗೆಯ ಹಿಂಸೆಯಲ್ಲಿ ತೊಡಗಿರಬಹುದು. ಆದರೆ ಮೂಲತಃ ಅವರು ನಾಳೆಗಳೇ ಇಲ್ಲದ ಇಂದು ದುಡಿದು ಉಣ್ಣಲಾಗದ ಅವಮಾನದಲ್ಲಿ ಬೇಯುವಂಥ ಜೀವಗಳು. ಇಂಥ ಸ್ಥಿತಿಯಲ್ಲಿ ದಿಢೀರನೆ ಸೈನ್ಯದಲ್ಲಿ ಖಾಯಂ ಉದ್ಯೋಗವೇ ಇಲ್ಲವೆನ್ನುವ ಯೋಜನೆಯನ್ನು ಜಾರಿಗೆ ತಂದರೆ ಅವರ ಮನಸ್ಥಿತಿಯು ಹೇಗಿರಬೇಡ? ಇಲ್ಲದಿದ್ದರೆ ಮೋದಿಯವರ ಗಾರುಡಿಯಲ್ಲಿರುವ ಸೂತ್ರದ ಬೊಂಬೆಗಳು ಎನ್ನುವ ಯುವಕರು ಯಾಕೆ ಯಾರ ಮಾತನ್ನೂ ಕೇಳುತ್ತಿಲ್ಲ? ಸಾಮಾಜಿಕ ತಾಣಗಳಲ್ಲಿ ಅವರ ವಿಡಿಯೋಗಳನ್ನು ನೋಡಿರಿ. ಅವರ ಮಾತುಗಳ ಹಿಂದಿರುವ ರೋಷವನ್ನು ಗಮನಿಸಿ. ಯಾವ ಹೊತ್ತಿಗಾದರೂ ಸಿಡಿಯುವ ಜ್ವಾಲಾಮುಖಿಯಂತೆ ಆಗಿದ್ದಾರೆ ಇವರೆಲ್ಲ.

ಅವರ ಸಂಶಯಗಳು ಸಕಾರಣವಾಗಿವೆ. ಮೊದಲನೇಯದಾಗಿ 40,000 ಉದ್ಯೋಗಗಳನ್ನು, ಹುದ್ದೆಗಳನ್ನು ಹೀಗೆ 4 ವರ್ಷದ ತಾತ್ಕಾಲಿಕ ಯೋಜನೆಯಲ್ಲಿ ಭರ್ತಿ ಮಾಡುತ್ತಾ ಹೋದರೆ ಖಾಯಂ ಸೇನಾಭರ್ತಿ ನಿಂತೇ ಹೋಗುತ್ತದೆ. ಅಂದರೆ ಅವಶ್ಯಕತೆ ಇದ್ದರೂ ಸರಕಾರವು ಖಾಯಂ ನೇಮಕ ಮಾಡಿಕೊಳ್ಳುವುದಿಲ್ಲ. ಸೇನೆಯೆಂದರೆ ಬರಿ ಉದ್ಯೋಗವಲ್ಲ, ಅದು ಯುವಕರಿಗೆ ಒಂದು ಅಂತಸ್ತು, ಸಾಮಾಜಿಕ ಗೌರವ ಇವೆಲ್ಲವನ್ನೂ ಅದು ತರುತ್ತದೆ. ಹೀಗಾಗಿಯೇ ಅದೊಂದು ಸಾರ್ಥಕತೆ ತರುವ ವಿಷಯವಾಗಿದೆ. ಕರ್ನಾಟಕದ ವಿಜಯಪುರ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಹಳ್ಳಿಗಳ ಬಡ ಕುಟುಂಬದ ಹಿಂದುಳಿದ ಜಾತಿಗಳ ಯುವಕರೇ ಬಹುಸಂಖ್ಯೆಯಲ್ಲಿ ಸಾಮಾನ್ಯ ಸೈನಿಕರಾಗಿ ಭರ್ತಿಯಾಗುತ್ತಾರೆ. ಒಮ್ಮೆ ಸೈನ್ಯ ಸೇರಿದರೆ ಅದು ಬಹು ಮುಖ್ಯ ಸಾಮಾಜಿಕ ಚಲನೆಯನ್ನು ತರುತ್ತದೆ. ಏಕೆಂದರೆ ಜಾತಿ, ವರ್ಗ ಇವುಗಳನ್ನು ಮೀರಿದ ಸೈನಿಕ, ಸೈನಿಕ ಮಾತ್ರನಾಗಿರುತ್ತಾನೆ. ಅಲ್ಲದೆ ಭಾರತೀಯ ಸಮಾಜದಲ್ಲಿ ಸೈನಿಕರನ್ನು ಆರಾಧಿಸಲಾಗುತ್ತದೆ.

ಆದರೆ 4 ವರ್ಷದಲ್ಲಿ ಮಾಜಿ ಆಗಿ ಹೊರಬರುವ ಯುವಕರಿಗೆ ಇದಾವುದೂ ಲಭ್ಯವಾಗುವುದಿಲ್ಲ. 18 ವರ್ಷಕ್ಕೆ ಈ ಯೋಜನೆ ಸೇರಿ 22ಕ್ಕೆ 'ಮಾಜಿ'ಯಾಗಿ ವಾಪಸ್ಸು ಬರುವ ಯುವಕರ ಪಾಡು ಏನಾಗುತ್ತದೆ ಎಂದು ಯಾರಾದರೂ ಊಹಿಸಬಹುದು. ಡೆಕ್ಕನ್ ಹೆರಾಲ್ಡ್ (21/6/2022) ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಅಗ್ನಿಪಥ ಯೋಜನೆಯ ವಿವರಗಳು ಪ್ರಕಟವಾಗಿವೆ. ಇವುಗಳನ್ನು ನೋಡಿದರೆ ಈ ಯೋಜನೆಯ ಒಳಗಿರುವ ಕರಾಳ ದುಷ್ಟತನ ಅರಿವಾಗುತ್ತದೆ.

1. 4 ವರ್ಷದ ನಂತರ 11 ರಿಂದ 12 ಲಕ್ಷ ಮೊತ್ತವನ್ನು ಕೊಡಲಾಗುವುದು ಎಂದು ಹೇಳಲಾಗಿದೆ. ನಿಜವೆಂದರೆ ಈ ಯೋಜನೆಯಲ್ಲಿ ಸೇರುವವರಿಗೆ ನಿಗದಿಯಾದ ಸಂಬಳ (consolidated pay) ವಾಗಿರುವ 30, 36 ಸಾವಿರಗಳಲ್ಲಿಯೇ ಶೇಕಡಾ 30% ಕಡಿತ ಮಾಡಿ ಆ ದುಡ್ಡನ್ನು 4 ವರ್ಷದ ನಂತರ ಕೊಡಲಾಗುತ್ತದೆ. 40,000 ಯುವ ಸೈನಿಕರ ಪ್ರತಿ ತಿಂಗಳ 36,000 ಸಾವಿರ ಸಂಬಳದ 40% ಅಂದರೆ ಎಷ್ಟು? ಇದನ್ನು ಖಂಡಿತವಾಗಿ ಅದಾನಿ, ಅಂಬಾನಿ ಮುಂತಾದ savings/insurance ಮಾದರಿಯ ಅಥವಾ ಠೇವಣಿ ಮಾದರಿಯ ಸ್ಕೀಮ್‌ಗಳಲ್ಲಿ ಸರಕಾರವು ಕಡ್ಡಾಯವಾಗಿ ಹೂಡುತ್ತದೆ. ಇಂಥ ಬಂಡವಾಳ ಶಾಹಿಗಳಿಗೆ 4 ವರ್ಷಗಳಲ್ಲಿ ಕ್ರಮೇಣವಾಗಿ ಲಭ್ಯವಾಗುವ ಹಣವನ್ನು ಲೆಕ್ಕ ಹಾಕಿ. ಒಬ್ಬ ಪ್ರತಿಭಟನಾಕಾರ ಹೇಳಿದ ಹಾಗೆ 'ನಾವು ದುಡಿದದ್ದರಲ್ಲಿ ಕಡಿತ ಮಾಡಿ 4 ವರ್ಷದ ನಂತರ ನಮಗೆ ಕೊಡುತ್ತಾರೆ. ಇದರಲ್ಲಿ ಸರಕಾರದ ಉದಾರತೆ ಏನು ಬಂತು?'
2. ಈ 4 ವರ್ಷಗಳಲ್ಲಿ ಅವರಿಗೆ ತುಟ್ಟಿಭತ್ಯೆ ಇರುವುದಿಲ್ಲ, ಮಿಲಿಟರಿ ಸೇವಾ ಸಂಬಳ, ಗ್ರ್ಯಾಚ್ಯುಇಟಿ, ಪಿಂಚಣಿಯಾವುದು ಇರುವುದಿಲ್ಲ.
3. ಈಗ ಮಾಜಿ ಸೈನಿಕರಿಗೆ ಕೊಡಲಾಗುವ ಆರೋಗ್ಯ ಸ್ಕೀಮ್, ಕ್ಯಾಂಟೀನ್ ಸ್ಟೋರ್ ಸೌಲಭ್ಯಯಾವುದೂ ಇರುವುದಿಲ್ಲ. ಅವರನ್ನು ex-servicemen ಎಂದು ಪರಿಗಣಿಸಲಾಗುವುದಿಲ್ಲ.
4. ಗಮನಿಸಿ. 4 ವರ್ಷದ ನಂತರ ಕೊಡಲಾಗುವ ತೆರಿಗೆ ರಹಿತ ಸೇವಾನಿಧಿಯ ಮೊತ್ತ 10.04 ಲಕ್ಷ ಗಳಾದರೆ ಅದರಲ್ಲಿ ಅವರ ಸಂಬಳದಿಂದ ಕಡಿತ ಮಾಡಿರುವ 5.2 ಲಕ್ಷ ರೂಪಾಯಿ ಇರುತ್ತದೆ.
5. ಒಂದು ವೇಳೆ 4 ವರ್ಷಗಳ ನಂತರ ಅವರು ಸೇನೆಗೆ ಖಾಯಂ ಆಗಿ ಭರ್ತಿ ಆದರೆ ಈ ನಿಧಿಯಲ್ಲಿ ಸರಕಾರದ ಪಾಲಾಗಿರುವ 5.2 ಲಕ್ಷ ಕೊಡಲಾಗುವುದಿಲ್ಲ!

ಹೇಗಿದೆ ಯೋಜನೆ? ಅನೇಕ ದುಷ್ಟ ಮಿದುಳುಗಳು ಶ್ರಮವಹಿಸಿ ಈ ಯೋಜನೆಯನ್ನು ಸಿದ್ಧಪಡಿಸಿವೆ.

ಇದರ ಇನ್ನೊಂದು ಕರಾಳ ಮುಖವೆಂದರೆ 4 ವರ್ಷ ಆಯುಧ ಬಳಕೆ ಇತ್ಯಾದಿ ತರಬೇತಿ ಪಡೆದು (ಜೊತೆಗೆ ಸೈದ್ಧಾಂತಿಕ ತರಬೇತಿ ಪಡೆದು) ಹೊರಬರುವ ಯುವಕರು ಕೋಮು ಹಿಂಸೆಯಲ್ಲಿ ಕೋಮುವೀರರಾಗುವ ಸಾಧ್ಯತೆ ಇದೆ. ಈ ಉದ್ದೇಶವಿರುವುದನ್ನು ಕರ್ನಾಟಕ ಸರಕಾರದ ವೈದ್ಯಕೀಯ ಶಿಕ್ಷಣ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಬಹಿರಂಗಪಡಿಸಿದ್ದಾರೆ. "ಯಾಕೆ ಆರೆಸ್ಸೆಸ್‌ನ ಯುವಕರು ಈ ಯೋಜನೆಯಲ್ಲಿ ಸೇರಬಾರದು" ಎಂದು ಪ್ರಶ್ನೆ ಮಾಡಿದ್ದಾರೆ. ಅದರ ಅರ್ಥವೆಂದರೆ ನಾವು ಅವರನ್ನೇ ಆಯ್ಕೆ ಮಾಡಿ ಈ ಯೋಜನೆಗೆ ಸೇರಿಸುತ್ತೇವೆ ಎಂದು. ಇನ್ನು ಈ ಯೋಜನೆಯ ತರಬೇತಿ ಯಾವುದಕ್ಕಾಗಿ ಎನ್ನುವುದನ್ನು ಬಿ.ಜೆ.ಪಿಯ ಕೇಂದ್ರ ಸರಕಾರದ ಒಬ್ಬಮಂತ್ರಿ ಮತ್ತು ರಾಷ್ಟ್ರೀಯ ಕಾರ್ಯದರ್ಶಿ ಇವರು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಒಬ್ಬರ ಪ್ರಕಾರ ಈ ತರಬೇತಿಯಿಂದ ಯುವಕರು ಇಲೆಕ್ಟ್ರಿಶಿಯನ್, ಕ್ಷೌರಿಕರು ಇತ್ಯಾದಿ ಆಗುತ್ತಾರೆ! ಇನ್ನೊಬ್ಬನ ಪ್ರಕಾರ ಅವರು ಸೆಕ್ಯುರಿಟಿ ಅಥವಾ ಕಾವಲುಗಾರರಾಗಿ ಬಿ.ಜೆ.ಪಿ., ಆರ್.ಎಸ್.ಎಸ್. ಕಚೇರಿಗಳಲ್ಲಿ ಕೆಲಸ ಮಾಡಬಹುದು! ಇವು ಒಬ್ಬ ಮಂತ್ರಿ, ಒಬ್ಬ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹೇಳಿರುವ ಅಧಿಕೃತ ಮಾತುಗಳು. ಇದು ಸಾಕಲ್ಲವೆ? ಕೊನೆಯದಾಗಿ 4 ವರ್ಷದ ನಂತರ ಹೊರಬಂದವರಿಗೆ ನಮ್ಮ ಉದ್ದಿಮೆಗಳಲ್ಲಿ ಉದ್ಯೋಗ ನೀಡುತ್ತೇವೆ ಎಂದು ಅನೇಕ ಉದ್ಯಮಪತಿಗಳು ಮುಂದೆ ಬಂದಿದ್ದಾರೆ. ಈಗಲೇ ಇರುವ ಮಾಜಿ ಸೈನಿಕರಿಗೆ ಇವರುಗಳು ನೀಡಿರುವ ಅವಕಾಶಗಳ ಅಂಕಿ ಸಂಖ್ಯೆ ನೋಡಿರಿ! ಕಳೆದು ಹೋದ ಉದ್ಯೋಗಗಳ ಸಂಖ್ಯೆ ನೋಡಿರಿ. ಖಂಡಿತವಾಗಿ ನೀವು ಪ್ರಜ್ಞೆ ತಪ್ಪುವುದು ಗ್ಯಾರಂಟಿ. ಉತ್ತರ ಕುಮಾರರ ಹಾಗೆ ಮಾತನಾಡುವವರನ್ನು fire eaters ಅನ್ನುತ್ತಾರೆ. ಇದೇ ಅಗ್ನಿಪಥದ ರಹಸ್ಯ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ನಿರುದ್ಯೋಗಿ ಯುವಜನರ ಆಕಾಂಕ್ಷೆಗಳನ್ನು ಗುರುತಿಸಿ– ಸಶಸ್ತ್ರ ಪಡೆಗಳನ್ನು ದುರ್ಬಲಗೊಳಿಸುವುದನ್ನು ನಿಲ್ಲಿಸಿ"..... ಪುಟ 2 ರಿಂದ

ರೈತರ ಹೋರಾಟಕ್ಕೆ ಹಲವಾರು ಸೇವೆಯಲ್ಲಿರುವ ಮತ್ತು ನಿವೃತ್ತ ಸಶಸ್ತ್ರ ಸಿಬ್ಬಂದಿಗಳು ವ್ಯಕ್ತಪಡಿಸಿದ ಬಹಿರಂಗ ಮತ್ತು ಆಂತರಿಕ ಬೆಂಬಲದಲ್ಲಿ ಸ್ಪಷ್ಟವಾಗಿದೆ.

ಧಾರ್ಮಿಕ ಮತ್ತು ಜನಾಂಗೀಯ ಅಲ್ಪಸಂಖ್ಯಾತರ ವಿರುದ್ಧ ಈಗಾಗಲೇ ಪ್ರಭುತ್ವ ಪ್ರಾಯೋಜಿತ ಫ್ಯಾಸಿಸ್ಟ್ ಹಿಂಸಾಚಾರದ ರೋಗ ತಟ್ಟಿರುವ ಭಾರತೀಯ ಸಮಾಜದ ಮಿಲಿಟರೀಕರಣಕ್ಕೆ "ಅಗ್ನಿಪಥ" ಯೋಜನೆಯು ಅನುವು ಮಾಡಿಕೊಡುತ್ತದೆ ಎಂಬುದು ತನ್ನ ಗಂಭೀರ ಕಳವಳ ಎಂದಿರುವ ಎಐಕೆಎಸ್, ಆರೆಸ್ಸೆಸ್ ಸಿದ್ಧಾಂತಿ ಸಾವರ್ಕರ್ ಅವರ ರಾಷ್ಟ್ರದ ಹಿಂದೂಕರಣ ಮತ್ತು ಹಿಂದೂಗಳ ಮಿಲಿಟರೀಕರಣದ ಪರಿಕಲ್ಪನೆಯಿಂದ ನಡೆಯುತ್ತಿರುವ ಬಿಜೆಪಿ ಸರ್ಕಾರವು ಸುರಕ್ಷಿತ ಉದ್ಯೋಗವನ್ನು ಹುಡುಕುತ್ತಿರುವ ಮುಗ್ಧ ಯುವಕರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತ, ಕೇಂದ್ರ ಸರ್ಕಾರವು ಗಿಮಿಕ್‌ಗಳ ಬದಲಿಗೆ ನಿರುದ್ಯೋಗ ಸಮಸ್ಯೆ ಮತ್ತು ಗ್ರಾಮಾಂತರದಲ್ಲಿನ ಕೃಷಿ ಬಿಕ್ಕಟ್ಟನ್ನು ವೈಜ್ಞಾನಿಕವಾಗಿ ಪರಿಹರಿಸಬೇಕು ಎಂದು ಒತ್ತಾಯಿಸಿದೆ. ರೈಲ್ವೆ, ವಿಶ್ವವಿದ್ಯಾನಿಲಯ ಮುಂತಾದ ವಿವಿಧ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ನೇಮಕಾತಿ ನಿಷೇಧವನ್ನು ಸಹ ಹಿಂಪಡೆಯಬೇಕು ಎಂದೂ ಅದು ಆಗ್ರಹಿಸಿದೆ.

ಬಿಜೆಪಿ ಸರ್ಕಾರ ಮತ್ತು ಸಂಘ ಪರಿವಾರದ ಪ್ರಚೋದನೆಗೆ ಒಳಗಾಗದೆ 2022 ರ ಜೂನ್ 21 ರಂದು ಈ ಮೋಸದ ಯೋಜನೆಯ ವಿರುದ್ಧ ದೇಶಾದ್ಯಂತ ಶಾಂತಿಯುತ ಪ್ರತಿಭಟನೆಗಳನ್ನು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ(ಎಐಎಡಬ್ಲ್ಯುಯು) ದ ಜೊತೆಗೆ ನಡೆಸಬೇಕು ಎಂದು ಎಐಕೆಎಸ್ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.





ಕೃಪೆ: ಪಿ. ಮಹಮ್ಮದ್, ವಾ.ಭಾ.

ಅಗ್ನಿಪಥ್ ಎಂಬ ವಿನಾಶಕಾರಿ ಯೋಜನೆ

ಕಾರ್ಪೋರೇಟ್–ಹಿಂದೂತ್ವ ಕೂಟಕ್ಕೆ ಅನುಕೂಲಕರ ಪ್ರಕ್ರಿಯೆ

ಭಾರತದ ಸಶಸ್ತ್ರ ಪಡೆಗಳಿಗೆ ಯೋಧರನ್ನು ನೇಮಿಸಿಕೊಳ್ಳುವ ಸ್ವರೂಪದಿಂದ ತೀವ್ರ ರೀತಿಯಲ್ಲಿ ದೂರ ಸರಿಯುವ ಅಗ್ನಿಪಥ್ ಯೋಜನೆಗೆ ದೇಶದಾದ್ಯಂತ ವ್ಯಾಪಕ ಪ್ರತಿರೋಧ ವ್ಯಕ್ತವಾಗಿದೆ. ಯುವಜನರು ಮತ್ತು ಎಲ್ಲ ವಿಭಾಗಗಳ ಮಾಜಿ ಯೋಧರು ವಿರೋಧ ದಾಖಲಿಸುತ್ತಿದ್ದಾರೆ. ತೀಕ್ಷ್ಣ ಪ್ರತಿರೋಧದ ನಡುವೆಯೂ ನೇಮಕಾತಿ ಕಾರ್ಯಕ್ರಮವನ್ನು ಮುಂದುವರಿಸುವಂತೆ ಸಶಸ್ತ್ರ ಪಡೆಗಳಿಗೆ ಕೇಂದ್ರ ಸರಕಾರ ನಿರ್ದೇಶಿಸಿದೆ.

ಸಶಸ್ತ್ರ ಪಡೆಗಳ ಅನೇಕ ಹಿರಿಯ ನಿವೃತ್ತ ಅಧಿಕಾರಿಗಳು ಮತ್ತು ರಕ್ಷಣಾ ವಿಶ್ಲೇಷಕರು ಯೋಜನೆಗೆ ಇರುವ ಆಕ್ಷೇಪಣೆಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿದ್ದಾರೆ.

ಶಬ್ದಾಡಂಬರ

ಎಲ್ಲಕ್ಕಿಂತ ಹೆಚ್ಚಾಗಿ, ಮುಖ್ಯವಾಗಿ ಗ್ರಾಮೀಣ ಹಿನ್ನೆಲೆಯ ಯುವಕರು ಶಬ್ದಾಡಂಬರದ 'ಅಗ್ನಿವೀರರು' ಎಂಬ ಶೀರ್ಷಿಕೆಯ ವಿನಾಶಕಾರಿ ಸ್ವರೂಪವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ.

ಈ ಯೋಜನೆ ಅಲ್ಪಾವಧಿಯ ಮಿಲಿಟರಿ ಗುತ್ತಿಗೆ ವ್ಯವಸ್ಥೆಗೆ ಕಾರಣವಾಗಲಿದ್ದು ಸೈನಿಕರ ಗುಣಮಟ್ಟ ಮತ್ತು ಪ್ರೇರೇಪಣೆಯ ಮೇಲೆ ದುಷ್ಪರಿಣಾಮ ಬೀರಲಿದೆ ಎಂಬ ವಾದಗಳನ್ನು ಮುಂದಿಡಲಾಗಿದೆ. ಶೇಕಡ 25ರಷ್ಟು ಅಗ್ನಿವೀರರನ್ನು ಮಾತ್ರ ದೀರ್ಘಾವಧಿ ಸೇವೆಯ ಸೇರ್ಪಡೆಗೆ ಆಯ್ಕೆ ಮಾಡಲಾಗುವುದು ಎಂಬಲ್ಲಿ ತಾರತಮ್ಯ ಅಂತರ್ಗತವಾಗಿರುವುದು ಸುಸ್ಪಷ್ಟ. ನಾಲ್ಕು ವರ್ಷಗಳ ಕರ್ತವ್ಯದ ಪ್ರವಾಸ ಮುಗಿದ ನಂತರ ಹೊರಬರುವವರ ಭವಿಷ್ಯ ಅಂತ್ಯವಾಗುತ್ತದೆ– ಈ ಎಲ್ಲಾ ವಾದಗಳು ತುಂಬಾ ಸಮಂಜಸವಾಗಿವೆ ಹಾಗೂ ಇವುಗಳು ಈ ದೋಷಪೂರಿತ ಯೋಜನೆಯ ಮಹತ್ವದ ಟೀಕೆಗಳಾಗಿವೆ.

ಆದರೆ ಅಗ್ನಿಪಥ್ ಯೋಜನೆಯು ಸಶಸ್ತ್ರ ಪಡೆಗಳು ಮತ್ತು ಪ್ರಭುತ್ವ ಹಾಗೂ ಸಮಾಜಕ್ಕೆ ಹೆಚ್ಚು ಅಪಾಯಕಾರಿಯಾಗುವಂಥ ಆಳವಾದ ಅಂಶವನ್ನು ಒಳಗೊಂಡಿದೆ ಎನ್ನುವುದನ್ನು ಮನಗಾಣಬೇಕು. ಭಾರತೀಯ ಪ್ರಭುತ್ವ ಮತ್ತು ಅದರ ಸಂಸ್ಥೆಗಳನ್ನು ಹಿಂದೂತ್ವದ ಚೌಕಟ್ಟಿನಲ್ಲಿ ಮರು–ರೂಪಿಸುವ ವ್ಯಾಪಕ ಯೋಜನೆಯ ಭಾಗವಾಗಿ ಇದನ್ನು ನೋಡಬೇಕಾಗುತ್ತದೆ. ಪ್ರಭುತ್ವದ ಇತರ ಅಂಗಗಳಂತೆ, ಸಶಸ್ತ್ರ ಪಡೆಗಳನ್ನು ಕೂಡ ತಮ್ಮ ಸೈದ್ಧಾಂತಿಕ ಪರಿಕಲ್ಪನೆಯ ಆಧಾರದಲ್ಲಿ ಪುನರ್‌ರಚಿಸಲು ಹಿಂದೂತ್ವ ಆಡಳಿತಗಾರರು ಹೊರಟಿದ್ದಾರೆ. ಸಶಸ್ತ್ರ ಪಡೆಗಳಲ್ಲಿ ಶಸ್ತ್ರಾಸ್ತ್ರ ತರಬೇತಿ ಪಡೆದು ಪ್ರತಿ ವರ್ಷ ಹೊರಬರುವ ಸಾವಿರಾರು ಸೈನಿಕರು ಹಿಂದೂ ಸಮಾಜವನ್ನು ಮಿಲಿಟರೀಕರಣಗೊಳಿಸುವ ಸಾವರ್ಕರ್‌ರ ಗುರಿಯನ್ನು ಪೂರ್ಣಗೊಳಿಸುವಲ್ಲಿ ಸ್ವಲ್ಪಮಟ್ಟಿಗೆ ಸಹಾಯಕರಾಗುತ್ತಾರೆ ಎನ್ನುವುದು ವಾಸ್ತವ.

ಸಿಡಿಎಸ್ ರಾಜಕೀಯ

ಇದರೊಂದಿಗೆ, ಭೂ ಸೇನೆ, ವಾಯು ಪಡೆ ಹಾಗೂ ನೌಕಾ ಪಡೆ–ಹೀಗೆ ಮೂರೂ ಪಡೆಗಳ ಮುಖ್ಯಸ್ಥ (ಚೀಫ್ ಆಫ್ ಡಿಫೆನ್ಸ್ ಸ್ಟಾಫ್–ಸಿಡಿಎಸ್) ಹುದ್ದೆಗೆ ನೇಮಕದ ಮಾನದಂಡವನ್ನು ಬದಲಾಯಿಸಲಾಗಿದ್ದು ಇದು ಸಶಸ್ತ್ರ ಪಡೆಗಳ ಉನ್ನತ ರಕ್ಷಣಾ ನಾಯಕತ್ವವನ್ನು ಇನ್ನಷ್ಟು ರಾಜಕೀಯಕರಣಗೊಳಿಸುವ ಮಾರ್ಗವನ್ನು ಮುಕ್ತಗೊಳಿಸಿದೆ.

'ಅಗ್ನಿವೀರ'ರಿಗೆ ಹೇಗೆ ತರಬೇತಿ ನೀಡಲಾಗುತ್ತದೆ ಎಂದು ಕಾದು ನೋಡಬೇಕಿದೆ. 'ಈ ಯುವಕರಲ್ಲಿ ಕಾನೂನು ಪಾಲನೆಯ ಅತ್ಯುತ್ತಮ ನಾಗರಿಕರನ್ನು ನೀವು ಕಾಣುತ್ತೀರಿ. ಅವರಲ್ಲಿ ರಾಷ್ಟ್ರೀಯವಾದದ ಭಾವನೆಗಳು ಇದ್ದು ರಾಷ್ಟ್ರೀಯ ಹಿತವನ್ನು ಕಾಯುತ್ತಾರೆ' ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಹೇಳಿರುವುದು ಈ ಪ್ರಶ್ನೆಗೆ ಕಾರಣವಾಗಿದೆ. ಹಿಂದೂತ್ವ ರಾಷ್ಟ್ರೀಯವಾದವನ್ನು ಕಲಿಸಲಾಗುತ್ತದೆಯೇ ಎಂಬ ಪ್ರಶ್ನೆ ಏಳುತ್ತದೆ.

ಸಶಸ್ತ್ರ ಪಡೆಗಳನ್ನು ಸೇರುವ ಆಕಾಂಕ್ಷಿ ಯುವಕರ ವಸ್ತುಶಃ ಬಂಡಾಯವನ್ನು ಎದುರಿಸಿದ ಸರಕಾರ, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ (ಸಿಆರ್‌ಪಿಎಫ್) ರಕ್ಷಣಾ ಉತ್ಪಾದನಾ ಘಟಕಗಳಲ್ಲಿ ಮತ್ತು ಇತರ ಸ್ಥಾವರಗಳ ನೇಮಕಗಳಲ್ಲಿ ಅಗ್ನಿವೀರರಿಗೆ ಶೇಕಡ 10 ಮೀಸಲಾತಿ ಒದಗಿಸುವುದಾಗಿ ತರಾತುರಿಯಲ್ಲಿ ಘೋಷಿಸಿದೆ. ಬೇರೆ ಬೇರೆ ಸಚಿವಾಲಯಗಳು ಕೂಡ ಇದೇ ರೀತಿಯ ಘೋಷಣೆಗಳನ್ನು ಮಾಡಿವೆ. ಆದರೆ, ಅತೃಪ್ತ ಯುವಕರನ್ನು ಸಮಾಧಾನಪಡಿಸಲು ಇವ್ಯಾವುದರಿಂದಲೂ ಸಾಧ್ಯವಾಗಿಲ್ಲ. ಅವರು ಹಾಗೂ ಬಹಳಷ್ಟು ಮಾಜಿ ಯೋಧರಿಗೆ ಇಂಥ ಆಶ್ವಾಸನೆಗಳ ಗತಿ ಏನೆಂಬುದು ಚೆನ್ನಾಗಿ ಗೊತ್ತಿದೆ.

ಮಾಜಿ ಯೋಧರ ನೇಮಕ ತೀರಾ ಅಲ್ಪ

ಕೇಂದ್ರ ಸರಕಾರದ ಇಲಾಖೆಗಳ ಗ್ರೂಪ್ ಸಿ ಹುದ್ದೆಗಳಲ್ಲಿ ಮಾಜಿ ಸೈನಿಕರಿಗೆ ಶೇಕಡ 10 ಹಾಗೂ ಗ್ರೂಪ್ ಡಿ ಹುದ್ದೆಗಳಲ್ಲಿ ಶೇಕಡ 20 ಮೀಸಲಾತಿ ಈಗಾಗಲೇ ಇದೆ. ರಕ್ಷಣಾ ಸಚಿವಾಲಯದ ಮಾಜಿ ಸೈನಿಕರ ಕಲ್ಯಾಣ ಇಲಾಖೆಯಡಿ ಬರುವ ಪುನರ್‌ವಸತಿ ಮಹಾ ನಿರ್ದೇಶನಾಲಯದಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ ಮೀಸಲಾತಿ ಕೋಟಾದಡಿಯ ಈ ಹುದ್ದೆಗಳನ್ನು ಬಹುತೇಕವಾಗಿ ಭರ್ತಿ ಮಾಡಿಲ್ಲ. ಗ್ರೂಪ್ ಸಿ ಹುದ್ದೆಗಳ ಒಟ್ಟಾರೆ ಉದ್ಯೋಗಿಗಳಲ್ಲಿ ಶೇಕಡ 1.26ರಷ್ಟು ಮಾತ್ರವೇ ಮಾಜಿ ಯೋಧರಿದ್ದಾರೆ. ಗ್ರೂಪ್ ಡಿ ನೌಕರರಲ್ಲಿ ಅವರ ಪ್ರಮಾಣ ಕೇವಲ ಶೇಕಡ 2.66 ಆಗಿದೆ. 77 ಇಲಾಖೆಗಳ ಪೈಕಿ 34ರಲ್ಲಿ ಇಷ್ಟು ಮಾಜಿ ಸೈನಿಕರಿದ್ದಾರೆ.

ಕೇಂದ್ರೀಯ ಅರೆಸೇನಾ ಪಡೆಗಳಲ್ಲಿ (ಪ್ಯಾರಾ ಮಿಲಿಟರಿ) ಮಾಜಿ ಯೋಧರಿಗೆಂದು ಇರುವ ಶೇಕಡ 10 ಮೀಸಲಾತಿಯಲ್ಲಿ, 2019ರ ಜೂನ್ 30ರವರೆಗಿನ ಲಭ್ಯ ಅಂಕಿಅಂಶ ಪ್ರಕಾರ ಅವುಗಳ ಗ್ರೂಪ್ ಸಿ ಹುದ್ದೆಗಳಲ್ಲಿ ಮಾಜಿ ಯೋಧರ ಪ್ರಮಾಣ ಕೇವಲ ಶೇಕಡ 0.47, ಗ್ರೂಪ್ ಬಿಯಲ್ಲಿ ಶೇಕಡ 0.87 ಹಾಗೂ ಗ್ರೂಪ್ ಎ ಹುದ್ದೆಗಳಲ್ಲಿ ಶೇ. 2.20 ಆಗಿದೆ. ಸರಕಾರಿ ಇಲಾಖೆಗಳಲ್ಲಿನ ಈ ನಿರಾಶಾದಾಯಕ ಅಂಕಿಅಂಶಗಳನ್ನು ನೋಡಿದರೆ, ಪಡೆಗಳಿಂದ ಹೊರಬರುವ ಅಗ್ನಿವೀರರ ಉಜ್ವಲ ಭವಿಷ್ಯವನ್ನು ಸರಕಾರವೇ ಖಾಸಗಿ ವಲಯದ ಪದತಲಕ್ಕೆ ತಳ್ಳುವುದು ನಿಶ್ಚಿತ ಎನ್ನುವುದು ತಿಳಿಯುತ್ತದೆ.

ಅಗ್ನಿವೀರರು ಸಶಸ್ತ್ರ ಪಡೆಗಳಿಂದ ನಿವೃತ್ತರಾದ ನಂತರ ಅವರನ್ನು ನೇಮಿಸಿಕೊಳ್ಳುವಂತೆ 85 ಭಾರತೀಯ ಕಂಪೆನಿಗಳಿಗೆ ಕೇಂದ್ರ ಸರಕಾರ ಕೋರಿಕೆ ಸಲ್ಲಿಸಿದೆ. ಸರಕಾರದಿಂದ ಈ ಮನವಿ ಬರುತ್ತಲೇ ದೊಡ್ಡ ದೊಡ್ಡ ಕಾರ್ಪೋರೇಟ್ ಕುಳಗಳಿಂದ ಅಗ್ನಿಪಥಕ್ಕೆ ಹೊಗಳಿಕೆಯ ಮಹಪೂರವೇ ಬಂದಿದೆ.

ಟಾಟಾ ಸಮೂದ ಅಧ್ಯಕ್ಷ ಎನ್. ಚಂದ್ರಶೇಖರನ್, ಮಹೀಂದ್ರಾ ಗ್ರೂಪ್‌ನ ಆನಂದ ಮಹೀಂದ್ರಾ, ಆರ್‌ಪಿಜಿ ಸಮೂಹದ ಹರ್ಷ ಗೋಯೆಂಕಾ, ಜೆಎಸ್‌ಡಬ್ಲ್ಯು ಸಮೂಹದ ಸಜ್ಜನ್ ಜಿಂದಾಲ್ ಮತ್ತು ಇತರ ಅನೇಕರು ಆಗ್ನಿಪಥ್ ಯೋಜನೆ ಸ್ವಾಗತಿಸಿ ಹೇಳಿಕೆಗಳನ್ನು ನೀಡಿದ್ದಾರೆ.

ಆ ಪೈಕಿ ಆನಂದ ಮಹೀಂದ್ರಾರ ಹೇಳಿಕೆ ಬಹಳ ವಿಚಿತ್ರವಾಗಿದೆ. 'ಅಗ್ನಿವೀರರ ಶಿಸ್ತು ಮತ್ತು ಅವರು ಪಡೆಯುವ ತರಬೇತಿ ಅವರನ್ನು ಆದ್ಯತೆ ಮೇಲೆ ಉದ್ಯೋಗಕ್ಕೆ ಸೇರಿಸಿಕೊಳ್ಳಲು ಅರ್ಹವಾಗಿರುತ್ತದೆ. ಇಂಥ ತರಬೇತಾದ, ಸಮರ್ಥ ಯುವಜನರನ್ನು ನೇಮಿಸಿಕೊಳ್ಳುವ ಅವಕಾಶವನ್ನು ಮಹೀಂದ್ರಾ ಸಮೂಹ ಸ್ವಾಗತಿಸುತ್ತದೆ' ಎಂದು ಅವರು ಹೇಳಿದ್ದಾರೆ.

ತರಬೇತಿ ಶಾಲೆ!

ಹಿಂದೂತ್ವ–ಕಾರ್ಪೋರೇಟ್ ಮೈತ್ರಿಯ ಒಂದು ಉತ್ತಮ ಉದಾಹರಣೆಯನ್ನು ಇಲ್ಲಿ ಕಾಣಬಹುದಾಗಿದೆ. ಕಾರ್ಪೋರೇಟ್ ವಲಯವು ಅಗ್ನಿಪಥ್ ಯೋಜನೆಯನ್ನು ಬಣ್ಣಿಸುವ ರೀತಿ ನೋಡಿದರೆ ಸೇನೆಯು ದೊಡ್ಡ ಉದ್ಯಮಗಳಿಗೆ ಉದ್ಯೋಗಿಗಳನ್ನು ಸಿದ್ಧಪಡಿಸುವ ತರಬೇತಿ ಶಾಲೆ ಎಂಬಂತೆ ಭಾಸವಾಗುತ್ತದೆ.

ಏನಿದ್ದರೂ ಸಾವಿರಾರು ಮಾಜಿ ಯೋಧರು ಮತ್ತು ನಿವೃತ್ತ ಅಧಿಕಾರಿಗಳು ಈಗಾಗಲೇ ಇದ್ದು ಅವರನ್ನು ಕಾರ್ಪೋರೇಟ್ ಕಂಪೆನಿಗಳು ನೇಮಿಸಿಕೊಂಡಿದ್ದು ತೀರಾ ಅಲ್ಪ ಎನ್ನುವುದು ಕಟು ವಾಸ್ತವವಾಗಿದೆ.

ಅಗ್ನಿಪಥ್ ಯೋಜನೆಗೆ ಕಾರ್ಪೋರೇಟ್ ವಲಯ ಬೆಂಬಲ ನೀಡುತ್ತಿರುವುದಕ್ಕೆ ನಿಜವಾದ ಕಾರಣ ಬೇರೆಯೇ ಇದೆ. ರಕ್ಷಣಾ ಉತ್ಪಾದನಾ ಕೈಗಾರಿಕೆಯನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸಿರುವುದರಿಂದ ಟಾಟಾ ಮತ್ತು ಮಹೀಂದ್ರಾರಂಥ ದೊಡ್ಡ ಕುಳಗಳು ರಕ್ಷಣಾ ಉತ್ಪಾದನಾ ಯೋಜನೆಗಳಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಗುತ್ತಿಗೆ ಆಧಾರದಲ್ಲಿ ಸೈನಿಕರ ನೇಮಕಾತಿ ಮತ್ತು ಅಲ್ಪಾವಧಿಯ ಸೇವೆ ಮುಗಿದ ನಂತರ ಹೊರಬರುವ ದೊಡ್ಡ ಸಂಖ್ಯೆಯ ಯೋಧರು ಭವಿಷ್ಯದಲ್ಲಿ ಕಾರ್ಪೋರೇಟ್ ಕಂಪೆನಿಗಳ ಹಿತಕ್ಕೆಅನುಕೂಲಸ್ಥರಾಗುತ್ತಾರೆ. ಸಶಸ್ತ್ರ ಪಡೆಗಳ ಮರುಸಂಯೋಜನೆ ಮತ್ತು ರಕ್ಷಣಾ ಉದ್ಯಮಗಳ ಖಾಸಗೀಕರಣದಲ್ಲಿ ಕಾರ್ಪೋರೇಟ್‌ಗಳ ಹಿತ ಒಳಗೊಂಡಿದ್ದರೆ, ದೊಡ್ಡ ಸಂಖ್ಯೆಯಲ್ಲಿ ಹೊರಬರುವ ಸೈನಿಕರನ್ನು ತಮ್ಮ ಪಡೆಗೆ ಸೇರಿಸಿಕೊಳ್ಳುವ ಹುನ್ನಾರ ಹಿಂದೂತ್ವ ಶಕ್ತಿಗಳದ್ದಾಗಿದೆ. ಕೆಲಸ ಸಿಗದೆ ಹತಾಶೆ ವ್ಯಕ್ತಪಡಿಸುವ ಮತ್ತು ಸಮಾಜದಲ್ಲಿ ಸ್ಥಾನಮಾನ ಕಳೆದುಕೊಳ್ಳುವ ಈ ಯೋಧರನ್ನು ಅವರು ಬಳಸಿಕೊಳ್ಳಲಿದ್ದಾರೆ.

ಬಿಜೆಪಿ ಕಚೇರಿಗಳಿಗೆ ಭದ್ರತಾ ಸಿಬ್ಬಂದಿ ನೇಮಿಸುವುದಿದ್ದರೆ ಅಗ್ನಿವೀರರಿಗೆ ತಾನು ಆದ್ಯತೆ ಕೊಡುವುದಾಗಿ ಬಿಜೆಪಿ ನಾಯಕ ಕೈಲಾಸ್ ವಿಜಯವರ್ಗೀಯ ಹೇಳಿರುವುದು ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಉದ್ದೇಶ ಏನೆಂಬುದು ಬಹಿರಂಗವಾಗಿದೆ. ಇದೇ ಆದ್ಯತೆಯನ್ನು ಬಜರಂಗ ದಳ ಮತ್ತು ಹಿಂದೂತ್ವ ಪಡೆಗೆ ನೇಮಿಸಿಕೊಳ್ಳಲು ವಿಸ್ತರಿಸಲಾಗುತ್ತದೆ.

ಅಗ್ನಿಪಥ್ ಯೋಜನೆಯು ಭಾರತೀಯ ಪ್ರಭುತ್ವದ ಒಂದು ಮಹತ್ವದ ಸಂಸ್ಥೆಯಾದ ಸಶಸ್ತ್ರ ಪಡೆಗಳ ಮೇಲಿನ ದಾಳಿಯಾಗಿದೆ. ಇದನ್ನು ವಿರೋಧಿಸಿ, ಪ್ರತಿಭಟಿಸಿ ವಾಪಸ್ ಪಡೆಯುವಂತೆ ಮಾಡುವುದು ಅಗತ್ಯವಾಗಿದೆ.

ಅನು: ವಿಶ್ವ

ಅಗ್ನಿಪಥ್ ಯೋಜನೆಯು ಸಶಸ್ತ್ರ ಪಡೆಗಳು ಮತ್ತು ಪ್ರಭುತ್ವ ಹಾಗೂ ಸಮಾಜಕ್ಕೆ ಹೆಚ್ಚು ಅಪಾಯಕಾರಿಯಾಗುವಂಥ ಆಳವಾದ ಅಂಶವನ್ನು ಒಳಗೊಂಡಿದೆ ಎನ್ನುವುದನ್ನು ಮನಗಾಣಬೇಕು. ಭಾರತೀಯ ಪ್ರಭುತ್ವ ಮತ್ತು ಅದರ ಸಂಸ್ಥೆಗಳನ್ನು ಹಿಂದೂತ್ವದ ಚೌಕಟ್ಟಿನಲ್ಲಿ ಮರು–ರೂಪಿಸುವ ವ್ಯಾಪಕ ಯೋಜನೆಯ ಭಾಗವಾಗಿ ಇದನ್ನು ನೋಡಬೇಕಾಗುತ್ತದೆ. ಪ್ರಭುತ್ವದ ಇತರ ಅಂಗಗಳಂತೆ, ಸಶಸ್ತ್ರ ಪಡೆಗಳನ್ನು ಕೂಡ ತಮ್ಮ ಸೈದ್ಧಾಂತಿಕ ಪರಿಕಲ್ಪನೆಯ ಆಧಾರದಲ್ಲಿ ಪುನರ್‌ರಚಿಸಲು ಹಿಂದೂತ್ವ ಆಡಳಿತಗಾರರು ಹೊರಟಿದ್ದಾರೆ. ಸಶಸ್ತ್ರ ಪಡೆಗಳಲ್ಲಿ ಶಸ್ತ್ರಾಸ್ತ್ರ ತರಬೇತಿ ಪಡೆದು ಪ್ರತಿ ವರ್ಷ ಹೊರಬರುವ ಸಾವಿರಾರು ಸೈನಿಕರು ಹಿಂದೂ ಸಮಾಜವನ್ನು ಮಿಲಿಟರೀಕರಣಗೊಳಿಸುವ ಸಾವರ್ಕರ್‌ರ ಗುರಿಯನ್ನು ಪೂರ್ಣಗೊಳಿಸುವಲ್ಲಿ ಸ್ವಲ್ಪಮಟ್ಟಿಗೆ ಸಹಾಯಕರಾಗುತ್ತಾರೆ ಎನ್ನುವುದು ವಾಸ್ತವ.

— **ಪ್ರಕಾಶ್ ಕಾರಟ್** —



ಕೃಪೆ:

ಭಾರತದಲ್ಲಿ ಕಟ್ಟಡ ನಿರ್ಮಾಣ ಉದ್ಯಮ: ಒಂದು ನೋಟ



ಭಾರತದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯ ಮೇಲೆ ನಿರ್ಮಾಣ ಉದ್ಯಮವು ಪ್ರಮುಖ ಪರಿಣಾಮ ಬೀರುತ್ತದೆ. ಭಾರತದ ಕಾರ್ಮಿಕರಿಗೆ ಈ ಉದ್ಯಮವು ಎರಡನೇ ಅತಿ ದೊಡ್ಡ ಉದ್ಯೋಗದಾತವಾಗಿದೆ. ಇದು ಕೃಷಿ ಹೊರತುಪಡಿಸಿದರೆ ಭಾರತದಲ್ಲಿ 2 ನೇ ಅತಿದೊಡ್ಡ ಆರ್ಥಿಕ ಚಟುವಟಿಕೆಯಾಗಿದೆ. ಕಳೆದ 50 ವರ್ಷಗಳಲ್ಲಿ ಭಾರತದ ಅಭಿವೃದ್ಧಿಯಲ್ಲಿ 40% ಕ್ಕಿಂತ ಹೆಚ್ಚು ಹೂಡಿಕೆ ಪಾಲನ್ನು ನಿರ್ಮಾಣ ವಲಯ ಹೊಂದಿದೆ. ಭಾರತದ ಜನಸಂಖ್ಯೆಯ ಸುಮಾರು 16% ಜನಸಂಖ್ಯೆಯು ತಮ್ಮ ದಿನ ನಿತ್ಯದ ಬದುಕಿಗಾಗಿ ನಿರ್ಮಾಣದ ಮೇಲೆ ಅವಲಂಬಿತವಾಗಿದೆ. ಭಾರತದಲ್ಲಿ ರಸ್ತೆಗಳು ಮತ್ತು ಸಂವಹನಗಳಿಂದ ಹಿಡಿದು ವಿದ್ಯುತ್ ಮತ್ತು ವಿಮಾನ ನಿಲ್ದಾಣಗಳವರೆಗೆ ಖಾಸಗಿ ವಲಯವು ವಿವಿಧ ಮೂಲಸೌಕರ್ಯ ವಿಭಾಗಗಳಲ್ಲಿ ಪ್ರಮುಖ ಉಧ್ಯಮವಾಗಿ ಹೊರಹೊಮ್ಮುತ್ತಿದೆ ಆದರೆ ಇಲ್ಲಿ ಕಾರ್ಮಿಕರ ಜೀವ ಮತ್ತು ಜೀವನಕ್ಕೆ ಯಾವುದೇ ಭದ್ರತೆ ಎಂಬುದು ಇಲ್ಲ. ಇಂತಹ ಸನ್ನಿವೇಶದಲ್ಲಿ ಭವಿಷ್ಯದ ನಿರ್ಮಾಣ ವಲಯ ಹಾಗೂ ಅಲ್ಲಿಯ ಕಾರ್ಮಿಕ ಸ್ಥಿತಿ ಗತಿಗಳ ಕುರಿತು ಬೆಳಕು ಚೆಲ್ಲಿದ್ದಾರೆ ಕನ್ಸಸ್ಟ್ರಕ್ಷನ್ ವರ್ಕರ್‍ಸ್ ಫೆಡರೇಷನ್ ಆಫ್ ಇಂಡಿಯಾದ ರಾಷ್ಟ್ರೀಯ ಉಪಾಧ್ಯಕ್ಷ **ದೇಬಂಜನ್ ಚಕ್ರವರ್ತಿ** ಹಾಗೂ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ **ಕೆ. ಮಹಾಂತೇಶ್.**



ದೇಶೀಯ ಮತ್ತು ಅಂತರಾಷ್ಟ್ರೀಯ ಉತ್ಪಾದನಾ ಚಟುವಟಿಕೆಗಳ ಹೆಚ್ಚಳದಿಂದಾಗಿ ಭಾರತೀಯ ನಿರ್ಮಾಣ ಉದ್ಯಮವು ಸಾಮಾನ್ಯವಾಗಿ ವರ್ಷಕ್ಕೆ ಸರಾಸರಿ 9–11% ದರದಲ್ಲಿ ಬೆಳೆಯುತ್ತಿದೆ.

ಭಾರತದಲ್ಲಿ ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ವಾಣಿಜ್ಯ ಮತ್ತು ರಿಯಲ್ ಎಸ್ಟೇಟ್ ಯೋಜನೆಗಳ ಒಟ್ಟು ಮಾರುಕಟ್ಟೆ ಮೌಲ್ಯವು ಸರಿಸುಮಾರು $440 ಕೋಟಿಗಳು. (1 USD = 77-69 INR) [R.34,183.60 ಕೋಟಿಗಳು]. ಭಾರತ ಸರ್ಕಾರವು ರಿಯಲ್ ಎಸ್ಟೇಟ್ ಮತ್ತು ಮೂಲ ಸೌಕರ್ಯ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆದಾರರನ್ನು ಹುರಿದುಂಬಿಸಿದ ಪರಿಣಾಮವಿದು

ರಿಯಲ್ ಎಸ್ಟೇಟ್ ಮತ್ತು ಮೂಲಸೌಕರ್ಯದಲ್ಲಿ 100% ವಿದೇಶಿ ನೇರ ಹೂಡಿಕೆಯನ್ನು (FDI) ಪ್ರೋತ್ಸಾಹಿಸುವ ಭಾಗವಾಗಿ ಕೇಂದ್ರ ಬಜೆಟ್ 2022–23, ಸರ್ಕಾರ 10 ಲಕ್ಷ ಕೋಟಿ ರೂ.ಗಳನ್ನು ಮೀಸಲಿಡುವ ಮೂಲಕ ಮೂಲಸೌಕರ್ಯ ಕ್ಷೇತ್ರಕ್ಕೆ ಭಾರಿ ಉತ್ತೇಜನ ನೀಡಿದೆ.

ಹೆಚ್ಚಿದ ಖಾಸಗಿ ವಲಯದ ಒಳಗೊಳ್ಳುವಿಕೆ

ಭಾರತದಲ್ಲಿ ರಸ್ತೆಗಳು ಮತ್ತು ಸಂವಹನಗಳಿಂದ ಹಿಡಿದು ವಿದ್ಯುತ್ ಮತ್ತು ವಿಮಾನ ನಿಲ್ದಾಣಗಳವರೆಗೆ ಖಾಸಗಿ ವಲಯವು ವಿವಿಧ ಮೂಲಸೌಕರ್ಯ ವಿಭಾಗಗಳಲ್ಲಿ ಪ್ರಮುಖ ಉಧ್ಯಮವಾಗಿ ಹೊರಹೊಮ್ಮುತ್ತಿದೆ, ಭೌತಿಕ ಮತ್ತು ಸಾಮಾಜಿಕ ಮೂಲಸೌಕರ್ಯಕ್ಕೆ ಖಾಸಗಿ ಹೂಡಿಕೆಯು ಹೆಚ್ಚಿನ ಬೆಳವಣಿಗೆಯಲ್ಲಿ ಭಾರತಕ್ಕೆ ಅತ್ಯಂತ ಪ್ರಮುಖವಾಗಿದ್ದು ಇದು 2024–25 ರ ವೇಳೆಗೆ US 5 ಟ್ರಿಲಿಯನ್ [5 ಲಕ್ಷ ಕೋಟಿ ಆರ್ಥಿಕತೆಯನ್ನು ಉಂಟು ಮಾಡಲಿದೆ ಎಂದು ಹೇಳಲಾಗುತ್ತಿದೆ.

ನಿರ್ಮಾಣ ಅಭಿವೃದ್ಧಿಯಲ್ಲಿ (ಎಫ್‌ಡಿಐ) ನೇರ ವಿದೇಶಿ ಬಂಡವಾಳ

(ಟೌನ್‌ಶಿಪ್‌ಗಳು, ವಸತಿ, ನಿರ್ಮಿಸಿದ ಮೂಲಸೌಕರ್ಯ ಮತ್ತುನಿರ್ಮಾಣ ಅಭಿವೃದ್ಧಿ ಯೋಜನೆಗಳ (ಮೂಲಸೌಕರ್ಯ) ಚಟುವಟಿಕೆಯ ರೆಕ್ಟರ್‌ಗಳು US$ 26:17 ಶತಕೋಟಿ (1 ಬಿಲಿಯನ್ = 1000 15$ 86–30 ಶತಕೋಟಿ, ಕ್ರಮವಾಗಿ. ಏಪ್ರಿಲ್ 2000 – ಡಿಸೆಂಬರ್ 2021.

ಮಾಹಿತಿ: ಮೀಡಿಯಾ ಸೌದರ್, rMLLn, ಈಕ್ವಿಟೀಸ್ ಕ್ಯಾಪಿಟಲ್, ಇವೈ, ನ್ಯಾಷನಲ್ ಇನ್ಫ್ರಾಸ್ಟ್ರಕ್ಚರ್ ಪೈಪ್‌ಲೈನ್.

ಭಾರತೀಯ ಮೂಲಸೌಕರ್ಯದಲ್ಲಿ ಹೊಸ ಹೂಡಿಕೆಗಳು. (ಅಮೇರಿಕನ್ ಟ್ರೀಲಿಯನ್)

ವಲಯಗಳು	2017	2018	2019	2020	2021
ರಸ್ತೆ	43.043	68.302	41.405	16.51	27.222
ರೈಲ್ವೆ	45.89	22.269	32.032	13.325	1.703
ವಿದ್ಯುತ್ ಹಂಚಿಕೆ	5.824	1.235	12.623	0.494	2.249
ವಿದ್ಯುತ್	21.138	13.572	24.934	16.679	13.039
ರಿಯಲ್ ಎಸ್ಟೇಟ್	14.69	19.305	17.407	17.342	12.558
ಮೂಲಸೌಕರ್ಯ	44746	41.392	87.269	23.114	35.113
ಗಣಿ	6.747	9.477	13.156	8.736	8.125

ಮೂಲ: ಡೋಲಾಟ್ ಕ್ಯಾಪಿಟಲ್ ಆನ್‌ಸ್ಟ್ರಕ್ಷನ್ ಮತ್ತು ಇನ್ಫ್ರಾಸ್ಟ್ರಕ್ಚರ್, ಸೆಪ್ಟೆಂಬರ್ 2020

ಒಟ್ಟಾರೆ ಆರ್ಥಿಕತೆಯ ಮೇಲೆ ನಿರ್ಮಾಣದ ವಲಯದ ಪರಿಣಾಮ

ಭಾರತದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯ ಮೇಲೆ ನಿರ್ಮಾಣ ಉದ್ಯಮವು ಪ್ರಮುಖ ಪರಿಣಾಮ ಬೀರುತ್ತದೆ. ಭಾರತದ ಕಾರ್ಮಿಕರಿಗೆ ಈ ಉದ್ಯಮವು ಎರಡನೇ ಅತಿ ದೊಡ್ಡ ಉದ್ಯೋಗದಾತವಾಗಿದೆ. ಇದು ಕೃಷಿ ಹೊರತುಪಡಿಸಿದರೆ ಭಾರತದಲ್ಲಿ 2 ನೇ ಅತಿದೊಡ್ಡ ಆರ್ಥಿಕ ಚಟುವಟಿಕೆಯಾಗಿದೆ. ಕಳೆದ 50 ವರ್ಷಗಳಲ್ಲಿ ಭಾರತದ ಅಭಿವೃದ್ಧಿಯಲ್ಲಿ 40% ಕ್ಕಿಂತ ಹೆಚ್ಚು ಹೂಡಿಕೆ ಪಾಲನ್ನು ನಿರ್ಮಾಣ ವಲಯ ಹೊಂದಿದೆ. ಭಾರತದ ಜನಸಂಖ್ಯೆಯ ಸುಮಾರು 16% ಜನಸಂಖ್ಯೆಯು ತಮ್ಮ ದಿನ ನಿತ್ಯದ ಬದುಕಿಗಾಗಿ ನಿರ್ಮಾಣದ ಮೇಲೆ ಅವಲಂಬಿತವಾಗಿದೆ.

ಕೆಲಸಗಾರರ ಪಡೆ

ಭಾರತದಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ಸುಮಾರು 7 ಕೋಟಿ ಕಾರ್ಮಿಕರು, ಉದ್ಯೋಗಿಗಳು, ತಂತ್ರಜ್ಞರು, ಎಂಜಿನಿಯರ್‌ಗಳು, ಡ್ರಾಫ್ಟ್ ಮ್ಯಾನ್ ಯಂತ್ರ. ನಿರ್ವಾಹಕರು ಕೆಲಸ ಮಾಡುತ್ತಿದ್ದಾರೆ. ಒಟ್ಟು ಉದ್ಯೋಗಿಗಳ 10% ರಷ್ಟು ಕೌಶಲ್ಯ ಮತ್ತು ಉನ್ನತ ಕೌಶಲ್ಯ, ವೃತ್ತಿಪರರು ಮಾತ್ರ ಉಳಿದ 90%. ರಷ್ಟು ಕೌಶಲ್ಯರಹಿತ ಮತ್ತು ಅರೆ ಕೌಶಲ್ಯ ಉದ್ಯೋಗಿಗಳು.

ಸುಮಾರು 30,000 ಗುತ್ತಿಗೆದಾರರು ಸಂಘಟಿತ ನಿರ್ಮಾಣ ವಲಯದಲ್ಲಿ (ದೊಡ್ಡದು/ಮಧ್ಯಮ ಪ್ರಮಾಣದ ಕೆಲಸದಲ್ಲಿ) ಮತ್ತು ಸುಮಾರು 1,20,000 ಗುತ್ತಿಗೆದಾರರು. ಅಸಂಘಟಿತ / ನೋಂದಾಯಿಸಲಾಗದ ವಲಯದಲ್ಲಿ (ಮಧ್ಯಮದಿಂದ ಸಣ್ಣ ಕೆಲಸದ ಸಂಪುಟಗಳು) ಕಾರ್ಯನಿತರಾಗಿದ್ದಾರೆ.

ಬಜೆಟ್ ನಿಧಿಯ ಹಂಚಿಕೆ

ರಸ್ತೆಗಳು ಮತ್ತು ವಿಮಾನ ನಿಲ್ದಾಣಗಳು

ಕೇಂದ್ರ ಸರ್ಕಾರದ 2021 ರ ಬಜೆಟ್‌ನಲ್ಲಿ ರೂ. ರಸ್ತೆ ಕಾಮಗಾರಿಗೆ 60,241 ಕೋಟಿ ರೂ. ರಾಷ್ಟ್ರೀಯ ಹೆದ್ದಾರಿಗಳಿಗೆ 57,350 ಕೋಟಿ ರೂ. ಘೋಷಿಸಿದೆ.

ರೈಲ್ವೆ ಮತ್ತು ಮೆಟ್ರೋ ರೈಲು

FY2021 ಗಾಗಿ ಭಾರತೀಯ ರೈಲ್ವೇಯ ಅತ್ಯಧಿಕ ಒಟ್ಟು ಪ್ಲಾನ್ ಕ್ಯಾಪೆಕ್ಸ್ ರೂ. 2,15,058 ಕೋಟಿ. ಇದೆ. 2021 ಯೂನಿಯನ್ ಬಜೆಟ್ ಪ್ರಕಾರ. ರೈಲ್ವೆ ಸಚಿವಾಲಯವು ಪಡೆದಿರುವ ರೂ. 11,01,055 ಕೋಟಿಗಳು.

ನಿರ್ಮಾಣ ವಲಯ

ಭಾರತ ಸರ್ಕಾರ ಯೂನಿಯನ್ ಬಜೆಟ್ 2021 ರಲ್ಲಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಅಭಿವೃದ್ಧಿಗಾಗಿ ಸಚಿವಾಲಯಕ್ಕೆ ರೂ.1,18,101 ಕೋಟಿಗಳ ವೆಚ್ಚವನ್ನು ಘೋಷಿಸಿತು.

9/7/21 ರಂದು, ಸ್ಮಾರ್ಟ್ ಸಿಟೀಸ್ ಮಿಷನ್ ಅಡಿಯಲ್ಲಿ ನಗರಗಳ ನಿರ್ಮಾಣದ ಯೋಜನೆಗಳಿಗೆ 6017 ಒಟ್ಟು ರೂ. 1.80.873 ಕೋಟಿಗಳು ಮೀಸಲಿರಿಸಿದೆ.

ಜತೆಗೆ ಕೇಂದ್ರ ಬಜೆಟ್ 2021 ರಲ್ಲಿ, ರೂ. 54,581 ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಬಿಡುಗಡೆ ಮಾಡಿದೆ.

ಮೂಲ: ಯೂನಿಯನ್ ಬಜೆಟ್ 2021–22, ಮೀಡಿಯ ಮೂಲಗಳು

ರಸ್ತೆ ಮಾರ್ಗಗಳ ವಿಸ್ತರಣೆ

ರಾಷ್ಟ್ರೀಯ ಹೆದ್ದಾರಿಗಳನ್ನು 20,000 ನಿಧಿಯ ವೆಚ್ಚದೊಂದಿಗೆ 25000 ಕಿಮೀ ವಿಸ್ತರಿಸಲಾಗುವುದೆಂದು ಸೆಪ್ಟೆಂಬರ್ 2021 ರಲ್ಲಿ, ಭಾರತ ಸರ್ಕಾರ ಘೋಷಿಸಿತು. J&K ನಲ್ಲಿ ರಸ್ತೆ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು 1 ಲಕ್ಷ ಕೋಟಿ ರೂಪಾಯಿಗಳನ್ನು ಪ್ರಕಟಿಸಲಾಗಿದೆ.

ನಿರ್ಮಾಣ ಕ್ಷೇತ್ರ – ILO

ನಿರ್ಮಾಣ ಉದ್ಯಮವು ವ್ಯಾಪಕ ಶ್ರೇಣಿಯ ಉತ್ಪನ್ನಗಳನ್ನು ಸಮಾನವಾಗಿ ಹಾಗೂ ವೈವಿಧ್ಯಮಯವಾಗಿವೆ ಉತ್ಪಾದಿಸುತ್ತಿದೆ ಆದಾಗ್ಯೂ ಬಹುಪಾಲು ಉದ್ಯಮಗಳು ಸಣ್ಣ ಮತ್ತು ಸ್ಥಳೀಯ. ಕೆಲಸಗಳಲ್ಲೇ ಹೆಚ್ಚಾಗಿ ತೊಡಗಿಸಿಕೊಂಡಿವೆ. ಜಾಗತೀಕರಣ ಮತ್ತು ಅಂತರಾಷ್ಟ್ರೀಯ ನಿರ್ಮಾಣ ಉದ್ಯಮದ ಅಸ್ತಿತ್ವದ ಹೊರತಾಗಿಯೂ, ಹೆಚ್ಚಿನ ನಿರ್ಮಾಣ ಚಟುವಟಿಕೆಯು ಸ್ಥಳೀಯ ಸಂಸ್ಥೆಗಳಿಂದಲೇ ಇನ್ನೂ ಹೆಚ್ಚಿನ ಪ್ರಮಾಣದ ನಿರ್ಮಾಣ ಚಟುವಟಿಕೆಗಳನ್ನು ನಡೆಸುತ್ತಿವೆ.

ಸರಕು ಮತ್ತು ಸೇವೆಗಳ ಪೂರೈಕೆಯನ್ನು ಉತ್ಪಾದನಾ ಪ್ರಕ್ರಿಯೆಯಿಂದ ಹೊರಗಿಡುವ ಒಂದು ಪ್ರವೃತ್ತಿ ನಿರ್ಮಾಣ ಉದ್ಯಮಗಳಲ್ಲಿ (ಇತರ ಕೈಗಾರಿಕೆಗಳಲ್ಲಿರುವಂತೆ) ಇದೆ. ನಿರ್ಮಾಣದಲ್ಲಿ ಕಟ್ಟಡ ಸಾಮಗ್ರಿಗಳು, ಪರಿಸರ ಸಂರಕ್ಷಣೆ ಗಿಡಗಳನ್ನು ಮತ್ತು ಸಹಾಯಕ ಉಪಕರಣಗಳನ್ನು ಸಾಮಾನ್ಯವಾಗಿ ಇತರ ಉದ್ಯಮಗಳಿಂದ ಖರೀದಿಸಲಾಗುತ್ತದೆ ಅಥವಾ ಬಾಡಿಗೆಗೆ ತೆಗೆದುಕೊಳ್ಳಲಾಗುತ್ತದೆ. ಉಧ್ಯಮಕ್ಕೆ ಅಗತ್ಯವಿರುವ ವಿನ್ಯಾಸ ಮತ್ತು ಎಂಜಿನಿಯರಿಂಗ್ ಸೇವೆಗಳನ್ನು ಮತ್ತು ಇತರೆ ವಿಶೇಷ ಸೇವೆಗಳನ್ನು ಉಪಗುತ್ತಿಗೆದಾರರಿಂದ ಮತ್ತು ಕಾರ್ಮಿಕರನ್ನು ಸರಬರಾಜು ಮಾಡುವ ಏಜೆಂಟರುಗಳ ಮೂಲಕ ಇಲ್ಲವೇ ಪ್ರತ್ಯೇಕ ವೃತ್ತಿಪರ ಘಟಕಗಳಿಂದ ಪಡೆಯಲಾಗುತ್ತದೆ.

ಉದ್ಯಮವು ಸಾಕಷ್ಟು ತಾಂತ್ರಿಕ ಬದಲಾವಣೆಗೆ ಒಳಪಟ್ಟಿದೆ. ಉದ್ಯಮದಲ್ಲಿ, ಗಮನಾರ್ಹವಾಗಿ ಹೆಚ್ಚುತ್ತಿರುವ ಪರಿಸರ–ಮುಕ್ತ ತಂತ್ರಜ್ಞಾನಗಳು ಹೆಚ್ಚುತ್ತಿವೆ. ಉದ್ಯಮದಲ್ಲಾಗುತ್ತಿರುವ ಅಂತಹ

ಪುಟ 14 ಕ್ಕೆ











ನಿರ್ಮಾಣ ವಲಯ ಎನ್ನುವ ಬೃಹತ್ ಉದ್ಯಮ ಹಾಗೂ ಕರ್ನಾಟಕದಲ್ಲಿ ಕಾರ್ಮಿಕರ ಬವಣೆಗಳು

ಕೆ. ಮಹಾಂತೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ

ನಿರ್ಮಾಣ ವಲಯ ಎಂದರೆ ವಾಣಿಜ್ಯ ಕಟ್ಟಡಗಳು, ವಸತಿ ಕಟ್ಟಡಗಳು, ಕೈಗಾರಿಕಾ ಕಟ್ಟಡಗಳು, ಮೂಲಸೌಕರ್ಯ ಕಟ್ಟಡ ನಿರ್ಮಾಣ, ಸಾರಿಗೆ–ಸಂಪರ್ಕ ನಿರ್ಮಾಣ, ಶಕ್ತಿ ಉತ್ಪಾದನೆ ಮತ್ತು ಉಪಯುಕ್ತ ವಲಯದ ನಿರ್ಮಾಣ ಸೇರಿ ನಿರ್ಮಾಣ ವಲಯವಾಗಿದೆ. ಜೊತೆಗೆ ನಿರ್ವಹಣೆ ಹಾಗು ಪುನರ್ ನವೀಕರಣವೂ ಸೇರಿದೆ. ಆರ್ಥಿಕತೆಯ ಬೆಳವಣಿಗೆಗೆ ಮೂಲಸೌಕರ್ಯ ಅಭಿವೃದ್ಧಿ ಎಂಬುದು ಚಾಲನಾ ಶಕ್ತಿಯಾಗಿದೆ. ಕೃಷಿ ಮತ್ತು ಕೈಗಾರಿಕೆಯನ್ನು ಹೊರತುಪಡಿಸಿದರೆ ನಿರ್ಮಾಣ ವಲಯವು ಅತಿ ಹೆಚ್ಚು ಜಿಡಿಪಿ ಉತ್ಪಾದನೆಯ ಪ್ರಮುಖ ವಲಯವಾಗಿದೆ. ಜೊತೆಗೆ ಉದ್ಯೋಗ ನೀಡಿಕೆಯಲ್ಲೂ ಮೂರನೇ ಸ್ಥಾನದಲ್ಲಿದೆ. ಜಗತ್ತಿನ ಬಂಡವಾಳಿಗರ ಕೇಂದ್ರಗಳಲ್ಲೊಂದಾದ ಬೆಂಗಳೂರಿಗೆ ಬಂಡವಾಳ ಹರಿದು ಬರುತ್ತಿದ್ದು, ಇದನ್ನು ಆಧರಿಸಿ ಮೂಲಸೌಕರ್ಯ ಅಭಿವೃದ್ಧಿಯ ಮೇಲೂ ಹೂಡಿಕೆ ಹೆಚ್ಚುತ್ತಿದೆ. ಜತೆಗೆ ಮೈಸೂರು, ಮಂಗಳೂರು, ಶಿವಮೊಗ್ಗ, ಬಳ್ಳಾರಿ ನಗರಗಳಲ್ಲೂ ಹೂಡಿಕೆ ಆಗುತ್ತಿದ್ದು, ಕಟ್ಟಡ ನಿರ್ಮಾಣ ಕಾಮಗಾರಿಗಳು ಹೆಚ್ಚುತ್ತಲೇ ಇವೆ. ಆದಾಗ್ಯೂ ಕೊರೊನಾ ನಂತರದಲ್ಲಿ 70% ಮಾತ್ರವೇ ನಿರ್ಮಾಣ ವಲಯ ಚೇತರಿಕೆ ಕಂಡಿದ್ದೂ, ಪೂರ್ಣವಾಗಿ ಚೇತರಿಸಿಕೊಂಡಿಲ್ಲ ಎಂಬುದನ್ನು ಅಂಕಿಅಂಶಗಳು ಹೇಳುತ್ತಿವೆ. ಮೂಲಸೌಕರ್ಯ ಕೊರತೆಯ ಕಾರಣ ಮುಂದೊಡ್ಡಿ ಕೆಲ ಕಂಪನಿಗಳು ಪುಣೆಯತ್ತ ಮುಖ ಮಾಡಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಕೋವಿಡ್ ನಂತರದಲ್ಲಿ ನಿರ್ಮಾಣ ಕಾಮಗಾರಿಗಳು ಚೇತರಿಕೆ ಕಂಡಿವೆ. ಬೆಂಗಳೂರು ಒಂದರಲ್ಲೇ 10500 ಸಾವಿರಕ್ಕು ಹೆಚ್ಚು ಕಟ್ಟಡದ ನಿರ್ಮಾಣದ ಕಾಂಟ್ರಾಕ್ಟ್ಸ್ ಸಂಸ್ಥೆಗಳಿವೆ. ರೇರಾ ಪ್ರಕಾರ ಪ್ರಮುಖ ಕಂಪನಿಗಳ 558 ಅಧಿಕೃತ ಪ್ರಾಜೆಕ್ಟ್‌ಗಳು ಸದ್ಯ ಚಾಲ್ತಿಯಲ್ಲಿವೆ. 1051 ನೋಂದಣಿ ರಹಿತ ಪ್ರಾಜೆಕ್ಟ್‌ಗಳು ನಡೆಯುತ್ತಿವೆ. ಸಾರ್ವಜನಿಕರು ಇಂತಹ ಪ್ರಾಜೆಕ್ಟ್‌ಗಳಲ್ಲಿ ಆಸ್ತಿ ಖರೀದಿಸಿ, ಮೋಸ ಹೋದಲ್ಲಿ ರೇರಾ ಮಧ್ಯಪ್ರವೇಶ ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದೆ. ಇದಲ್ಲದೇ ವಾಸಕ್ಕಾಗಿ ಬಿಡಿ ಮನೆಗಳ ನಿರ್ಮಾಣವೂ ಪ್ರಮುಖ ವಲಯವಾಗಿದೆ. ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರವು 4236.26 ಕೋಟಿ ರೂಪಾಯಿಗಳ ಕೈಗಾರಿಕಾ ಪ್ರಾಜೆಕ್ಟ್ ಗೆ ಅನುಮತಿ ನೀಡಿದೆ. ಅಲಯನ್ಸ್ ಗ್ರೂಪ್ ಪ್ಲಾನ್ಸ್ ಒಂದೇ ಸಂಸ್ಥೆ ಬೆಂಗಳೂರು ಮತ್ತು ಹೈದ್ರಾಬಾದ್ ನಲ್ಲಿ 8600 ಕೋಟಿ ರೂಗಳ ಪ್ರಾಜೆಕ್ಟ್‌ಗೆ ಚಾಲನೆ ನೀಡಿದ್ದಾರೆ. ಆದರೆ ನಿರ್ಮಾಣ ವಲಯಕ್ಕೆ ಬಹುದೊಡ್ಡ ತೊಡೆಕೆಂದರೆ ನಕ್ಷೆ ಮಂಜೂರಾತಿ, ಸಿ.ಸಿ. ನೀಡುವಲ್ಲಿ ನಿಧಾನಗತಿ, ಆಸ್ತಿ ನೋಂದಣಿಯಲ್ಲಿನ ತಾಂತ್ರಿಕ ಸಮಸ್ಯೆಗಳು ದಾಖಲಾತಿಗಳ ಹೊಂದಾಣಿಕೆ, ಬ್ಯಾಂಕುಗಳು ಸಾಲ ನೀಡುವಲ್ಲಿನ ಸಮಸ್ಯೆಗಳು ಮತ್ತು ವಿಳಂಬ ಇತ್ಯಾದಿ ಕಾರಣಗಳಿಂದಾಗಿ ನಿರ್ಮಾಣ ವಲಯ ಕುಂಟಿತವಾಗುತ್ತಿದೆ ಎಂಬುದನ್ನು ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ ಹೇಳಿದೆ.

ನಿರ್ಮಾಣ ವಲಯದಲ್ಲಿ ತಂತ್ರಜ್ಞಾನದ ಬಳಕೆ

ನಿರ್ಮಾಣ ವಲಯದಲ್ಲಿ ಖರ್ಚಿನ ಪ್ರಮಾಣ ತಗ್ಗಿಸುವುದು, ಸಮಯದ ಉಳಿತಾಯ, ಸುಧಾರಿತ ಕೌಶಲ್ಯತೆ ಹಾಗು ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ಪೂರೈಕೆಗೆ ಅನುಕೂಲವಾಗುತ್ತದೆ ಎಂಬ ಹಲವು ಕಾರಣದಿಂದಾಗಿ ಆಧುನಿಕ ತಂತ್ರಜ್ಞಾನ ಬಳಕೆ ಮಾಡುವುದು ನಗರದಲ್ಲಿ ಹೆಚ್ಚುತ್ತಿದೆ. ಕೃತಕ ಬುದ್ಧಿಮತ್ತೆ ಹಾಗು ಮಷಿನ್ ಡ್ರಾಯಿಂಗ್ ಹಾಗು ರೋಬೋಟ್ ಬಳಕೆ ಹೆಚ್ಚುತ್ತಿದೆ. ಅಂದರೆ ನಿರ್ಮಾಣ ಕ್ಷೇತ್ರ ಮಾನವ ರಹಿತ ನಿರ್ಮಾಣದತ್ತ ಮುಖ ಮಾಡುತ್ತಿದೆ. ತಂತ್ರಜ್ಞಾನ ಮಾನವ ಸಮಾಜ ಅಭಿವೃದ್ಧಿಗೆ ಅತ್ಯಗತ್ಯ. ಆದರೆ ತಂತ್ರಜ್ಞಾನವು ಹೂಡಿಕೆದಾರರ ಲಾಭ ಹೆಚ್ಚಿಸಲು ಬಳಕೆಯಾಗುತ್ತಿದೆ. ಇದರಿಂದ ಉದ್ಯೋಗದ ಅವಕಾಶಗಳು ಕ್ಷೀಣಿಸಲಿವೆ.

ನಿರ್ಮಾಣ ವಲಯದ ಮೇಲೆ ಬೆಲೆ ಏರಿಕೆಯ ಕರಿನೆರಳು

ಜಿಎಸ್ಟಿ ಹೇರಿಕೆ ಹಾಗು ಅನಿಯಂತ್ರಿತ ಹಣದುಬ್ಬರದಿಂದಾಗಿ ಬೆಲೆ ಏರಿಕೆ ಅಬ್ಬರ ನಡೆದಿದೆ. ನಿರ್ಮಾಣವಲಯ ಸಾಮಗ್ರಿಗಳ ಬೆಲೆಗಳು ಗಗನ ನೋಡುವಂತಾಗಿದೆ. ಒಟ್ಟಾರೆ ನಿರ್ಮಾಣ ಸಾಮಗ್ರಿಗಳ ಬೆಲೆಗಳು ಸುಮಾರು 35 ಶೇಕಡ ಏರಿಕೆ ಆಗಿವೆ ಎಂದು ವರದಿಗಳು ಹೇಳುತ್ತಿವೆ. ಪರಿಣಾಮ, ನಿರ್ಮಾಣ ವೆಚ್ಚ ಚದರ ಅಡಿಗೆ ರೂ.650 ರಿಂದ ರೂ.750 ಆಗಿದೆ. ನಿರ್ಮಾಣ ಸಾಮಗ್ರಿಗಳಾದ ಸಿಮೆಂಟ್ – 350 ನಿಂದ 460 ರೂಪಾಯಿ, ಸ್ಟೀಲ್ – 65 ಸಾವಿರದಿಂದ 95 ಸಾವಿರ ರೂಪಾಯಿ, ಎಂ ಸ್ಯಾಂಡ್ – 13 ಸಾವಿರದಿಂದ 17 ಸಾವಿರ ರೂಪಾಯಿ, ಪ್ಲೇವುಡ್ ಶೇ 20 ರಷ್ಟು ಏರಿಕೆ ಸೇರಿದಂತೆ ಎಲೆಕ್ಟ್ರಿಕಲ್, ಪ್ಲಂಬಿಂಗ್, ಇಂಟಿರೀಯರ್ ಎಲ್ಲ ಸಾಮಗ್ರಿಗಳ ಬೆಲೆಗಳು ದುಬಾರಿಯಾಗಿವೆ. ಈ ಬೆಲೆ ಏರಿಕೆಯ ಕಾರಣಕ್ಕಾಗಿ ನಿರ್ಮಾಣ ಹಂತದ ಕಾಮಗಾರಿಗಳು, ಪ್ರಾಜೆಕ್ಟ್‌ಗಳು ಅರ್ಧದಲ್ಲೇ ನಿಲ್ಲುತ್ತಿವೆ. ಹೊಸ ಪ್ರಾಜೆಕ್ಟ್‌ಗಳನ್ನು ಮುಂದೂಡಲಾಗುತ್ತಿದೆ. ಪರಿಣಾಮವಾಗಿ ಕಾರ್ಮಿಕರ ಕೂಲಿ ವಂಚನೆ ಹಾಗು ನಿರುದ್ಯೋಗ ತೀವ್ರವಾಗುತ್ತಿದೆ. ಬೆಲೆ ಏರಿಕೆಯ ವಿರುದ್ಧ ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾದಿಂದ ಬೆಂಗಳೂರು ನಗರದಲ್ಲಿ ಪ್ರತಿಭಟನೆ ನಡೆದಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಕಟ್ಟಡ ನಿರ್ಮಾಣ ವಲಯದಲ್ಲಿ ಕಾರ್ಮಿಕರು

ಎನ್.ಎಸ್.ಎಸ್. ನಡೆಸಿದ 2018–19ನೇ ಸಾಲಿನ ಆವರ್ತಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ 17.9 ಲಕ್ಷ ಜನ ಕಟ್ಟಡ ನಿರ್ಮಾಣ ಕಾರ್ಮಿಕರಿದ್ದಾರೆ. ರಾಜ್ಯದ ಒಟ್ಟು ಕಾರ್ಮಿಕರಲ್ಲಿ ಇವರ ಪಾಲು ಶೇ.8.7. ಒಟ್ಟು ಕಾರ್ಮಿಕರಲ್ಲಿ ಶೇ94 ಪುರುಷರೇ ಆಗಿದ್ದಾರೆ. (16.8 ಲಕ್ಷ) ಶೇ.61ರಷ್ಟು ಕಾರ್ಮಿಕರು ಗ್ರಾಮಾಂತರದಲ್ಲಿ ಇದ್ದಾರೆ ಎಂಬುದು ವಿಶೇಷವಾದುದು. ಅಂದರೆ ನಗರಗಳಿಗೆ ಹೋಲಿಸಿದ್ದಲ್ಲಿ ಗ್ರಾಮೀಣ ಭಾಗದಲ್ಲಿ ಕಾರ್ಮಿಕರು ವಾಸಿಸುತ್ತಿದ್ದಾರೆ. ಕಳೇದ ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಮತ್ತು ದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಉದಾಹರಣೆಗೆ ನಗರದಲ್ಲಿ 1993–94ರಲ್ಲಿ 6% ಏರಿಕೆಯಾಗಿದೆ. 2018–19ರಲ್ಲಿ ಇದು 9.4% ಗೆ ಏರಿಕೆಯಾಗಿದೆ ಎಂಬುದು ಗಮನಾರ್ಹ. 1999–2000ರ ನಡುವೆ ಶೇ.10ಕ್ಕೆ ಏರಿಕೆಯಾಗಿದೆ. ಅದೇ ರೀತಿ ಗ್ರಾಮಾಂತರದಲ್ಲಿ 1993–94ರಲ್ಲಿ ಶೇ.1.5ರಷ್ಟು ಏರಿಕೆ ಪ್ರಮಾಣ ಇದ್ದಲ್ಲಿ 2018–19ರಲ್ಲಿ ಇದು 8.3ಕ್ಕೆ ಏರಿಕೆಯಾಗಿದೆ.

ಅಂದರೆ ಒಟ್ಟಾರೆ ಕಳೆದ ಹತ್ತು ವರ್ಷಗಳಲ್ಲಿ ಕಟ್ಟಡ ಕಾರ್ಮಿಕರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಬೆಂಗಳೂರನ್ನು ಒಳಗೊಂಡು ರಾಜ್ಯದ ವಿವಿಧ ಪ್ರದೇಶಗಳಿಗೆ ಬೇರೆ ರಾಜ್ಯಗಳಿಂದ ಪ್ರತೀವರ್ಷ ಕಟ್ಟಡ ಕಾರ್ಮಿಕರು ವಲಸಿಗರಾಗಿ ಬರುತ್ತಿದ್ದಾರೆ. ನಮ್ಮ ರಾಜ್ಯದ ವಿವಿಧ ಜಿಲ್ಲೆಗಳ ಅಂತರ್ ಜಿಲ್ಲಾ ವಲಸಿಗರು ಸೇರಿ ಒಟ್ಟು ಸಂಖ್ಯೆ ಮತ್ತಷ್ಟು ಹೆಚ್ಚಿಗೆ ಆಗಬಹುದು. ವಲಸಿಗರಲ್ಲಿ 76% ಕುಟುಂಬ ಸಮೇತರಾಗಿ ಬಂದಿದ್ದರೆ, 24% ಕುಟುಂಬ ರಹಿತರು. ಈ ರೀತಿ ಬರುವವರಲ್ಲಿ ಬಹುತೇಕರಿಗೆ ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ನೋಂದಣಿ ಕುರಿತು ಮಾಹಿತಿಗಳೇ ಗೊತ್ತಿರುವುದಿಲ್ಲ. 27% ಕಟ್ಟಡ ಕಾರ್ಮಿಕರಿಗೆ ಅರ್ಜಿಯ ಭಾಷೆ ಗೊತ್ತಿಲ್ಲ. 46% ಕಟ್ಟಡ ಕಾರ್ಮಿಕರು ಅವಿದ್ಯಾವಂತರೇ ಆಗಿದ್ದಾರೆ. ಇಂತಹ ಅಸಹಾಯಕ ಪರಿಸ್ಥಿತಿಯನ್ನು ದುರ್ಲಾಭ ಮಾಡಿಕೊಳ್ಳುತ್ತಿರುವ ಮಧ್ಯವರ್ತಿಗಳಿಂದಾಗಿ ಕಾರ್ಮಿಕರು ಮೋಸಹೋಗುತ್ತಿದ್ದಾರೆ.

ಕಾರ್ಮಿಕರ ಸಾಮಾಜಿಕ ಸ್ಥಿತಿಗತಿ

ಬೆಂಗಳೂರು ವಿಶ್ವವಿದ್ಯಾಲಯದ ಆಲಂಪಲ್ಲಿ ವೆಂಕಟರಾಮಯ್ಯ ಅಧ್ಯಯನ ಪೀಠವು 2018–19ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಕುರಿತಾಗಿ ನಡೆಸಿದ ಸಮೀಕ್ಷೆಯಲ್ಲಿ ಕೆಲ ಕುತೂಹಲಕಾರಿ ಅಂಶಗಳು ಬೆಳಕಿಗೆ ಬಂದಿವೆ. ಇದನ್ನು ಪಟ್ಟಿಯ ರೂಪದಲ್ಲಿ ನೀಡಲಾಗಿದೆ. ಈ ಅಂಕಿಅಂಶಗಳಲ್ಲಿ ಶೇಕಡ 100ರಷ್ಟು ನಿಖರವಾಗಿಲ್ಲದಿದ್ದರೂ, ಬಹಳ ವಿಶಾಲವಾಗಿ ಸಮೀಕ್ಷೆ ಕೈಗೊಂಡು ನಡೆಸಿದ್ದಾಗಿದೆ. ಹೀಗಾಗಿ ಇದನ್ನು ಮಾಹಿತಿಗಾಗಿ ತೆಗೆದುಕೊಳ್ಳಬಹುದು.

ಕೃಷಿ ಬಿಕ್ಕಟ್ಟು, ಕೌಟುಂಬಿಕ ಆರ್ಥಿಕ ಸಮಸ್ಯೆಗಳು, ಉದ್ಯೋಗ ಅವಕಾಶಗಳ ಕೊರತೆಯಿಂದ ನಗರಗಳಿಗೆ ಮುಖ ಮಾಡುವವರಲ್ಲಿ ಹೆಚ್ಚಿನವರು ಕಟ್ಟಡ ಕಾರ್ಮಿಕರಾಗಿದ್ದಾರೆ. 2018–19ನೇ ಸಾಲಿನ ಎನ್.ಎಸ್.ಎಸ್. ವರದಿ ಪ್ರಕಾರ ಶೇ.51 (9.1ಲಕ್ಷ) ಕಾರ್ಮಿಕರು ಹಿಂದುಳಿದ ಜಾತಿಗೆ, ಶೇ.26 (4.6 ಲಕ್ಷ) ರಷ್ಟು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಕಟ್ಟಡ ಕಾರ್ಮಿಕರಲ್ಲಿ ಶೇ.40ರಷ್ಟು ಕಾರ್ಮಿಕರು ಮಹಿಳೇರೇ ಆಗಿದ್ದಾರೆ ಎಂಬುದು ಗಮನಾರ್ಹ. ಈ ರೀತಿ ಬರುವವರಲ್ಲಿ ಹಲವರು ಬಾಡಿಗೆ ಮನೆಗಳನ್ನ ಆಶ್ರಯಿಸಿ ಬರುತ್ತಾರೆ. ಬಹುತೇಕರು 4/5/6 ಅಡಿಯ ಜೋಪಡಿಗಳು, ಕೆಲಸ ಮಾಡುವ ಸ್ಥಳಗಳಲ್ಲಿನ ಶೆಡ್‌ಗಳಲ್ಲಿ, ಕೆಲವು ಕಡೆ ಶೀಟ್ ಮನೆಗಳಲ್ಲಿ ವಾಸವಿರುತ್ತಾರೆ. ಎಷ್ಟೋ ಜೋಪಡಿಗಳಲ್ಲಿ ವಿದ್ಯುತ್ ಸಂಪರ್ಕಗಳಿಲ್ಲ. ಸೌದೆ ಒಲೆಯ ಮೇಲೆ ಅವರ ಹೊಟ್ಟೆಪಾಡು ನಿಂತಿರುತ್ತದೆ. ಸ್ನಾನ, ಶೌಚಕ್ಕೆ ಪ್ಲಾಸ್ಟಿಕ್ ಪರದೆಗಳೇ ಆಸರೆ. ವಲಸೆಯ ಸ್ವರೂಪದ ಇವರ ಕೆಲಸದಿಂದಾಗಿ ಇವರ ಮಕ್ಕಳು ಶಾಲೆ ಸಲುವಾಗಿ ಊರಲ್ಲೇ ಉಳಿಯಬೇಕು. ಇಲ್ಲವೇ ಶಾಲೆಯಿಂದ ಹೊರಗುಳಿಯುವ ಪರಿಸ್ಥಿತಿ ಇದೆ. ಕೂಸುಗಳೊಂದಿಗೆ ಕಾಮಗಾರಿಯಲ್ಲಿ ತೊಡಗಿರುವ ಮಹಿಳಾ ಕಟ್ಟಡ ಕಾರ್ಮಿಕರ ಚಿತ್ರಣ ನೋಡಬಹುದು. ಜೋಪಡಿಗಳಲ್ಲಿ ನಾಯಿ ಕಡಿತ, ನವಜಾತ ಶಿಶು ನಾಯಿ ಪಾಲಾದದ್ದು, ಮಹಿಳೆ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗುತ್ತಿವೆ.

ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸ್ಥಿತಿ:

ಕೆಲಸದ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು, ಗಾಳಿ–ಬೆಳಕು ಇರುವ ವಸತಿ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಕಿಟ್, ಸುರಕ್ಷಾ ಸಾಧನಗಳನ್ನು ನೀಡುವುದು, ಆರೋಗ್ಯ ಶಿಬಿರಗಳನ್ನು ನಡೆಸುವುದು, ಮಹಿಳಾ ಕಾರ್ಮಿಕರಿದ್ದಲ್ಲಿ ಕ್ರೀಚ್ ಸೌಲಭ್ಯ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಬೇಕೆಂದು ಕಾರ್ಮಿಕ ಕಾನೂನು ಹೇಳುತ್ತದೆ. ಆದರೆ ಬಹುತೇಕ ಸೈಟ್‌ಗಳಲ್ಲಿ ಈ ಯಾವುದೇ ಸೌಲಭ್ಯಗಳು ಕಾಣುವುದಿಲ್ಲ. ಸೌಲಭ್ಯಗಳನ್ನು ನೀಡಿಲ್ಲ ಎಂಬ ಕಾರಣಕ್ಕಾಗಿ ಕಾರ್ಮಿಕ ಅಧಿಕಾರಿಗಳು ಸೈಟ್‌ಗೆ ಭೇಟಿ ನೀಡಿ ಮಾಲೀಕರ ಮೇಲೆ ಕ್ರಮಕೈಗೊಂಡ ಒಂದೇ ಒಂದು ಉದಾಹರಣೆಯೂ ಸಿಗುವುದಿಲ್ಲ! ಶೌಚಕ್ಕಾಗಿ ಕಿಲೋಮೀಟರ್ ಗಟ್ಟಲೆ ನಡೆದುಹೋಗಬೇಕಾದ ಸ್ಥಿತಿ ಈಗಲೂ ಇದೆ. ಮಹಿಳಾ ಕಾರ್ಮಿಕರದ್ದಂತು ಚಿಂತಾಜನಕ ಸ್ಥಿತಿ.

ಪುರುಷ	**ಮಹಿಳೆ**	**ವಿವಾಹಿತ**	**ಅವಿವಾಹಿತ**	**ವಿಧವೆಯರು**	**ಅಕ್ಷರಸ್ಥರು**	ಎಸ್ಸೆಸಲ್ಸಿ	**ಪಿಯುಸಿ**
84.7%	15.3%	74.9%	21.8%	2.8%	34.6%	25.6%	6.7%
ಭೂಮಿ ಇರುವವವರು	**ಭೂಮಿ ಇಲ್ಲದವರು**	**ಆರ್.ಸಿ.ಸಿ. ಮನೆ ವಾಸ**	**ಗುಡಿಸಲು ವಾಸ**	**ಕಚ್ಚಾ ಮನೆ**	**ಹೆಂಚಿನ ಮನೆ**	**ತಗಡು ಮನೆ**	–
22.9%	77.1%	47.74%	2.56%	19.88%	7.23%	3.31%	–
ಹಿಂದು	**ಮುಸ್ಲಿಂ**	**ಕ್ರಿಶ್ಚಿಯನ್**	**ಕೆಲಸದ ಅನುಭವ (8 ವರ್ಷ)**	**ಕೆಲಸದ ಅನುಭವ (6 ವರ್ಷ)**	**ಕೆಲಸದ ಅನುಭವ (3–4 ವರ್ಷ)**	**ಕೆಲಸದ ಅನುಭವ 1–2 ವರ್ಷ**	**ಕೆಲಸದ ಸ್ಥಳದಲ್ಲಿ ಶೌಚಾಲಯ ಇಲ್ಲ**
78.7%	19.2%	2.1%	36.2%	21.2%	19.5%	10.8%	40%



ಕಾರ್ಮಿಕರು ಮತ್ತು ಕೂಲಿ

ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸರಾಸರಿ ಕೂಲಿ ದಿನಕ್ಕೆ ಮೇಸನ್ – 479 ರೂಪಾಯಿ ಇದೆ. ಲೇಬರ್‌ಗೆ ರೂ.343 ಇದೆ. ರಾಷ್ಟ್ರೀಯ ಸರಾಸರಿ ಕ್ರಮವಾಗಿ ದಿನಕ್ಕೆ ರೂ.470 ಮತ್ತು ರೂ.330 ಇದೆ. ಅಂದರೆ ರಾಷ್ಟ್ರೀಯ ಸರಾಸರಿಗೆ ಹತ್ತಿರದಲ್ಲೇ ಇದೆ.

ಪುಟ 14 ಕ್ಕೆ

ಕರ್ನಾಟಕದಲ್ಲಿ ಕೊರೋನಾ ಮತ್ತು ಕಟ್ಟಡ ಕಾರ್ಮಿಕರು

ಕೋವಿಡ್–19 ಅತ್ಯಂತ ಆಘಾತಕಾರಿ ರೊಗ ದೇಶಾದ್ಯಂತ ಮತ್ತು ರಾಜ್ಯದಲ್ಲಿ ಹಾಗೂ ದೇಶ ವಿದೇಶಗಳಲ್ಲಿ ಲಕ್ಷ ಲಕ್ಷಗಟ್ಟಲೆ ಅಮಾಯಕರನ್ನು ಅದು ಬಲಿ ಪಡೆಯಿತು. ಈ ಅವಧಿಯಲ್ಲಿ ಲಕ್ಷಾಂತರ ನಿರ್ಮಾಣ ವಲಯದ ಕಾರ್ಮಿಕರು ಅತಿ ಹೆಚ್ಚಿನ ಕಷ್ಟ ನಷ್ಟಗಳಿಗೆ ಒಳಗಾದರು. ಅದರಲ್ಲೂ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಸಂಖ್ಯೆಯ ವಲಸೆ ಕಾರ್ಮಿಕರು ಸಾವಿರಾರು ಕೀಮೀ ಭಯ ಮತ್ತು ಆತಂಕದಿಂದ ನಡೆದೇ ತಮ್ಮ ಊರುಗಳಿಗೆ ತೆರಳಿದರು. ಅದರಲ್ಲಿ ಹಲವರು ದಾರಿ ಮಧ್ಯೆ ಸಾವನಪ್ಪಿದರು. ದೂರದ ರಾಜ್ಯಗಳಿಂದ ಹೊಟ್ಟೆಪಾಡಿಗಾಗಿ ಕರ್ನಾಟಕದ ನಗರಗಳಿಗೆ ವಲಸೆ ಬಂದವರು ಅಕ್ಷರಶಃ ಬೀದಿಪಾಲಾದರು. ಅವರಿಗೆ ಕೆಲಸ ಇಲ್ಲದೆ ಇಲ್ಲಿಯೇ ಉಳಿಯಲು ಸಾಧ್ಯವಿರಲಿಲ್ಲ. ವಾಪಸ್ ತಮ್ಮ ಊರುಗಳಿಗೆ ತೆರಳಲು ಬಸ್, ರೈಲು ಪ್ರಯಾಣ ಸೌಕರ್ಯ ಇರಲಿಲ್ಲ. ಅವರಲ್ಲಿ ಹಲವರು ಅನಿವಾರ್ಯವಾಗಿ ನೂರಾರು ಕಿ.ಮೀ. ನಡೆದುಕೊಂಡೇ ಹೋಗಲು ಪ್ರಯತ್ನ ಪಟ್ಟರು. ದಾರಿಯಲ್ಲಿ ಊಟವಿಲ್ಲದೆ, ಕುಡಿಯಲು ನೀರು ದೊರೆಯದೆ ನರಳುವಂತಾಯಿತು.

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ. ಕನಿಷ್ಠ ಚಿಕಿತ್ಸೆಯ ಕೊರತೆ. ಜೀವ ಉಳಿಸುವ ಆಮ್ಲಜನಕದ ಕೊರತೆ, ಶಾಲೆಗಳು ಮುಚ್ಚಿರುವುದರಿಂದ ಮಕ್ಕಳಿಗೆ ಶಿಕ್ಷಣವೂ ಇಲ್ಲ ಮಧ್ಯಾಹ್ನದ ಊಟವೂ ಇಲ್ಲ. ರೋಗಿಗಳು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಪರಿಸ್ಥಿತಿ. ಹಸಿವು ತಾಳಲಾಗದೆ ಆತ್ಮಹತ್ಯೆ ಮಾಡಿಕೊಂಡವರು ಹಲವರು. ಸತ್ತವರ ಶವಗಳ ಅಂತ್ಯಸಂಸ್ಕಾರ ಮಾಡಲು ಸ್ಥಳವಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆಯಿಂದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರೆಯುತ್ತಿರಲಿಲ್ಲ. ಕುಡಿಯಲು ಬಿಸಿ ನೀರು ದೊರೆಯದಂತಹ ಪರಿಸ್ಥಿತಿ ಕೆಲವು ಆಸ್ಪತ್ರೆಗಳಲ್ಲಿ ಕಂಡುಬಂದಿತ್ತು. ಸರ್ಕಾರದ ಪೂರ್ವಸಿದ್ಧತೆಯಿಲ್ಲದೆ ಲಾಕ್‌ಡೌನ್ ಹೊರತುಪಡಿಸಿ ಯಾವುದೇ ಪರಿಣಾಮಕಾರಿ ನೆರವು ಹರಿದು ಬರಲಿಲ್ಲ. ಬಡವರ ಪಾಲಿಗೆ ಈ ಲಾಕ್‌ಡೌನ್ ಬಹುತೇಕವಾಗಿ ಜೈಲು ಶಿಕ್ಷೆಗಿಂತ ಹೆಚ್ಚು ಭೀಕರವಾಗಿರುತ್ತಿತ್ತು. ಅವರ ಆದಾಯ ಹೆಚ್ಚಿಸದೆ, ಅವರಿಗೆ ಪೌಷ್ಠಿಕ ಆಹಾರ ದೊರೆಯದೆ ಅವರು ಸಾಂಕ್ರಾಮಿಕ ಮುಕ್ತರಾಗಲು ಸಾಧ್ಯವಿರಲಿಲ್ಲ. ಸಿಐಟಿಯು ಹಾಗೂ ಇತರೆ ಕೇಂದ್ರ ಕಾರ್ಮಿಕ ಸಂಘಗಳ ಸಕಾಲಿಕ ಮಧ್ಯ ಪ್ರವೇಶದಿಂದಾಗಿ ರಾಜ್ಯದಲ್ಲಿ ಲಕ್ಷಾಂತರ ಶ್ರಮಜೀವಿಗಳು ಅವರ ಕುಟುಂಬಗಳು ಹಸಿವಿನಿಂದ ಪಾರು ಮಾಡಲಾಯಿತು. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಹಾಗೂ ವಿಶೇಷವಾಗಿ ಬೆಂಗಳೂರಿನ 198 ವಾರ್ಡಗಳಲ್ಲಿ ನೂರಾರು ಸಂಖ್ಯೆಯ ಟ್ರೇಡ್ ಯೂನಿಯನ್ ಕಾರ್ಯಕರ್ತರು, ಎಲ್ಲ ಅಪಾಯಗಳನ್ನು ಎದುರಿಸಿಯೂ ಸಂಕಷ್ಟದಲ್ಲಿರುವ ಸಾರ್ವಜನಿಕರು ಮತ್ತು ಅದರಲ್ಲೂ ವಿಶೇಷವಾಗಿ ವಲಸೆ ಮತ್ತು ಇತರೆ ಅಸಂಘಟಿತ ಕಾರ್ಮಿಕರ ನೆರವಿಗೆ ಟೊಂಕಕಟ್ಟಿ ಕೆಲಸ ಮಾಡಿದರು. ಹೀಗೆ ನಿರಂತರ ಒತ್ತಡದಲ್ಲೇ ಕೆಲಸ ಮಾಡಿದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಮ್ರೇಡ್ ಪುರುಶೋತ್ತಮ ಕ ' ಲ ಾ ಲ ಬ ಂ ಡಿ ಹೃದಯಾಘಾದಿಂದ ಅಗಲಿದ ನೋವಿನ ಘಟನೆಯೂ ನಡೆಯಿತು.



ಜನಕ್ಕೆ ಸಾವು–ಬದುಕಿನ ಹೋರಾಟದಲ್ಲಿ ಇರುವಾಗ, ಇದೇ ಅವಕಾಶವನ್ನು ರಾಜ್ಯದ ಆಡಳಿತರೂಢ ಬಿಜೆಪಿ ಸರ್ಕಾರ ಕೋವಿಡ್ ಪರಿಹಾರ ಕಾರ್ಯ ಅದರಲ್ಲೂ ವಿಶೇಷವಾಗಿ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ಸಾವಿರಾರು ಕೋಟಿ ಹಣವನ್ನು ಮನಬಂದಂತೆ ಖರ್ಚು ಮಾಡುತ್ತಾ ವ್ಯಾಪಕವಾದ ಭ್ರಷ್ಟಚಾರ ನಡೆಸಿತು. ಇದರ ವಿರುದ್ದ ವಿಶಾಲವಾದ ಕಟ್ಟಡ ಕಾರ್ಮಿಕ ಚಳವಳಿಯನ್ನು ಕಟ್ಟಡ ಕಾರ್ಮಿಕರ ಸಂಘ ಸಂಘಟಿಸಿ ಭ್ರಷ್ಟ ಸರ್ಕಾರ, ಕಾರ್ಮಿಕ ಸಚಿವರು ಹಾಗೂ ಇಲಾಖೆಯ ಭ್ರಷ್ಟಚಾರವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡಲಾಯಿತು. ಇದೆಲ್ಲರ ಪರಿಣಾಮವಾಗಿ ಸಂಘಟನೆಯು ಮುನ್ನಡೆ ಸಾಧಿಸಿತು ಮತ್ತು ನೂರಾರು ಕೋಟಿ ಹಣವನ್ನು ಕಾರ್ಮಿಕ ಕುಟುಂಬಗಳಿಗೆ ವಿವಿಧ ರೂಪದ ಪರಿಹಾರವಾಗಿ ಕೊಡಿಸಲಾಗಿರುವುದು ಈ ಅವಧಿಯ ಸಾಧನೆಯಾಗಿದೆ.

ಗಂಗಮ್ಮ ಎನ್ನುವ ಮಹಿಳೆಯ ಸಾವು ನಮ್ಮ ಮಧ್ಯ ಪ್ರವೇಶ



ಸಿಂಧನೂರು ತಾಲೂಕಿನ ಒಬ್ಬ ಮಹಿಳೆ ಗಂಗಮ್ಮ ಬೆಂಗಳೂರಿನ ಕೇಂಗೇರಿಯ ನಿರ್ಮಾಣ ಹಂತದ ಅಪಾರ್ಟಮೆಂಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದಳು. 2020 ಮಾರ್ಚ ಇದ್ದಕ್ಕಿಂದ್ದಂತೆ ಘೋಷಿಸಲಾದ ಲಾಕ್ ಡೌನ್ ನಿಂದ ಆಕೆ ಕೆಲಸದ ಸ್ಥಳದಲ್ಲೇ ಬಂಧಿಯಾದಳು. ಅದೇ ಅವಧಿಯಲ್ಲಿ ಆಕೆಯ ಅತ್ತೆ ಊರಲ್ಲಿ ತೀರ ಹೋದಳು. ಆದರೆ ಅತ್ತೆ ಶವ ಸಂಸ್ಕಾರಕ್ಕೆ ಆಕೆ ಹೋಗಲು ಸಾಧ್ಯವಾಗಲಿಲ್ಲ ಊರಿಂದ ಅತ್ತೆಯ ತಿಥಿಗಾದರೂ ಹೇಗಾದರೂ ಊರಿಗೆ ಬಾ ಎಂದು ಗಂಡ ಸಣ್ಣ ಮಕ್ಕಳು ಕರೆಯುತ್ತಲೇ ಇದ್ದರು ಆದರೆ ಬಸ್‌ಗಳು ಸೇರಿ ಯಾವ ವಾಹನಗಳು ರಸ್ತೆಗಿಳಿಯುತ್ತಿರಲಿಲ್ಲ ಸಾಲದೆಂಬಂತೆ ಸ್ವತಃ ಮನುಷ್ಯರ್‍ಯಾರು ಬೀದಿಗೆ ಬಂದರೆ ಸಾಕು ಪೊಲೀಸರು ಲಾಠಿಯಿಂದ ಮನಬಂದಂತೆ ಬಾರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.! ಪರಿಸ್ಥಿತಿ ಹೀಗಿರುವಾಗ ಗಂಗಮ್ಮ ಎನ್ನುವ ಈ ಬಡ ಹಾಗೂ ಯಾವೊಂದು ಪ್ರಭಾವ ಇರದ ಈ ಹೆಣ್ಣು ಮಕ್ಕಳು ಊರು ತಲುಪುದಾದರೂ ಹೇಗೆ? ಇದೇ ಚಿಂತೆ ಮತು ಕಣ್ಣೀರಲ್ಲೇ ಕೆಲ ದಿನ ನಿರ್ಮಾಣ ಹಂತದ ಬಿಲ್ಡಿಂಗ್ ನಲ್ಲೇ ಕಾಲ ಕಳೆದ ಗಂಗಮ್ಮ ಒಂದು ದಿನ ಏನೇ ಆಗಲಿ ನಡೆದೇ ಊರು ತಲುಪೋಣ ಎನ್ನೋ ನಿರ್ಧಾರಕ್ಕೆ ಬಂದೇ ಬಿಟ್ಟಿದ್ದಳು.

ಆ ಕಾಲ್‌ಡೌನ್ ನ ಒಂದು ರಾತ್ರಿಯಾಗುವುದೇ ತಡ ಆಕೆ ಕೇಂಗೇರಿಯಿಂದ ಆ ಕತ್ತಲಲ್ಲಿ ಬರೀಗಾಲಲ್ಲಿ ತನ್ನ ಪಯಣ ಆರಂಭಿಸೇ ಬಿಟ್ಟಳು. ಭಂಡ ದೈರ್ಯ, ಊರು ತಲುಪಿ ತನ್ನೆರಡು ಕರುಳಕುಡಿಗಳನ್ನು ಅಪ್ಪಿ ಮುದ್ದಾಡಬೇಕೆನ್ನುವ ಅಧ್ಯಮ್ಯ ತವಕ. ಕಳೆದೋದ ಅತ್ತೆಯ ನೆನಪು ಒಂದು ಕಡೆ ಹೀಗೆ... ಎದುರಿಗೆ ಯಾರಿದ್ದಾರೆ ಎನ್ನುವುದನ್ನು ಆಕೆ ನೋಡಲೇ ಇಲ್ಲ ಹಾಗೂ ಹೀಗೂ ಬಿರುನಡಿಗೆಯಿಂದ ರಾತ್ರಿ ಹತ್ತರೊತ್ತಿಗೆ ತುಮಕೂರು ರಸ್ತೆಯ ಟೋಲ್ ಗೇಟಿ ಬಳಿ ಬಂದಳು. ಗಂಗಮ್ಮನಂತೆ ಆಗಲೇ ಕಾಲ್ನಡಿಗೆಯಲ್ಲಿ ಅವರವರ ಊರು ತಲುಪಲು ನೂರಾರು ಬಡ ಕಾರ್ಮಿಕರು ಗಂಟು ಮೂಟೆ,ಮರಿ ಮಕ್ಕಳೊಂದಿಗೆ ಆಗಲೇ ಅದೇ ದಾರಿಯಲ್ಲಿ ಬಿರಬಿರನೇ ಹೆಜ್ಜೆ ಹಾಕುತ್ತಿದ್ದರು ಆಗ ಗಂಗಮ್ಮನಿಗೆ ನಾನು ಒಂಟಿಯಲ್ಲ ಅನ್ನೊ ಸಮಧಾನ ಮನಸ್ಸಿಗೆ ಬಂತು.

ಹೀಗೆ...ಗಂಗಮ್ಮ ಎನ್ನುವ ಆ ಬಡ ಕಟ್ಟಡ ಕಾರ್ಮಿಕ ಮಹಿಳೆ ಕೋವಿಡ್ ಎನ್ನುವ ಆ ಕರಾಳ ಲಾಕ್ ಡೌನ್ ಎನ್ನುವ ಕತ್ತಲ ರಾತ್ರಿಗಳಲ್ಲಿ ಬೆಳಕನ್ನರಸುತ್ತಾ, ದಾರಿಯಲ್ಲಿ ಯಾರ್‍ಯಾರೋ ಕೊಡುವ ಊಟ, ನೀರಿಗೆ ಕೈ ಚಾಚುತ್ತಾ ಏಳುತ್ತಾ ಬೀಳುತ್ತಾ. ದಾರಿಯಲ್ಲಿ ಎದುರಾಗುವ ಪೊಲೀಸರ ಕಣ್ತಪ್ಪಿಸಿ ಹೊಲ ಗದ್ದೆಗಳಲ್ಲಿ, ಕಲ್ಲು ಮುಳ್ಳುಗಳ ತುಳಿಯುತ್ತಾ, ಸುಸ್ತಾದಾಗ ದಾರಿಯಲ್ಲೇ ಮಲಗುತ್ತಾ, ಮುಲುಕುತ್ತಾ ಸತತವಾಗಿ ನಾಲ್ಕು ದಿನಗಳನ್ನು ಕ್ರಮಿಸಿದ್ದಳು. ಆದರೆ ಬೆಂಗಳೂರು ದಾಟುತ್ತಿದ್ದಂತೆ ತಲೆ ಮೇಲೆ ಬೇಸಿಗೆಯ ಸೂರ್ಯನ ಜಳ ಅವಳನ್ನು ನಿತ್ಯ ನಿತ್ರಾಣಗೊಳಿಸುತ್ತಿತ್ತು ಅದು ಬಯಲು ಸೀಮೆಯ ತುಮಕೂರು, ಚಳ್ಳಕೆರೆ ದಾಟಿ ಬಳ್ಳಾರಿ ಕಡೆ ಮುಖ ಮಾಡಿದಾಗಲಂತೂ ರಣಬಿಸಿಲಾಗಿ ಆಕೆಯನ್ನು ಅಕ್ಷರಶಃ ಬಳಲಿ ಬೆಂಡಾಗಿಸಿತ್ತು... ಆದರೂ ಸತತ 300 ಕೀಮೀ ಯಷ್ಟು ದೂರವನ್ನು ಕ್ರಮಿಸಿದ್ದ ಆಕೆ ಇನ್ನೊಂದು ದಿನದಲ್ಲಿ ಊರನ್ನು ತಲುಪುವ ಕನಸ್ಸು ಕಾಣುತ್ತಲೇ ದಾರಿಯಲ್ಲೇ ಸಿಕ್ಕ ಜಾಗದಲ್ಲಿ ನಿದ್ರೆಗೆ ಜಾರಿದ್ದಳು. ಆದರೆ ನೀರಡಿಗೆ, ಹಸಿವು, ನಿತ್ರಾಣದಿಂದ ಜರ್ಜರಿತವಾದ ಆಕೆಯ ಜೀವ ಬೆಳಗ್ಗೆ ತನ್ನ ಉಸಿರಾಟವನ್ನೇ ನಿಲ್ಲಿಸಿತ್ತು. ಎರಡು ಮಕ್ಕಳನ್ನು ನೋಡಬೇಕೆಂದು ಹೊರಟ ಆ ಕಾರ್ಮಿಕ ಮಹಿಳೆ ದಾರಿಯಲ್ಲೇ ಅನಾಥ ಶವವಾಗಿ ಬಿದ್ದಿದ್ದಳು...



ಯಥಾ ಪ್ರಕಾರ ಪೊಲೀಸರು ಬಳ್ಳಾರಿ ಕಿಮ್ಸ್ ಆಸ್ಪತ್ರೆಗೆ ಶವವನ್ನು ಸಾಗಿಸಿದರು. ಅಲ್ಲಿಯ ವೈದ್ಯರು ಇದೊಂದು ಹಸಿವಿನಿನ ಸಾವು ಎಂದು ಘೋಷಿಸಿದ್ದರು. ಪತ್ರಿಕೆಗಳು ಹಾಗೆ ಪ್ರಕಟಿಸಿವು ಕೂಡ.

ಆದರೆ... ಇದು ಹಸಿವಿನ ಸಾವಾಗಿರಲಿಲ್ಲ ಕೊವೀಡ್ ಲಾಕ್ ಡೌನ್ ನಲ್ಲಿ ಬಡವರನ್ನು ಸ್ವತಃ ಸರ್ಕಾರಗಳೇ ವ್ಯವಸ್ಥಿತವಾಗಿ ಮಾಡಿಸಿದ ಕೊಲೆಗಳಾಗಿದ್ದವು.!

ಗಂಗಮ್ಮ ಸ್ವತಃ ಕಟ್ಟಡ ಕಾರ್ಮಿಕಳಾಗಿದ್ದರೂ ಆಕೆಯ ಬಳಿ ಲೇಬರ್ ಕಾರ್ಡ ಇರಲಿಲ್ಲ..! ಈ ಪ್ರಶ್ನೆಯನ್ನು ಸತತವಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ರಿ.) ನಾಯಕತ್ವ ಲಾಕ್ ಡೌನ್ ಸಮಯದಲ್ಲಿ ತೆಗೆದುಕೊಂಡಿತ್ತು. ಸತತವಾಗಿ ಮೂರು ತಿಂಗಳು ಹೋರಾಡಿತ್ತು ಅಂತಿಮವಾಗಿ ಕಲ್ಯಾಣ ಮಂಡಳಿ ಅಧಿಕಾರಿಗಳನ್ನು, ಕಾರ್ಮಿಕ ಸಚಿವರನ್ನು ಈ ವಿಚಾರದಲ್ಲಿ ಮನವೊಲಿಸುವ ಕೆಲಸ ಮಾಡಿ ಸಫಲವಾಗಿತ್ತು. ಆ ನತದೃಷ್ಟೇ ಗಂಗಮ್ಮನ ಎರಡು ಮಕ್ಕಳ ಹೆಸರಲ್ಲಿ 3 ಲಕ್ಷ ರುಪಾಯಿಗಳನ್ನು ಘೋಷಿಸಿ ಅದನ್ನು ಬ್ಯಾಂಕ್ ಡಿಪಾಜಿಟ್ ಮಾಡಿಸಲಾಯಿತು. ಇದೊಂದು ಘಟನೆ ಇಡೀ ಕೊವೀಡ್ ಹಾಗೂ ನಂತರದ ಸಮಯದಲ್ಲಿ ನಾವು ಮಾಡಿದ ಹತ್ತು ಹಲವು ಮಧ್ಯ ಪ್ರವೇಶಗಳಿಗೆ ಸಾಕ್ಷೀಕರಿಸುತ್ತಿದೆ. ಈ ಹಿನ್ನಲೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಮ್ಮೇಳನಕ್ಕೆ ಮುನ್ನಡೆಯುತ್ತಿರುವ ಈ ಸಮಯದಲ್ಲಿ ದೇಶದ ಹಾಗೂ ರಾಜ್ಯದ ನಿರ್ಮಾಣ ವಲಯ ಅಲ್ಲಿ ಹೂಡಿಕೆಯಾಗುವ ಬಂಡವಾಳ, ಸೃಷ್ಟಿಯಾಗುವ ಉದ್ಯೋಗವಕಾಶಗಳು ಅದರ ಜತೆಯಲ್ಲಿ ಎದುರುರಾಗುವ ಹಲವು ಸವಾಲುಗಳನ್ನು ಅರ್ಥ ಮಾಡಿಕೊಳ್ಳುವುದು ಭವಿಷ್ಯದಲ್ಲಿ ಈ ಚಳವಳಿ ಬೆಳವಣಿಗೆಗೆ ಸಹಾಯವಾಗಲಿದೆ.

ಡ್ರಗ್ಸ್ ಮಾಫೀಯಾದಲ್ಲಿ ನಲುಗುತ್ತಿದೆ ಬೆಂಗಳೂರು!

18 ರಿಂದ 45 ವಯೋಮಾನದವರು ಡ್ರಗ್ಸ್ ವ್ಯಸನಿಗಳಾಗುತ್ತಾದ್ದಾರೆ. ಈ ವಯಸ್ಸು ಮನೆ, ದೇಶ, ಮನಸ್ಸು ಕಟ್ಟುವ ವಯಸ್ಸು ಆದರೆ ಡ್ರಗ್ಸ್ ಎಂಬ ಮಾಯಾಲೋಕಕ್ಕೆ ದಬ್ಬಲ್ಪುಡುತ್ತಿದ್ದಾರೆ. ಯುವಕ, ಯುವತಿಯರು ಅರಿವಿಲ್ಲದೆ ಬಲಿಯಾಗುತ್ತಿದ್ದಾರೆ. ಈ ಜಾಲ ವ್ಯವಸ್ಥಿತವಾಗಿ ಬಹಳ ವರ್ಷದಿಂದ ನಡೆದು ಬರ್ತಿದೆ. ಈ ಡ್ರಗ್ಸ್ ಮಾಫೀಯಾ ಹಲವು ಹಂತದಲ್ಲಿ ಬೆಳೆದು ಸೆಲೆಬ್ರಿಟಿಯವರೆಗೆ ಬಂದು ನಿಂತಿದೆ.

ಗುರುರಾಜ ದೇಸಾಯಿ



"ಡ್ರಗ್ಸ್" ರಾಜಧಾನಿ ಬೆಂಗಳೂರನ್ನು ಬೆಚ್ಚಿ ಬೀಳಿಸುತ್ತಿರುವ ಪದ. ಸೆಲೆಬ್ರಿಟಿಗಳ ಬದುಕಿಗೆ ನೇಣಿನ ಕುಣಿಕೆಯಾಗಿರುವ ಡ್ರಗ್ಸ್ ಮಾಫೀಯಾ ತನ್ನ ಕದಂಬ ಬಾಹುವನ್ನು ಎಲ್ಲೆಡೆ ಚಾಚಿದೆ. ಐಟಿ ಸಿಟಿ ಎಂಬ ಖ್ಯಾತಿ ಪಡೆದಿದ್ದ ಬೆಂಗಳೂರು ಈಗ ಡ್ರಗ್ಸ್‌ನಿಂದಾಗಿ ಕುಖ್ಯಾತಿ ಪಡೆದಿದೆ.

ದಿನ ನಿತ್ಯ ಪೇಪರ್ ಮೇಲೆ ಕಣ್ಣು ಹಾಯಿಸಿದರೆ, ಟಿವಿಯ ಪರದೆಯ ಮೇಲೆ ದಿನಕ್ಕೆ ಒಂದಾದರೂ ಡ್ರಗ್ಸ್ ಪ್ರಕರಣ ಬೆಳಕಿಗೆ ಬರುತ್ತಲೇ ಇದೆ. ನಟ/ನಟಿ, ಸೆಲೆಬ್ರಿಟಿ, ವಿದೇಶಿ ಪ್ರಜೆ ಹೀಗೆ ಡ್ರಗ್ಸ್ ಮಾಫೀಯಾದಲ್ಲಿ ಸಿಲುಕಿಕೊಂಡವರ ಬಗ್ಗೆ ನಾವು ನೋಡುತ್ತಲೇ ಇದ್ದವೇ. ಡ್ರಗ್ಸ್ ವಿರುದ್ಧ ಪೊಲೀಸ್ ಇಲಾಖೆ ಕಣ್ಣಿಟ್ಟರೂ ಈ ಅಕ್ರಮ ವ್ಯಾಪಕವಾಗಿ ಮುಂದುವರಿದಿದೆ. ಡ್ರಗ್ ದಂಧೆಯ ಮೂಲವನ್ನು ಇನ್ನೂ ಪತ್ತೆ ಹಚ್ಚಲಾಗಿಲ್ಲ. ಇನ್ನೂ ನಿಯಂತ್ರಣ ದೂರದ ಮಾತು.

ಒಂದು ಅಂಕಿ ಅಂಶದ ಪ್ರಕಾರ 18 ರಿಂದ 45 ವಯೋಮಾನದವರು ಡ್ರಗ್ಸ್ ವ್ಯಸನಿಗಳಾಗುತ್ತಾದ್ದಾರೆ. ಈ ವಯಸ್ಸು ಮನೆ, ದೇಶ, ಮನಸ್ಸು ಕಟ್ಟುವ ವಯಸ್ಸು ಆದರೆ ಡ್ರಗ್ಸ್ ಎಂಬ ಮಾಯಾಲೋಕಕ್ಕೆ ದಬ್ಬಲ್ಪುಡುತ್ತಿದ್ದಾರೆ. ಯುವಕ, ಯುವತಿಯರು ಅರಿವಿಲ್ಲದೆ ಬಲಿಯಾಗುತ್ತಿದ್ದಾರೆ. ಈ ಜಾಲ ವ್ಯವಸ್ಥಿತವಾಗಿ ಬಹಳ ವರ್ಷದಿಂದ ನಡೆದು ಬರ್ತಿದೆ. ಈ ಡ್ರಗ್ಸ್ ಮಾಫೀಯಾ ಹಲವು ಹಂತದಲ್ಲಿ ಬೆಳೆದು ಸೆಲೆಬ್ರಿಟಿಯವರೆಗೆ ಬಂದು ನಿಂತಿದೆ.

ರಾಜ್ಯದಲ್ಲಿ ಡ್ರಗ್ಸ್ ದಂಧೆ ನಿಯಂತ್ರಣಕ್ಕೆ ಬಾರದ ಪರಿಣಾಮ, ಕಳೆದ ಐದು ವರ್ಷಗಳಲ್ಲಿ 11,718 ಪ್ರಕರಣಗಳು ದಾಖಲಾಗಿವೆ. ಡ್ರಗ್ಸ್ ವಿರುದ್ಧ ಪೊಲೀಸ್ ಇಲಾಖೆ ಕಣ್ಣಿಟ್ಟರೂ ಈ ಅಕ್ರಮ ವ್ಯಾಪಕವಾಗಿ ಮುಂದುವರಿದಿದೆ. ಡ್ರಗ್ಸ್ ದಂಧೆಯಲ್ಲಿ ಸಿನಿಮಾ ನಟ ನಟಿಯರ ಹೆಸರು ಕೇಳಿ ಬಂದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಡ್ರಗ್ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡುತ್ತ, ಆದರೂ ಡ್ರಗ್ ದಂಧೆಯ ಮೂಲ ನಿಯಂತ್ರಣ ಇನ್ನೂ ಸಾಧ್ಯವಾಗಲಿಲ್ಲ. ಕಳೆದ ಐದು ವರ್ಷ ಅಂಕಿ ಅಂಶಗಳು ಆತಂಕಕಾರಿ ಮಾಹಿತಿಯನ್ನು ಹೊರಹಾಕುತ್ತಿವೆ. 2018 ರಿಂದ ಇಲ್ಲಿಯವರೆಗೆ ಒಟ್ಟು 12, 836 ಪ್ರಕರಣಗಳು ಪತ್ತೆಯಾಗಿದ್ದು, 1997 ಪೆಡ್ಲರ್ಗಳ ಬಂಧನವಾಗಿದೆ. ಪ್ರಕರಣಗಳ ಸಂಖ್ಯೆಗೂ, ಬಂಧಿತ ಪೆಡ್ಲರ್ಗಳ ಸಂಖ್ಯೆಗೂ ಸಾಕಷ್ಟು ವ್ಯತ್ಯಾಸ ಇದೆ. ಪೊಲೀಸ್ ಇಲಖೆಯೇ ಈ ದಂಧೆಯಲ್ಲಿ ತೊಡಗಿದೆಯಾ ಎಂಬ ಅನುಮಾನ ಸಹಜವಾಗಿ ಮೂಡುತ್ತದೆ. ಅನೇಕ ಪ್ರಕರಣಗಳಲ್ಲಿ ಪೊಲೀಸರು ಭಾಗಿಯಾಗಿ ಅಮಾನತ್ತಾದ ಉದಾಹರಣೆಗಳು ಇವೆ.

ಡ್ರಗ್ಸ್ ಮುಕ್ತ ಕರ್ನಾಟಕ:

ಮಾದಕ ವ್ಯಸನಗಳ ಸಹವಾಸ ಮಾಡುವವರಿಗೆ ಕಠಿಣ ಶಿಕ್ಷೆ ಕಟ್ಟಿಟ್ಟ ಬುತ್ತಿ. ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಾಣ ನಮ್ಮ ಗುರಿ ಎಂದು ಆಳುವ ಸರಕಾರಗಳು ಹೇಳುತ್ತಲೆ ಇವೆ. 1908 ಎಂಬ ಸಹಾಯವಾಣಿಯನ್ನು ಅದಕ್ಕಾಗಿ ನೀಡಲಾಗಿದೆ. ಮಾದಕ ದ್ರವ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು ಹಾಗೂ ಪತ್ತೆಮಾಡಲು ಹಾಗೂ ಹದಿಹರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ. ಆದರೆ ಅದರಲ್ಲಿ ಎಷ್ಟು ಜಾರಿಯಾಗುತ್ತಿದೆ ಎಂಬುದು ಪ್ರಶ್ನೆ

ಅಧಿಕಾರಿ, ಸಿಬ್ಬಂದಿಗಳಿಗೆ ಮಾದಕ ದ್ರವ್ಯ (ಡ್ರಗ್ಸ್)ಗಳ ಮಾರಾಟ ಮತ್ತು ಸೇವಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸುವಂತೆ, ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆಹಚ್ಚಲು ಸೂಚಿಸಲಾಗಿದೆ. ಮಾದಕ ವಸ್ತುಗಳ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆಯಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲು ತನಿಖಾಧಿಕಾರಿಗಳಿಗೆ ಆಯೋಜನೆ ಮಾಡಲಾಗಿದೆ. ಆದರೆ ಅಗತ್ಯ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿಲ್ಲ. ಆದರೆ ಸಿಬ್ಬಂದಿ ಕೊರತೆಯಿಂದಾಗಿ ಪತ್ತೆ ಹಚ್ಚಲು ಮತ್ತು ಡ್ರಗ್ಸ್ ನಿಯಂತ್ರಣ ಮಾಡಲು ಸಾಧ್ಯವಾಗುತ್ತಿಲ್ಲ.

ಬಾರ್ ಮತ್ತು ರೆಸ್ಟೋರೆಂಟ್, ಕಾಫಿ-ಡೇ, ಪಬ್, ಡಾನ್ಸ್ಬಾರ್ ಮುಂತಾದ ಯುವಕರು ಹೆಚ್ಚಾಗಿ ಸೇರುವ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲು ಅವಕಾಶ ಇದೆ.

ಶಾಲಾ-ಕಾಲೇಜ್ ವಿದ್ಯಾರ್ಥಿಗಳೇ ಟಾರ್ಗೆಟ್:

ಡ್ರಗ್ಸ್ ದಂಧೆಕೋರರ ಜಾಲಕ್ಕೆ ಶಾಲಾ-ಕಾಲೇಜ್ ವಿದ್ಯಾರ್ಥಿಗಳು ಬಲಿಯಾಗುತ್ತಿದ್ದಾರೆ. ಕಾರಣಾಂತರಗಳಿಂದ ಶಾಲಾ ? ಕಾಲೇಜ್ ತೊರೆದ ವಿದ್ಯಾರ್ಥಿಗಳು ಡ್ರಗ್ಸ್ ಪೆಡ್ಲರ್ಗಳಾಗಿ ಬದಲಾಗುತ್ತಿದ್ದಾರೆ. ಕಬ್ಬನ್ ಪೇಟೆಯಲ್ಲಿ ದಾಖಲಾದ ದೂರಿನ ಪ್ರಕಾರ 9 ನೇ ತರಗತಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಆನ್ಲೈನ್ನಲ್ಲಿ ಡ್ರಗ್ಸ್ ತರಿಸಿಕೊಂಡಿದ್ದ ಎಂಬ ದಾಖಲೆ ಇದೆ. ಅನೇಕ ನಟ, ನಟಿಯರು, ಸೆಲೆಬ್ರಿಟಿಗಳು ಡ್ರಗ್ಸ್ ಎಂಬ ಲೋಕವನ್ನು ಹೊಕ್ಕಾಗಿದೆ. ಅನೇಕರನ್ನು ಬಂಧಿಸಲಾಗಿದೆ. ಕೋರ್ಟ್ ನಲ್ಲಿ ಕೆಲಪ್ರಕರಣಗಳು ನಡೆಯುತ್ತಿವೆ.

ಡ್ರಗ್ಸ್ ಮಾಫೀಯಾ ಬಗ್ಗೆ ಜಾಗೃತಿ ಮೂಡಿಸಿದ್ದ ಚಿತ್ರಗಳು:

ಮಾದಕವಸ್ತು ಕಥಾಹಂದರ ಹೊಂದಿರುವ ಕನ್ನಡದ ಸಿನಿಮಾಗಳಿಗೆ ಏನೂ ಬರವಿಲ್ಲಕನ್ನಡ ಸಿನಿಮಾ ಎಂಬ ಮಾಯಾಜಾಲದ ಪರದೆ ತೆರೆದಾಗಿನಿಂದ ಮಾದಕವಸ್ತುಗಳ ಅನಾಹುತದ ಕುರಿತಾದ ಹಲವಾರು ಚಲನಚಿತ್ರಗಳು ಬಂದಿವೆ.

ಮಾದಕವಸ್ತುಗಳ ಸೇವನೆಯಿಂದ ಆಗಬಹುದಾದ ಅನಾಹುತಗಳ ಕುರಿತ ಸಂದೇಶ ಇಂದಿನ ಚಲನಚಿತ್ರಗಳಲ್ಲಿ ಇರುತ್ತದಾದರೂ, ಅದನ್ನು ವಿಜೃಂಭಿಸುವ ರೀತಿ ಈ ಸಂದೇಶವನ್ನು ಮರೆಮಾಚಿ ಬಿಡುತ್ತದೆ. ಇತ್ತೀಚೆಗೆ ಬಿಡುಗಡೆಗೊಂಡ ಕೆಲವು ಚಿತ್ರಗಳನ್ನೇ ಗಮನಿಸುವುದಾದರೆ ಈ ವಾದದಲ್ಲಿ ಸತ್ಯಾಂಶವಿದೆ ಅನಿಸದಿರದು. ಆದರೂ ಸಾಮಾಜಿಕ ಪರಿವರ್ತನೆಯ ಜವಾಬ್ದಾರಿ ಹೊತ್ತಿರುವ ಚಲನಚಿತ್ರಗಳು ಮಾದಕವಸ್ತು ಎಂಬ ಸಾಮಾಜಿಕ ಪಿಡುಗಿನ ಕುರಿತು ಬೆಳಕು ಚೆಲ್ಲುತ್ತಿವೆ ಎಂದು ಹೇಳಲು ಅಡ್ಡಿ ಇಲ್ಲ. ಹಾಗಾದರೆ ಮಾದಕವಸ್ತು ಕಥಾಹಂದರ ಉಳ್ಳ ಚಿತ್ರಗಳನ್ನು ನೋಡುವುದಾದರೆ.

ಶಬ್ದವೇದಿ:

ಡಾ. ರಾಜ್‌ಕುಮಾರ್ ನಟನೆಯ ಈ ಸಿನಿಮಾದಲ್ಲಿ ಡ್ರಗ್ಸ್ ಮಾಫಿಯಾಗೆ ಯುವಜನತೆ ಬಲಿಯಾಗುತ್ತಿರುವ ಸಮಸ್ಯೆಯ ವಿರುದ್ಧ ಹೋರಾಡುವ ಪೊಲೀಸ್ ಅಧಿಕಾರಿಯ ಕಥೆಯಿದೆ. ಇಡೀ ಡ್ರಗ್ಸ್ ಮಾಫಿಯಾವನ್ನೇ ಬುಡಸಮೇತ ಕಿತ್ತು ಹಾಕಬೇಕು ಎಂದು ಕಥಾನಾಯಕ ಹೋರಾಡುತ್ತಿದ್ದರೆ, ಮನೆಯಲ್ಲಿ ಆತನ ಪುತ್ರನೇ ಡ್ರಗ್ಸ್ ದಾಸನಾಗಿರುತ್ತಾನೆ. ಡ್ರಗ್ಸ್ ಅನ್ನು ಬೇರೆ ಬೇರೆ ಮಾರ್ಗದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಹೇಗೆ ಸರಬರಾಜು ಮಾಡಲಾಗುತ್ತದೆ ಎಂಬುದರ ಬಗ್ಗೆಯೂ ಇದರಲ್ಲಿ ವಿವರವಿದೆ. ಇದರ ಸೇವನೆಯಿಂದ ಯುವಕರಿಗೆ ಆಗುವ ತೊಂದರೆ ಬಗ್ಗೆಯೂ ಪ್ರಸ್ತಾಪವಿದ್ದ ಸಿನಿಮಾವಿದು.

ಲೂಸಿಯಾ:

ನೀನಾಸಂ ಸತೀಶ್ ನಟನೆಯ ಈ ಸಿನಿಮಾದಲ್ಲಿ ಕನಸು ಕಾಣಲು ಮಾತ್ರೆಯೊಂದನ್ನು ತೆಗೆದುಕೊಳ್ಳುವ ಕಥೆಯಿತ್ತು. ಇದು ಸಹ ಒಂದು ರೀತಿಯಲ್ಲಿ ಮಾದಕ ದ್ರವ್ಯವೇ. ಕನಸನ್ನೇ ನಿಜ ಎಂದುಕೊಂಡು ಸ್ಟಾರ್ ನಟನೊಬ್ಬ ಅನುಭವಿಸುವ ಮಾನಸಿಕ ಯಾತನೆಯನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ. ಆ ಮಾತ್ರೆ ತೆಗೆದುಕೊಳ್ಳುವವರ ಮಾನಸಿಕ ಸ್ಥಿತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಈ ಚಿತ್ರದಲ್ಲಿ ತೋರಿಸಲಾಗಿದೆ.

ಕೆಂಡಸಂಪಿಗೆ:

ಈ ಚಿತ್ರದಲ್ಲಿಯೂ ಮಾದಕ ದ್ರವ್ಯ ಜಾಲದ ಚರ್ಚೆಯಿದೆ. ಇಡೀ ಸಿನಿಮಾ ಕಥೆಯ ಮೂಲ ಡ್ರಗ್ಸ್ ದಂಧೆಯೇ ಆಗಿರುತ್ತದೆ. ಇದರಲ್ಲಿ ಪೊಲೀಸರು ಡ್ರಗ್ಸ್ ದಂಧೆಯಿಂದ ಹಣ ಹೇಗೆ ಮಾಡುತ್ತಾರೆ, ಅದನ್ನು ಹೇಗೆ ಮುಚ್ಚಿ ಹಾಕುತ್ತಾರೆ ಮತ್ತು ಅಮಾಯಕರನ್ನು ಈ ಹೇಗೆ ಸಿಲುಕಿಸುತ್ತಾರೆ ಎಂಬ ಬಗ್ಗೆ ಕಥೆಯಿದೆ.

ರಿಷಿ:

ಶಿವರಾಜ್ಕುಮಾರ್ ಮತ್ತು ವಿಜಯ್ ರಾಘವೇಂದ್ರ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿಯೂ ಮಾದಕ ವಸ್ತು ದಂಧೆಯ ಪ್ರಸ್ತಾಪವಿದೆ. ಇದರಲ್ಲಿ ವಿಜಯ್ ರಾಘವೇಂದ್ರ ಮಾದಕ ದ್ರವ್ಯ ವ್ಯಸನಿಯ ಪಾತ್ರದಲ್ಲಿ ನಟಿಸಿದ್ದಾರೆ. ಈ ವ್ಯಸನದಿಂದ ಅವರನ್ನು ಹೊರತರಲು ಶಿವರಾಜ್ಕುಮಾರ್ ಕಷ್ಟಪಡುತ್ತಾರೆ. ಜತೆಗೆ ಡ್ರಗ್ ಪೆಡ್ಲರ್ಗಳನ್ನು ಸಹ ಹಿಡಿದು ಪೊಲೀಸರಿಗೆ ಒಪ್ಪಿಸುತ್ತಾರೆ. ಈ ಚಿತ್ರ ಕನ್ನಡದಲ್ಲಿ ಯಶಸ್ವಿಯಾದ ನಂತರ ತೆಲುಗಿಗೂ ರೀಮೇಕ್ ಆಗಿತ್ತು.

ಹೀಗೆ ಡ್ರಗ್ಸ್ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ. ಆದರೆ ಸರಕಾರ ಜೇಗೃತಿಗೆ ನೀಡುತ್ತಿರುವಷ್ಟು ಮಹತ್ವವನ್ನು ಮಟ್ಟ ಹಾಕುವುದಕ್ಕೆ ನೀಡುತ್ತಿಲ್ಲ. ಈ ದಂಧೆಯನ್ನು ಹತ್ತಿಕ್ಕಲೇ ಬೇಕು. ಯಾರು ಯಾರು ಇದ್ದಾರೆ ಅನ್ನೋದು ಬಹಿರಂಗವಾಗಬೇಕು. ರಾಜಕಾರಣಿಗಳ, ಚಿತ್ರರಂಗದವರ,ಉದ್ಯಮಿಗಳ ಮಕ್ಕಳ ಡೌಲು ಎಲ್ಲರಿಗೂ ತಿಳಿಯಬೇಕು. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು. ಅದಕ್ಕಾಗಿ ಪೊಲೀಸ್ ಇಲಾಖೆಯನ್ನು ಬಲಪಡಿಸಬೇಕು. ಸಿಬ್ಬಂಧಿಗಳ ನೇಮಕ ಭರ್ತಿಯಾಗಬೇಕು. ಪೊಲೀಸರಿಗೆ ಈ ವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು.

ಸಾಮಾಜಿಕ ಬದುಕನ್ನೆ ನಾಶಮಾಡುವ ಭಯಂಕರ ಸಾಂಕ್ರಾಮಿಕ ರೋಗವಾಗಿ ಡ್ರಗ್ಸ್ ಜನರ ನಡುವೆ ಹರಿದಾಡುತ್ತಿದೆ. ಇದನ್ನು ನಿಯಂತ್ರಿಸುವ ಹಾಗೂ ಯುವಜನರನ್ನು ರಕ್ಷಿಸುವ ದೊಡ್ಡ ಜವಾಬ್ದಾರಿ ಸರಕಾರದ ಮೇಲೆ ಇದೆ. ಸರಕಾರಗಳು ಆ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಿ.

ವರ್ಷ	ದಾಖಲಾದ ಪ್ರಕರಣ	ಬಂಧಿತ ಪೆಡ್ಲರ್ಸ್
2018	1,030	285
2019	1,661	295
2020	4,062	460
2021	4,555	690
2022(ಮೇ)	1,528	261
ಒಟ್ಟು	**12,836**	**1,997**





2017 ರ ಬಳಿಕ ನಂತರ ಪ್ರಮುಖ ಹೋರಾಟಗಳ ನೋಟ

ಕಲ್ಯಾಣ ಮಂಡಳಿ ಮುಂದೆ ಅಹೋರಾತ್ರಿ ಹೋರಾಟ:

ಕೇಂದ್ರ ಕಾರ್ಮಿಕ ಸಂಘಗಳಾದ ಬಿಎಂಎಸ್, ಐಎನ್‌ಟಿಯು, ಎಐಟಿಯುಸಿ,ಸಿಐಟಿಯು ಹಾಗೂ ಎನ್‌ಸಿಎಲ್ ಸಂಯೋಜಿತಗೊಂಡ ಸಂಘಗಳು ಸೇರಿ "ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ" ಎನ್ನುವ ಹೆಸರಿನಲ್ಲಿ ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಆಮ್ಲನ್ ಆದಿತ್ಯ ಬಿಸ್ವಾಶ ಮಂಡಳಿಮ ಕೈಗೊಂಡ 2000 ಕೋಟಿ ಖರ್ಚು ಮಾಡುವ ಹಲವು ತೀರ್ಮಾನಗಳನ್ನು ಕೈ ಬಿಡಬೇಕು ಎಂದು ಆಗ್ರಹಿಸಿ ನವೆಂಬರ್ ತಿಂಗಲ್ಲಿ ಮೂರು ದಿನಗಳ ಯಶಸ್ವಿ ಅಹೋರಾತ್ರಿ ಹೋರಾಟವನ್ನು ನಡೆಸಲಾಯಿತು ಇದರಲ್ಲಿ ಮೊದಲನೆ ದಿನ 5000 ಕ್ಕೂ ಅಧಿಕ ಕಾರ್ಮಿಕರು ಎರಡು ದಿನಗಳಲ್ಲಿ ಮತ್ತಷ್ಟು ಸಾವಿರ ಕಾರ್ಮಿಕರು ಭಾಗವಹಸಿದ್ದರು. ಈ ರೀತಿ ಕಟ್ಟಡ ಕಾರ್ಮಿಕ ಸಂಘಗಳನ್ನು ಒಂದು ವೇದಿಕೆಗೆ ತರಲು ಸಾಧ್ಯವಾದುದ್ದು ಇಡೀ ದೇಶದಲ್ಲೇ ಮೊದಲ ಸಾಧನೆಯಾಗಿತ್ತು.

ಕಾರ್ಮಿಕ ಸಂಘಗಳ ರಾಷ್ಟ್ರವ್ಯಾಪಿ ಮುಷ್ಕರ

ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಕರೆ ನೀಡಿದ ಎರಡು ದಿನಗಳ ರಾಷ್ಟ್ರವ್ಯಾಪಿ ಮುಷ್ಕರವು ಕಟ್ಟಡ ನಿರ್ಮಾಣ ವಲಯದಲ್ಲಿ ಇಡೀ ದೇಶದಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ವ್ಯಾಪಕವಾಗಿ ಮುಷ್ಕರ ಯಶಸ್ವಿಯಾಗಿದೆ. ಅಖಿಲ ಭಾರತ ಕೇಂದ್ರಕ್ಕೆ ಬಂದಿರುವ ಪ್ರಾಥಮಿಕ ವರದಿಗಳ ಪ್ರಕಾರ ಮೊದಲನೆ ದಿನ ಸುಮಾರು 15 ಲಕ್ಷ ಹಾಗೂ ಎರಡನೇ ದಿನ ಸುಮಾರು 16 ಲಕ್ಷ ಕಾರ್ಮಿಕರು ಭಾಗವಹಿಸಿರುವ ವರದಿ ತಲುಪಿದೆ. ಕರ್ನಾಟಕದಲ್ಲಿ ಸುಮಾರು 2 ಲಕ್ಷದಷ್ಟು ಕಾರ್ಮಿಕರು ಮುಷ್ಕರದಲ್ಲಿ ಕೆಲಸದಿಂದ ದೂರವಿದ್ದು ಸರಿ ಸುಮಾರು 1 ಲಕ್ಷದಷ್ಟು ಜನರು ಜನರು ಮುಷ್ಕರಲ್ಲಿ ನೇರ ಭಾಗಿಯಾಗಿದ್ದರು.

ಡಿಸೆಂಬರ್ 2 ಮತ್ತು 3 2021 ಕಟ್ಟಡ ಕಾರ್ಮಿಕರ ಮುಷ್ಕರ

ಕನಸ್ಟ್ರಕ್ಷನ್ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾ ಸಂಘಟನೆಯು ನಿರ್ಮಾಣ ವಲಯದ ಕಾರ್ಮಿಕರ ಎರಡು ದಿನಗಳ ರಾಷ್ಟ್ರೀಯ ಮುಷ್ಕರಕ್ಕೆ ಡಿಸೆಂಬರ್ 2 ಮತ್ತು 3 ರಂದು ಕರೆ ನೀಡಿತ್ತು ಈ ಕರೆಯನ್ನು ಬೆಂಬಲಿಸಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ಸಿಐಟಿಯು) ರಾಜ್ಯದ ಕಟ್ಟಡ ನಿರ್ಮಾಣ ಕಾರ್ಮಿಕರು ಎದುರಿಸುತ್ತಿರುವ ಹತ್ತು ಹಲವು ಬೇಡಿಕೆಗಳ ಆಧಾರದಲ್ಲಿ ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲೂಕು ಕಾರ್ಮಿಕ ಇಲಾಖೆಗಳ ಕಚೇರಿಗಳ ಎದುರು ಪ್ರತಿಭಟನೆಗಳನ್ನು ಆಯೋಜಿಸಿತ್ತು. ರಾಜ್ಯದ್ಯಾಂತ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಈ ಪ್ರತಿಭಟನೆ ಯಶಸ್ವಿಗೊಳಿಸಿದ್ದಾರೆ. ಬೆಂಗಳುರಿನಲ್ಲಿ ಮೊದಲನೆ ದಿನ ಡಿಸೆಂಬರ್ 2 ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ನೂರಾರು ಕಾರ್ಮಿಕರು ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಿದರು. ಎರಡನೇ ದಿನ ಡಿಸೆಂಬರ್ 3 ರಂದು ಡೈರಿ ಸರ್ಕಲ್ ಬಳಿ ಇರುವ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಸುರಕ್ಷಾ ಭವನದ ಮುಂದೆ ನೂರಾರು ಕಾರ್ಮಿಕರು ಪ್ರತಿಭಟನೆ ನಡೆಸಿದರು.

SAVE BOCW ACT 1996:

ದೇಶದ್ಯಾಂತ ಕಟ್ಟಡ ಕಾರ್ಮಿಕರ ನಡುವೆ ಪ್ರಚಾರ ನಡೆಸಿ ಮುಂಬರುವ ಲೋಕಸಭಾ ಚುನಾವಣೆಯೊಳಗಾಗಿ ಒಂದು ಆಂದೋಲನ ಸ್ವರೂಪ ಬೆಳೆಸಲು SAVE BOCW ACT-1996 ಎನ್ನುವ ಘೋಷಣೆಯೊಂದಿಗೆ 2019 ರ ಫೆಬ್ರವರಿ 21 ರಿಂದ ಮಾರ್ಚ 6 ರ ವರಗೆ ಪ್ರತಿಭಟನೆ, ಸಹಿಸಂಗ್ರಹ, ಬೀದಿ ಬದಿ ಸಭೆ, ಜಾಥಾಗಳ ಸೇರಿದಂತೆ ವಿವಿಧ ಬಗ್ಗೆ ಪ್ರಚಾರಾಂದೋಲನ ನಡೆಸಲು ಕರೆ ನೀಡಿತ್ತು.

ರಾಜ್ಯದಲ್ಲಿ ಈ ಅವಧಿಯಲ್ಲಿ ಉಡುಪಿ. ಉತ್ತರ ಕನ್ನಡ, ಕಲುಬುರಗಿ, ಬಳ್ಳಾರಿ, ಕೋಲಾರ ಮೊದಲಾದ ಜಿಲ್ಲೆಗಳಲ್ಲಿನ ಸಂಸದರ ಕಚೇರಿಗಳ ಮುಂದೆ ಯಶಸ್ವಿ ಪ್ರತಿಭಟನೆಗಳು ನಡೆದಿವೆ. ಇದಲ್ಲದೆ ಬೆಂಗಳೂರು, ತುಮಕೂರು, ದ.ಕನ್ನಡ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಮಂಡ್ಯ, ಕೊಡಗು, ಕೊಪ್ಪಳ, ಮೈಸೂರು, ಗದಗ್, ಬೀದರ್, ಜಿಲ್ಲೆಗಳಲ್ಲಿ ವಲಯ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಹಂತದ ಕಾರ್ಮಿಕರ ಸಭೆಗಳನ್ನು ನಡೆದಿವೆ ಮತ್ತು ಕಾರ್ಮಿಕರ ಸಹಿಸಂಗ್ರಹ ನಡೆಸಿ ಮನವಿಗಳನ್ನು ಸಲ್ಲಿಸಲಾಗಿದೆ.

ಜಂಟಿ ಬೆಂಗಳೂರು ರ್‍ಯಾಲಿ:

"ಕಟ್ಟಡ ಕಾರ್ಮಿಕ ಕಾನೂನು–1996 ಉಳಿಸಿ–ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಕಾರ್ಮಿಕರ ಬದುಕನ್ನು ರಕ್ಷಿಸಿ ಎನ್ನುವ ಘೋಷಯಡಿ ಸಮನ್ವಯ ಸಮಿತಿ ನೇತೃತ್ವದಲ್ಲಿ 2019 ಸೆಪ್ಟಂಬರ 19 ರಂದು ಆಯೋಜಿಸಲಾದ ಬೆಂಗಳೂರು ರ್‍ಯಾಲಿ ಯಶಸ್ವಿಯಾಯಿತು. ಸಿಟಿ ರೈಲ್ವೇ ನಿಲ್ದಾಣದಿಂದ ಫ್ರೀಡಂ ಪಾರ್ಕವರಗೂ ನಡೆದ ಮೆರವಣಿಗೆಯಲ್ಲಿ 5000 ಕ್ಕೂ ಅಧಿಕ ಕಟ್ಟಡ ಕಾರ್ಮಿಕರನ್ನು ಪಾಲ್ಗೋಳಿಸಲು ಎಲ್ಲಾ ಸಂಘಟನೆಗಳು ಪ್ರಯತ್ನ ನಡೆಸಿದ್ದವು. ಈ ಬಗ್ಗೆ ಪೋಸ್ಟರ್ ಹಾಗೂ ಕರಪತ್ರಗಳ ಮೂಲಕ ವ್ಯಾಪಕ ಪ್ರಸಾರ, ಪತ್ರಿಕಾಗೋಷ್ಠಿ ನಡೆಸಲಾಯಿತು. ಇದಕ್ಕೆ ಪೂರ್ವದಲ್ಲಿ ಶಾಸಕರ ಭವನದಲ್ಲಿ 'ದುಂಡು ಮೇಜಿನ ಸಭೆ' ಆಯೋಜಿಸಲಾಗಿತ್ತು. ಇದರಲ್ಲಿ ಸರ್ವೂಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ಜಸ್ಟೀಸ್ ಗೋಪಾಲಗೌಡ ಇತರರು ಭಾಗವಹಿಸಿದ್ದರು.

ಕೋವಿಡ್ ಕಾಲಘಟ್ಟ: ಐತಿಹಾಸಿಕ ಹೋರಾಟಗಳು 2020 ಜುಲೈ 12 ರ ಹೋರಾಟ

ಸಮನ್ವಯ ಸಮಿತಿ ತೀರ್ಮಾನದಂತೆ ರೇಷನ್ ಕಿಟ್ ಹಗರಣ ಸೇರಿದಂತೆ ಮಂಡಳಿಯ ಇತರೆ ತೀರ್ಮಾನಗಳನ್ನು ತನಿಖೆಗೊಳಪಡಿಸಬೇಕು ಹಾಗೂ ಕೋವಿಡ್ ಎರಡನೇ ಅಲೆ ಪರಿಹಾರವನ್ನು 10 ಸಾವಿರಕ್ಕೇರಿಸಬೇಕು ಎನ್ನುವ ಬೇಡಿಕೆಯೊಂದಿಗೆ ಸಮನ್ವಯ ಸಮಿತಿ ನೇತೃತ್ವದಲ್ಲಿ ನಡೆಸಲಾದ ಜುಲೈ 12 ರ ಹೋರಾಟ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಾಕಷ್ಟು ಯಶಸ್ವಿಗೊಳಿಸಿದರು. ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಹೋರಾಟಕ್ಕೆ ಅಣಿನೆರೆದ ಕಾರ್ಮಿಕರನ್ನು ಬೆಳೆಗ್ಗೆಯಿಂದಲೇ ಬಂಧನಕ್ಕೊಳಪಡಿಸಿದ ಪೊಲೀಸರು ಕೆಲವರ ಮೇಲೆ ಲಾಠಿ ಪ್ರಹಾರ ನಡೆಸಿ ಭಯಭೀತರನ್ನಾಗಿಸುವ ಯತ್ನ ನಡೆಸಿದರು. ಆನೇಕಲ್ ಮತ್ತು ಕೇಂಗೇರಿ ಪ್ರದೇಶದಿಂದ ಆಗಮಿಸಿದ್ದ ಸುಮಾರು 40 ಕಾರ್ಮಿಕರು ಮತ್ತು ನಾಯಕರನ್ನು ಪೊಲೀಸ್ ವ್ಯಾನ್ ಗಳಲ್ಲಿ ಬಂಧಿಸಿ ಕರೆದೊಯ್ದರು. ಇದಾದ ಬಳಿಕ ತಡವಾಗಿ ಮಂಡಳಿ ಬಳಿ ಸೇರಿದ ಸಮನ್ವಯ ಸಮಿತಿ ನಾಯಕರು ಪ್ರತಿಭಟನೆ ಮುಂದುವರೆಸೋಣ ಮತ್ತು ನಾವು ಸಾಮೂಹಿಕವಾಗಿ ಬಂಧನಕ್ಕೊಳಗಾಗುವ ಎನ್ನುವ ತೀರ್ಮಾನ ಕೈಗೊಂಡು ಮಂಡಳಿ ಮುಂಭಾಗ ಸಮಾವೇಶಗೊಂಡರು. ಆದರೆ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಾನಿರತರನ್ನು ಬಂಧಿಸಲು ಯತ್ನಿಸಿದರು ಆಗ ಮಧ್ಯ ಪ್ರವೇಶಿಸಿದ ಮುಖಂಡರು ನಮ್ಮ ಪ್ರತಿಭಟನೆ ಉದ್ದೇಶವನ್ನು ವಿವರಿಸಿ ನಮಗೆ ಸಮಸ್ಯೆ ಬಗೆಹರಿಸುವುದು ಮುಖ್ಯವೇ ಹೊರತು ಬಂಧನವಾಗುವುದಲ್ಲ ಆದರೂ ನೀವು ಬಂಧಿಸುವುದಾದರೆ ನಮಗೇನೂ ಅಭ್ಯಂತರವಿಲ್ಲ ಆದರೆ ಅದರಿಂದ ನಾವು ಎತ್ತಿದ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ ಎನ್ನುವ ವಾಗ್ವಾದವನ್ನು ನಡೆಸಿದರು ಮತ್ತು ಪ್ರತಿಭಟನೆ ಮುಂದುವರೆಸಿದರು. ಇದರಿಂದ ಅನಿವಾರ್ಯವಾಗಿ ಮಂಡಳಿ ಕಾರ್ಯದರ್ಶಿ ಕೆಳಗೆ ಬಂದು ಮನವಿ ಸ್ವೀಕರಿಸಬೇಕಾಯಿತು. ಮತ್ತು ಸಮನ್ವಯ ಸಮಿತಿ ಮುಖಂಡರೊಂದಿಗೆ ಸುಮಾರು ಒಂದೂವರೆ ಗಂಟೆ ನಮ್ಮ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಬೇಕಾಯಿತು. ಅ ಎತ್ತಿದ ಪ್ರಮುಖ ಬೇಡಿಕೆಗಳ ಹಿಂದೆ ಕಳಿಸಲಾಗಿದೆ ಗಮನಿಸಿ. ಇದಾದ ಬಳಿಕಾ ಬಂಧನಕ್ಕೊಳಗಾದ 40 ಜನ ಕಾರ್ಮಿಕರನ್ನು ಬಿಡುಗಡೆ ಮಾಡಲು ಪೊಲೀಸರು ಮೀನಾಮೇಷ ಮಾಡುತ್ತಿದ್ದಾಗ ಕಾರ್ಮಿಕರಿದ್ದಲ್ಲಿಗೆ ತೆರಳಿದ ಮುಖಂಡರು ಪೊಲೀಸರೊಂದಿಗೆ ಮಾತುಕತೆ ನಡೆಸಿ ಅವರನ್ನು ಬಂಧನದಿಂದ ಮುಕ್ತಗೊಳಿಸಿದರು. ಆದರೂ ವಿಪತ್ತು ನಿರ್ವಹಣಾ ಕಾಯ್ದೆ ಅಡಿಯಲ್ಲಿ ಸಣ್ಣದಾದ ಕೇಸನ್ನು ಕಾರ್ಮಿಕರ ಮೇಲೆ ಹೂಡಲಾಗಿದೆ ಆ ಮೂಲಕ ಕಾರ್ಮಿಕರು ಹೋರಾಟಕ್ಕೆ ಬರದಂತೆ ಮಂಡಳಿ ಅಧಿಕಾರಿಗಳು ಮತ್ತು ಪೊಲೀಸರು ವ್ಯವಸ್ಥಿತವಾಗಿ ಕಾರ್ಯತಂತ್ರ ರೂಪಿಸಿರುವುದು ಇದರಿಂದ ಸ್ಪಷ್ಟವಾಯಿತು.



ಅಂಚೆ ಕಾರ್ಡ ಚಳವಳಿ:

ಪ್ರತಿ ಕಾರ್ಮಿಕನಿಂದ ಅಂಚೆ ಕಾರ್ಡ ಚಳವಳಿಯನ್ನು ಕಾನೂನು ಪ್ರಾಧಿಕಾರದ ಮುಖ್ಯಸ್ಥರಿಗೆ, ಮುಖ್ಯಮಂತ್ರಿಗಳಿಗೆ ಹಾಗೂ ಮುಖ್ಯ ಕಾರ್ಯದರ್ಶಿಯವರಿಗೆ ಕಾರ್ಮಿಕ ಸಚಿವರಿಗೆ, ಮಂಡಳಿ ಕಾರ್ಯದರ್ಶಿಗೆ ಪ್ರತಿ ಘಟಕದಿಂದ 25–50 ಕಾರ್ಡುಗಳನ್ನು ಕಾರ್ಮಿಕರ ಮನೆಯಿಂದ ಅವರ ಓದುವ ಮಕ್ಕಳಿಂದ ಬರೆಸಿ ಪ್ರತಿದಿನ ಪೋಸ್ಟ್ ಮಾಡಿಸಲು ಕ್ರಮವಹಿಸಬೇಕು ಎಂದು ಸಭೆ ಕರೆ ನೀಡಲಾಗಿತ್ತು ಇಡೀ ರಾಜ್ಯದ್ಯಾಂತ ಸಾವಿರಾರು ಕಾರ್ಡುಗಳನ್ನು ಬರೆಯಲಾಯಿತು.

ಇ–ಮೇಲ್ ಮೂಲಕ ಮನವಿ:

ಕನಿಷ್ಟ ಎಲ್ಲ ತಾಲೂಕು ವಲಯ ಸಮಿತಿಗಳು ಇ–ಮೇಲ್ ಚಳವಳಿಯನ್ನು ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಕಾನೂನು ಸೇವಾ ಪ್ರಾಧಿಕಾರ, ಕಾರ್ಮಿಕ ಸಚಿವರು, ಸರ್ಕಾರದ ಕಾರ್ಮಿಕ ಕಾರ್ಯದರ್ಶಿ ಹಾಗೂ ಮಂಡಳಿ ಕಾರ್ಯದರ್ಶಿಗೆ ಕಳುಹಿಸಲಾಯಿತು.

ಜುಲೈ 27 ರಂದು ರಾಜ್ಯದ್ಯಾಂತ ಪ್ರತಿಭಟನೆ:

ಶಾಸಕರ ಕೈಗೆ ಕಟ್ಟಡ ಕಾರ್ಮಿಕರ ಆಹಾರ ಕಿಟ್ ಯಾಕೆ? ಎನ್ನುವ ಘೋಷಣೆಯೊಂದಿಗೆ ಜೊತೆಗೆ ಕಲ್ಯಾಣ ಮಂಡಳಿ ಕೈಗೊಂಡಿರುವ ಸಾವಿರಾರು ಕೋಟಿ ವ್ಯವಹಾರಗಳನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿ ಎಲ್ಲ ಗ್ರಾಮ ಪಂಚಾಯ್ತಿ/ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು.

2021 ಆಗಸ್ಟ್ 9 ಪ್ರತಿಭಟನೆ:

ಸಿಐಟಿಯು, ಎಐಕೆಎಸ್ ಹಾಗು ಎಐಎಡಬ್ಲ್ಯೂಯೂ ಸಂಘಟನೆಗಳ ಕರ್ನಾಟಕ ರಾಜ್ಯ ಪದಾಧಿಕಾರಿಗಳ ಜಂಟಿ ಸಭೆಯಲ್ಲಿ ಪರ್ಯಾಯ ಜನಪರ ನೀತಿಗಳಿಗಾಗಿ ನಾವು ನಡೆಸುವ ಈ ಪ್ರಚಾರವು ಜನಸಮುದಾಯವನ್ನು ವ್ಯಾಪಕವಾಗಿ ತಲುಪುವ ರೀತಿಯಲ್ಲಿ ಸೂಕ್ತ ಯೋಜನೆಗಳನ್ನು ರೂಪಿಸಬೇಕು. ಈ ಮೂರು ಸಂಘಟನೆಗಳ ನಾಯಕರ ಜಂಟಿ ಸಭೆಗಳನ್ನು ನಡೆಸಿ ಯೋಜನೆಗಳನ್ನು ರೂಪಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಜುಲೈ 25 ರಿಂದ ಆಗಸ್ಟ್ 8ರ ವರೆಗೆ ಮೂರು ಸಂಘಟನೆಗಳು ಈಗಾಗಲೇ ನಾವು ಒತ್ತಾಯಿಸುತ್ತಿರುವ ಏಳು ಅಂಶಗಳ ಬೇಡಿಕೆ ಪಟ್ಟಿಯೊಂದಿಗೆ, ಈ ಮೂರು ವರ್ಗಗಳಿಗೆ ಸಂಬಂಧಿಸಿದ ಪ್ರಮುಖ ಸ್ಥಳೀಯ ಬೇಡಿಕೆಗಳನ್ನು ಒಳಗೊಂಡು ವ್ಯಾಪಕ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಿ ಆಗಸ್ಟ್ 9 ರಂದು ಪ್ರತಿಭಟನೆಗಳನ್ನು ಆಯೋಜಿಸಲಾಗಿತ್ತು.

ಐತಿಹಾಸಿಕ ಮುಖ್ಯಮಂತ್ರಿ ಮನೆ ಚಲೋ

ಕಲ್ಯಾಣ ಮಂಡಳಿ ಕಾರ್ಮಿಕರ ಸ್ವತ್ತು. ಇಲ್ಲಿರುವ ಹಣ ಕಾರ್ಮಿಕರ ಹಿತಕ್ಕಾಗಿ ಬಳಕೆ ಆಗಬೇಕೆಂದು ಆಗ್ರಹಿಸಿ ಮತ್ತು ಭ್ರಷ್ಟರಿಂದ ಕಲ್ಯಾಣ ಮಂಡಳಿ ಉಳಿಸಲು ಒತ್ತಾಯಿಸಿ ಹತ್ತು ಸಾವಿರಕ್ಕೂ ಅಧಿಕ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು ಸುರಿದ ಮಳೆಯಲ್ಲೂ 20 ಸೆಪ್ಟೆಂಬರ್ ರಂದು ಬೆಂಗಳೂರಿನಲಿ 'ಮುಖ್ಯಮಂತ್ರಿ ಮನೆ ಚಲೋ' ಹೋರಾಟ ವನ್ನು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ನಡೆಸಿದರು. ಬೆಳೆಗ್ಗ 11 ಗಂಟೆಗೆ ಸಿಟಿ ರೈಲ್ವೆ ನಿಲ್ದಾಣದಿಂದ ಆರಂಭಗೊಂಡ ಮೆರವಣಿಗೆ ಫ್ರೀಡಂ ಪಾರ್ಕನಲ್ಲಿ ಸಮಾರೋಪಗೊಂಡಿತು. ರಾಜ್ಯ ಎಲ್ಲ ಜಿಲ್ಲೆಗಳಿಂದಲೂ ನಿರ್ಮಾಣ ವಲಯದ 10 ಸಾವಿರಕ್ಕೂ ಅಧಿಕ ಕಾರ್ಮಿಕರು ಭಾಗಿಯಾಗಿದ್ದರು.

ಮನವಿ ಸ್ವೀಕರಿಸಲು ಆಗಮಿಸಿದ ಮಂಡಳಿ ಕಾರ್ಯದರ್ಶಿ ಅಕ್ರಂಪಾಷಾ ಮತ್ತಿತರೆ ಅಧಿಕಾರಿಗಳು ಒಂದು ಗಂಟೆಗೂ ಅಧಿಕ ಫ್ರೀಡಂ ಪಾರ್ಕನ ಸುರಿವ ಮಳೆಯಲ್ಲಿ ಕುಳಿತುಕೊಳ್ಳಬೇಕಾಯಿತು. ಕಟ್ಟಡ ಕಾರ್ಮಿಕ ಚಳವಳಿಯಲ್ಲಿ ಇದೊಮದು ಮೈಲುಗಲ್ಲಿನ ಹೋರಾಟವಾಗಿತ್ತು. ಕನ್ನಡದ ಎಲ್ಲ ಸುದ್ದಿವಾಹಿನಿಗಳು ಮತ್ತು ವಿಶೇಷವಾಗಿ ಹಿಂದಿಯ ಎನ್.ಡಿ.ಟಿವಿಯ ರವೀಶ್ ಅವರು ಅರ್ಧ ಗಂಟೆ ವಿಶೇಷ ಎಪಿಸೋಡ್ ನಡೆಸಿದ್ದರು.

ಪುಟ 14 ಕ್ಕೆ

‘ಗೆದ್ದರೆ ಆಡಲು ಬಂದಿದ್ದೆ, ಸೋತರೆ ನೋಡಲು ಬಂದಿದ್ದೆ’



ಭಾರತದಂತಹ ದೇಶಗಳ ಪ್ರಸ್ತುತ ಸನ್ನಿವೇಶದಲ್ಲಿ ಸಾಮ್ರಾಜ್ಯಶಾಹಿಯ ವರ್ತನೆ ಈ ತೆರನದ್ದು. ಎಲ್ಲವೂ ಸುಗಮವಾಗಿರುವ ವರೆಗೆ ಅದರ ಶ್ರೇಯಸ್ಸನ್ನು ನವ-ಉದಾರವಾದಿ ಆಳ್ವಿಕೆಗೆ ಸಲ್ಲಿಸಲಾಗುತ್ತದೆ. ಆದರೆ, ಒಂದು ಬಿಕ್ಕಟ್ಟು ಎದುರಾದ ಕೂಡಲೇ, ಅದರ ಹೊಣೆಗಾರಿಕೆಯನ್ನು ನವ-ಉದಾರವಾದಿ ಆಳ್ವಿಕೆಯು ಗಂಟು ಹಾಕಿಕೊಂಡ ನವ-ಫ್ಯಾಸಿಸಂನ ತಲೆಗೆ ಕಟ್ಟಲಾಗುತ್ತದೆ. ಈ ರೀತಿಯಲ್ಲಿ ಸಾಮ್ರಾಜ್ಯಶಾಹಿಯು ದ್ವಿ-ಪಾತ್ರ ವಹಿಸುತ್ತದೆ: ಮೊದಲನೆಯದಾಗಿ, ಧರ್ಮ ಅಥವಾ ಜನಾಂಗೀಯತೆಯ ಆಧಾರದ ಮೇಲೆ ದ್ವೇಷವನ್ನು ಪ್ರಚೋದಿಸುವ ಮೂಲಕ, ನವ-ಉದಾರವಾದಿ ಆಡಳಿತವನ್ನು ಬಲಪಡಿಸುವುದು. ಇದು ನಿರ್ಮಿಸುವ ಹೊಗೆ ಪರದೆಯ ಹೊಗೆ ಪರದೆಯ ಹಿಂದೆ ಕಾರ್ಪೊರೇಟ್‌ಗಳಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ನೀಡುವುದು ಮತ್ತು. ಎರಡನೆಯದಾಗಿ, ಜನರು ದಂಗೆ ಎದ್ದಾಗ ಅದು ತನ್ನನ್ನು ನವ-ಫ್ಯಾಸಿಸ್ಟ್ ಆಳ್ವಿಕೆಯನ್ನೇ ಬಲಿಪಶು ಮಾಡುವುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**

ಸಾಮ್ರಾಜ್ಯಶಾಹಿಯ ಕುಟಿಲತೆಗಳಿಗೆ ಒಂದು ಮಿತಿ ಎಂಬುದೇ ಇಲ್ಲ. ವಿಶ್ವದ ಅನೇಕ ದೇಶಗಳಲ್ಲಿ ನವ-ಫ್ಯಾಸಿಸ್ಟ್ ಸರ್ಕಾರಗಳು ಇಂದು ಅಸ್ತಿತ್ವದಲ್ಲಿವೆ. ಈ ಸರ್ಕಾರಗಳು ತಮ್ಮ ತಮ್ಮ ದೇಶಗಳ ಭಾರೀ ಬಂಡವಾಳಗಾರರ (ಇವರೆಲ್ಲರೂ ಜಾಗತೀಕರಣಗೊಂಡ ಬಂಡವಾಳದೊಂದಿಗೆ ಕೈಜೋಡಿಸಿರುವವರೇ) ಬೆಂಬಲದ ಮೇಲೆ ನಿಂತಿವೆ ಮತ್ತು ನವ-ಉದಾರವಾದಿ ನೀತಿಗಳನ್ನು ತಮ್ಮದೇ ಆದ ವಿಶಿಷ್ಟ ಕ್ರೂರ-ಶೈಲಿಯಲ್ಲಿ ಜಾರಿಗೊಳಿಸುತ್ತವೆ. ಇನ್ನೂ ಕೆಲವು ದೇಶಗಳಲ್ಲಿ, ನವ-ಫ್ಯಾಸಿಸ್ಟ್ ಸಂಘಟನೆಗಳು ತಾವು ಅಧಿಕಾರಕ್ಕೆ ಬಂದರೆ ನವ-ಉದಾರವಾದಿ ನೀತಿಗಳನ್ನು ಜಾರಿಗೊಳಿಸುವುದಾಗಿ ತಮ್ಮ ದೇಶಗಳ ಭಾರೀ ಬಂಡವಾಳಗಾರ-ಆಶ್ರಯದಾತರಿಗೆ ಭರವಸೆ ನೀಡುವ ಮೂಲಕ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ-ಉದಾರವಾದ ಮತ್ತು ನವ-ಫ್ಯಾಸಿಸ್ಟ್‌ಗಳ ಮೈತ್ರಿಯು ಸರ್ವವ್ಯಾಪಿಯಾಗಿದೆ.



ನವ-ಉದಾರವಾದವು ಬಹಳ ದಿನಗಳಿಂದಲೂ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವುದರಿಂದಾಗಿ ಅದು ಅವಶ್ಯವಾಗಿ ನವ-ಫ್ಯಾಸಿಸ್ಟ್‌ಗಳೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾಗುತ್ತದೆ. "ನವ-ಉದಾರವಾದಿ ನೀತಿಗಳ ಮೂಲಕ ಪ್ರತಿಯೊಬ್ಬರ ಸ್ಥಿತಿ-ಗತಿಗಳು ಅಂತಿಮವಾಗಿ ಉತ್ತಮಗೊಳ್ಳುತ್ತವೆ" ಎಂಬ ವಿಶ್ವಾಸವನ್ನು ಅದು ಜನರಲ್ಲಿ ಮೂಡಿಸಿತ್ತು ಮತ್ತು ಬಹಳ ದಿನಗಳ ಕಾಲ ಈ ವಿಶ್ವಾಸ ಅಳಿಯದಂತೆ ನೋಡಿಕೊಂಡಿತ್ತು. ಆದರೆ, ಅರ್ಥವ್ಯವಸ್ಥೆಯು ಮುಂದೆ ಸಾಗಲಾರದ ಒಂದು ಜಡ ಸ್ಥಿತಿಯನ್ನು ತಲುಪಿರುವಾಗ, ಈವರೆಗೂ ಅದು ಹೇಳಿಕೊಂಡು ಬಂದಿದ್ದ "ಜಿನುಗು ಸಿದ್ಧಾಂತ"(ಟ್ರಿಕ್ಲ್ ಡೌನ್ ಥಿಯರಿ)ವನ್ನು ಇನ್ನು ಮುಂದೆ ದುಡಿಯುವ ಜನರು ನಂಬುವುದಿಲ್ಲ ಮಾತ್ರವಲ್ಲ ಅವುಗಳನ್ನು ವಿರೋಧಿಸಲು ಮುಂದಾಗುತ್ತಾರೆ. ಆದ್ದರಿಂದ, ಜನರನ್ನು ದಮನಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಹಾಗಾಗಿ, ಈ ಎಲ್ಲವನ್ನೂ ಮರೆಮಾಚುವ ಸಲುವಾಗಿ ಭಿನ್ನ ಭಿನ್ನ ಧರ್ಮೀಯ ಮತ್ತು ಭಿನ್ನ ಭಿನ್ನ ಜನಾಂಗೀಯ ಗುಂಪುಗಳ ನಡುವೆ ಘರ್ಷಣೆಗಳನ್ನು ಪ್ರಚೋದಿಸಬೇಕಾಗುತ್ತದೆ. ಇಂತಹ ಘರ್ಷಣೆಗಳನ್ನು ಪ್ರಚೋದಿಸುವಲ್ಲಿ ಪರಿಣಿತಿ ಹೊಂದಿದ ನವ-ಫ್ಯಾಸಿಸ್ಟ್ ಸಂಘಟನೆಗಳು ಈ ಸನ್ನಿವೇಶದಲ್ಲಿ ರಂಗ ಪ್ರವೇಶ ಪಡೆಯುತ್ತವೆ.

ನವ-ಉದಾರವಾದಿ ಮತ್ತು ನವ-ಫ್ಯಾಸಿಸ್ಟ್ ಮೈತ್ರಿ

ನವ-ಫ್ಯಾಸಿಸಂನೊಂದಿಗಿನ ಮೈತ್ರಿಯು ಈ ಕಾರಣದಿಂದ ಮಾತ್ರವಲ್ಲದೆ, ಅಧಿಕವಾಗಿ ಮತ್ತೊಂದು ಕಾರಣದಿಂದಲೂ ನವ-ಉದಾರವಾದಕ್ಕೆ ಪ್ರಯೋಜನಕಾರಿಯಾಗಿದೆ. ಅಧಿಕಾರದಲ್ಲಿರುವ ನವ-ಫ್ಯಾಸಿಸ್ಟ್ ಸಂಘಟನೆಗಳು, ನವ-ಉದಾರವಾದಕ್ಕೆ ಪ್ರಯೋಜನಕಾರಿಯಾಗಿದ್ದರೂ ಸಹ, ನವ-ಉದಾರವಾದವು ಎದುರಿಸುತ್ತಿರುವ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯ ಹೊಂದಿಲ್ಲ. ಕುಗ್ಗುತ್ತಿರುವ ಬೇಡಿಕೆಗೆ ಹೋಲಿಸಿದರೆ ಅತಿಯಾದ ಉತ್ಪಾದನೆಯಿಂದ ಕೂಡಿರುವ ನವ-ಉದಾರವಾದದ ಬಿಕ್ಕಟ್ಟನ್ನು ನಿವಾರಿಸಬಹುದಾದ ಒಟ್ಟಾರೆ ಬೇಡಿಕೆಯನ್ನು ಪ್ರಚೋದಿಸುವಂತಹ ಪ್ರಭುತ್ವದ ಮಧ್ಯಪ್ರವೇಶದ ಕ್ರಮಗಳನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಅವಿರತವಾಗಿ ವಿರೋಧಿಸುತ್ತದೆ. ಬೇಡಿಕೆಯ ನಿವ್ವಳ ವಿಸ್ತರಣೆಯನ್ನು ಸೃಷ್ಟಿಸಬಲ್ಲ ಪ್ರಭುತ್ವದ ಖರ್ಚು-ವೆಚ್ಚಗಳಿಗೆ ಹಣ ಒದಗಿಸಿಕೊಳ್ಳಬಹುದಾದ ಎರಡೇ ಎರಡು ಮಾರ್ಗಗಳಾದ ಶ್ರೀಮಂತರ ಮೇಲೆ ತೆರಿಗೆ ಹೇರುವುದನ್ನೂ ಅದು ಬಯಸುವುದಿಲ್ಲ ಅಥವಾ ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನೂ ಅದು ಬಯಸುವುದಿಲ್ಲ, ಆದ್ದರಿಂದ, ನವ-ಫ್ಯಾಸಿಸ್ಟ್ ಸರ್ಕಾರಗಳೂ ಸಹ, ತಮ್ಮ ವಿಭಜಕ ಅಜೆಂಡಾಗಳ ಹೊರತಾಗಿಯೂ, ಬಿಕ್ಕಟ್ಟು ಆಳಗೊಳ್ಳುತ್ತಿದ್ದಂತೆಯೇ ಜನ ಬೆಂಬಲವನ್ನು ಕಳೆದುಕೊಳ್ಳುತ್ತವೆ. ಘಟನಾವಳಿಗಳು ಈ ರೀತಿಯಲ್ಲಿ ಜರುಗಿದಾಗ, ನವ-ಉದಾರವಾದದ ಬಿಕ್ಕಟ್ಟಿನ ಹೊಣೆಗಾರಿಕೆಯನ್ನು ನವ-ಫ್ಯಾಸಿಸಂನ ಮೇಲೆ ಹೊರಿಸಲಾಗುತ್ತದೆ ಮತ್ತು ನವ-ಫ್ಯಾಸಿಸಂಅನ್ನೇ ದೂಷಿಸಲಾಗುತ್ತದೆ. ಮಾತ್ರವಲ್ಲ, ಜಗಳವನ್ನು ನವ-ಫ್ಯಾಸಿಸಂನೊಂದಿಗೆ ಬಗೆಹರಿಸಿಕೊಳ್ಳುವಂತೆ ಜನರನ್ನು ಉತ್ತೇಜಿಸಲಾಗುತ್ತದೆ, ನವ-ಉದಾರವಾದದೊಂದಿಗೆ ಅಲ್ಲ.

ಆರ್ಥಿಕ ಅಭಿವೃದ್ಧಿಯ ವಿಷಯಗಳಲ್ಲಿ ಮೂರನೇ ಜಗತ್ತಿನ ಬಹುತೇಕ ರಾಷ್ಟ್ರಗಳ ಬೌದ್ಧಿಕ ಪ್ರವಚನವನ್ನು ನಿಯಂತ್ರಿಸುವ ಬ್ರೆಟನ್ ವುಡ್ಸ್ ಸಂಸ್ಥೆಗಳಿಗೆ ಅಭಿವೃದ್ಧಿ ಅರ್ಥಶಾಸ್ತ್ರದ ಮೇಲಿನ ಪ್ರವಚನವನ್ನು ನಿಯಂತ್ರಿಸುವುದು ಕಷ್ಟವೇನಲ್ಲ. ಆರ್ಥಿಕ ಬಿಕ್ಕಟ್ಟಿನ ಹಿಂದೆ ನವ-ಫ್ಯಾಸಿಸಂ ಮಾತ್ರ ಇದೆ ಎಂಬ ಸಲಹೆಯನ್ನು ತೇಲಿಬಿಡುವುದೂ ಸಹ ಕಷ್ಟವಲ್ಲ. ಈ ಸಲಹೆಯನ್ನು ಒಪ್ಪಿನವ-ಫ್ಯಾಸಿಸ್ಟ್‌ಗಳನ್ನು ವಿರೋಧಿಸುವ ತೀವ್ರಗಾಮಿ (radical) ಬುದ್ಧಿಜೀವಿಗಳೂ ಒಪ್ಪಿಕೊಳ್ಳುತ್ತಾರೆ. ಈ ಬಿಕ್ಕಟ್ಟಿನ ದೂಷಣೆಯನ್ನು ಏಕಮಾತ್ರವಾಗಿ ನವ-ಫ್ಯಾಸಿಸಂನ ಮೇಲೆ ಹೊರಿಸಿದಾಗ ಅದು ಎಡಪಂಥೀಯರ ಒಂದು ವರ್ಗಕ್ಕೂ ಸಹ ಆಪ್ಯಾಯಮಾನವಾಗುತ್ತದೆ. ಏಕೆಂದರೆ, ನವ-ಫ್ಯಾಸಿಸ್ಟ್‌ರು ಒಂದು ಅದೃಷ್ಟಹೀನ ಅಲ್ಪಸಂಖ್ಯಾತ-ಜನರ ವಿರುದ್ಧ ದ್ವೇಷವನ್ನು ಉತ್ತೇಜಿಸುತ್ತಾರೆ, ಜನರ ಪ್ರಜಾಸತ್ತಾತ್ಮಕ ನಡವಳಿಕೆಗಳನ್ನು ಸಂಕುಚಿತಗೊಳಿಸುತ್ತಾರೆ, ದುಡಿಯುವ ಜನರ ಹಕ್ಕುಗಳ ಮೇಲೆ ಆಕ್ರಮಣ ನಡೆಸುತ್ತಾರೆ ಮತ್ತು ಅವರ ವಿರುದ್ಧವಾಗಿ ಜನರಲ್ಲಿರುವ ಕೋಪವನ್ನು ಹರಿಹಾಯಿಸುವುದನ್ನೇ ಆದ್ಯತೆಯನ್ನಾಗಿ ಮಾಡಿಕೊಳ್ಳುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ, ಜನರ ಆರ್ಥಿಕ ಸಂಕಷ್ಟಗಳಿಗೆ ಕಾರಣವಾದ ನವ-ಫ್ಯಾಸಿಸಂಅನ್ನು ಆಕ್ರಮಣದ ಏಕಮಾತ್ರ ಗುರಿಯನ್ನಾಗಿಸದಿರುವುದನ್ನು ನವ-ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ಒಂದು ಪುಕ್ಕಲುತನದ ಸಂಕೇತವಾಗಿ ಗುರುತಿಸುವ ಅಪಾಯವಿದೆ. ನವ-ಫ್ಯಾಸಿಸಂಅನ್ನು ಏಕಮಾತ್ರ ಗುರಿಯನ್ನಾಗಿಸಲು ಹಿಂಜರಿಯುವವರನ್ನು ಅತ್ಯಂತ ಖಂಡನೀಯ, ಅತ್ಯಂತ ಅಸಹ್ಯಕರ, ಅತ್ಯಂತ ಮತಾಂಧ, ಬಲಪಂಥೀಯರ ರಕ್ಷಕರು ಎಂಬುದಾಗಿ ಆರೋಪಿಸಲೂ ಬಹುದು.

ನವ-ಉದಾರವಾದ ನಿರ್ಮಿಸುವ ಚಕ್ರ

ಆದಾಗ್ಯೂ, ಈ ಪ್ರಕ್ರಿಯೆಯಲ್ಲಿ, ನವ-ಉದಾರವಾದವನ್ನು ದೃಷ್ಟಿಗೆ ತಾಕದಂತೆ ಮರೆಮಾಡಿರುವುದರಿಂದ, ನವ-ಫ್ಯಾಸಿಸ್ಟ್‌ರನ್ನು ಅಧಿಕಾರದಿಂದ ಹೊರಹಾಕಿದಾಗಲೂ, ಫ್ಯಾಸಿಸ್ಟ್ ಅಲ್ಲದ, ನವ-ಉದಾರವಾದಿ ಆರ್ಥಿಕ ನೀತಿಗಳನ್ನೇ ಅನುಸರಿಸುವ ಒಂದು ಹೊಸ ಉದಾರವಾದಿ ಸರ್ಕಾರವು ಅಧಿಕಾರಕ್ಕೆ ಬರುವ ದಾರಿ ಸುಗಮವಾಗಿರುತ್ತದೆ. ಆದರೆ, ಅಂತಹ ಒಂದು ಹೊಸ ಸರ್ಕಾರವೂ ಸಹ, ನಾವು ಈಗಾಗೇ ಚರ್ಚಿಸಿದ ಹಾಗೆ, ಬಿಕ್ಕಟ್ಟನ್ನು ನಿವಾರಿಸಲು ಸಾಧ್ಯವಿಲ್ಲದ ಕಾರಣಗಳಿಂದಾಗಿ, ನವ-ಫ್ಯಾಸಿಸ್ಟ್ ಸರ್ಕಾರವನ್ನು ಹೊರ ಹಾಕಿ ಅಧಿಕಾರಕ್ಕೆ ಬಂದ ಉದಾರವಾದಿ ಸರ್ಕಾರದಿಂದಲೂ ಜನರು ಬೇಸತ್ತ ನಂತರದಲ್ಲಿ ಮತ್ತೊಮ್ಮೆ ನವ-ಫ್ಯಾಸಿಸ್ಟ್ ಸರ್ಕಾರವು ಮರಳುವ ಮಾರ್ಗವು ಸುಗಮವಾಗಿರುತ್ತದೆ. ಈ ರೀತಿಯಲ್ಲಿ, ನವ-ಉದಾರವಾದಕ್ಕೆ ಬದ್ಧವಾಗಿರುವ ನವ-ಫ್ಯಾಸಿಸ್ಟ್ ಮತ್ತು ಉದಾರವಾದಿ ರಾಜಕೀಯ ಪಂಗಡಗಳ ನಡುವೆ ಸರ್ಕಾರವು ಒಮ್ಮೆ ಅತ್ತ; ಮತ್ತೊಮ್ಮೆ ಇತ್ತ ಎಂಬಂತೆ ಪರ್ಯಾಯವಾಗಿ ಬದಲಾಗುವಂತಹ ಪರಿಸ್ಥಿತಿಗೆ ರಾಜಕೀಯವನ್ನು ತಳ್ಳಲು ಪ್ರಯತ್ನಿಸಲಾಗುತ್ತದೆ. ಗಂಡ ಹೆಂಡತಿಯ ಜಗಳದಲ್ಲಿ ಕೂಸು ಬಡವಾಯ್ತು ಎಂಬಂತೆ, ಈ ತಿಕ್ಕಾಟದಲ್ಲಿ ದುಡಿಯುವ ಜನರು ಆರ್ಥಿಕ ಬಿಕ್ಕಟ್ಟಿನ ಭೀಕರ ಪರಿಣಾಮಗಳನ್ನು ಅನುಭವಿಸುತ್ತಲೇ ಇರುತ್ತಾರೆ.

ಭಾರತವು ಈ ವಿದ್ಯಮಾನಕ್ಕೆ ಒಂದು ಒಳ್ಳೆ ಮಾದರಿ ಉದಾಹರಣೆಯಾಗುತ್ತದೆ. ಆರ್ಥಿಕ ಬಿಕ್ಕಟ್ಟಿನ ಹೊಡೆತವನ್ನು ಆಗತಾನೆ ತಿನ್ನಲಾರಂಭಿಸಿದ್ದ ಸಮಯದಲ್ಲಿ, ಪ್ರಸ್ತುತ ಮೋದಿ ಸರ್ಕಾರವು 2014 ರಲ್ಲಿ ಅಧಿಕಾರಕ್ಕೆ ಬಂದಿತು. ಬಿಕ್ಕಟ್ಟಿನ ದೂಷಣೆಯನ್ನು ಸಂಪೂರ್ಣವಾಗಿ ಹಿಂದಿನ ಮನಮೋಹನ್ ಸಿಂಗ್ ಅವರ ಉದಾರವಾದಿ ಸರ್ಕಾರದ ದೌರ್ಬಲ್ಯ ಮತ್ತು ಕಾರ್ಯವೈಖರಿಯ ಮೇಲೆ ಹೊರಿಸುವ ಮೂಲಕ ಮತ್ತು ನವ-ಉದಾರವಾದದ ಬಗ್ಗೆ ಏನನ್ನೂ ಹೇಳದಿರುವ ಮೂಲಕ ಮೋದಿ ಅಧಿಕಾರ ಹಿಡಿದರು. ಅಧಿಕಾರಕ್ಕೆ ಬಂದ ನಂತರ, ತೀವ್ರಗೊಳ್ಳುತ್ತಿದ್ದ ಬಿಕ್ಕಟ್ಟಿನ ಪರಿಣಾಮವಾಗಿ ನಿರುದ್ಯೋಗವು ಹೆಚ್ಚುತ್ತಲೇ ಹೋದರೂ ಸಹ ಮತ್ತು ಜನರ ಆದಾಯವು ಕುಸಿಯುತ್ತಲೇ ಹೋದರೂ ಸಹ, ಮೋದಿ ಸರ್ಕಾರವು ಹಗೆ ತೀರಿಸಿಕೊಳ್ಳುವ ರೀತಿಯಲ್ಲಿ ನವ-ಉದಾರವಾದಿ ನೀತಿಗಳನ್ನೇ ಜಾರಿಗೊಳಿಸಿತು. ಈ ನೀತಿಗಳ ಪರಿಣಾಮವಾಗಿ ಜನರ ಸಂಕಷ್ಟಗಳು ಹೆಚ್ಚುತ್ತಾ ಹೋದವು ಎಂಬುದನ್ನು ಸಮೀಕ್ಷೆಗಳೂ ತಿಳಿಸುತ್ತವೆ. ವಾರ್ತಾ ಪತ್ರಿಕೆಗಳ ವರದಿಗಳ ಪ್ರಕಾರ, 2012-13 ಮತ್ತು 2017-18ರ ನಡುವಿನ ಅವಧಿಯಲ್ಲಿ ಗ್ರಾಮೀಣ ಭಾರತದಲ್ಲಿ ತಲಾವಾರು ನೈಜ ಬಳಕೆಯ ವೆಚ್ಚಗಳಲ್ಲಿ ಶೇಕಡಾ 9ರಷ್ಟು ಕುಸಿತವಾಗಿತ್ತು ಎಂಬುದು ರಾಷ್ಟ್ರೀಯ ಮಾದರಿ ಸಮೀಕ್ಷೆಯ (ಎನ್‌ಎಸ್‌ಎಸ್) ವರದಿಯಿಂದ ತಿಳಿದುಬರುತ್ತದೆ. ವರದಿಯ ಈ ಅಂಶವು ಎಷ್ಟು ಗಾಬರಿ ಹುಟ್ಟಿಸಿತ್ತು ಎಂದರೆ, ಸರ್ಕಾರವು ರಾಷ್ಟ್ರೀಯ ಮಾದರಿ ಸಮೀಕ್ಷೆಯ ವರದಿಯ ಪ್ರಕಟಣೆಯನ್ನೇ ನಿಷೇಧಿಸಿತು. ಸ್ವಾತಂತ್ರ್ಯ ಬಂದ ಅಲ್ಪ ಸಮಯದ ನಂತರ, ಖ್ಯಾತಿವೆತ್ತ ಸಂಖ್ಯಾಶಾಸ್ತ್ರಜ್ಞ ಪಿ.ಸಿ. ಮಹಾಲನೋಬಿಸ್ ಅವರ ಉಸ್ತುವಾರಿಯಲ್ಲಿ ಆರಂಭಿಸಿದ್ದ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನೇ ಸರ್ಕಾರವು ಅಮಾನತಿನಲ್ಲಿಟ್ಟಿತು.

ಬಿಕ್ಕಟ್ಟನ್ನು ಅನುಭವಿಸುತ್ತಿರುವ ದೇಶ ಭಾರತ ಒಂದೇ ಅಲ್ಲ

ಕೊರೊನಾ ಸಾಂಕ್ರಾಮಿಕವು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು. ಆದರೆ, ಕೊರೊನಾ ಇಳಿಕೆಯಾದ ನಂತರವೂ, ನಿರುದ್ಯೋಗದ ಪರಿಸ್ಥಿತಿಯು ಸ್ವಾತಂತ್ರ್ಯದ ನಂತರದ ಯಾವುದೇ ವರ್ಷಕ್ಕಿಂತ ಇಂದು ಕೆಟ್ಟದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹಣದುಬ್ಬರವು ಉದ್ರಿಕ್ತ ರೀತಿಯಲ್ಲಿ ಉಲ್ಬಣಗೊಳ್ಳುತ್ತಿದೆ. ಡಾಲರ್ ವಿರುದ್ಧವಾಗಿ ರೂಪಾಯಿಯ ಮೌಲ್ಯವು ಸತತವಾಗಿ ಇಳಿಯುತ್ತಲೇ ಇದೆ. ಆರ್ಥಿಕ ಸಂಕಷ್ಟಗಳ ವಿರುದ್ಧ ಜನರ ಪ್ರತಿಭಟನೆಗಳು ಹೆಚ್ಚುತ್ತಿವೆ. ಆದರೆ, ಬಹುತೇಕ ಪ್ರತಿಭಟನಾಕಾರರು ನವ-ಉದಾರವಾದಿ ನೀತಿಗಳ ಬಗ್ಗೆ ತುಟಿ ಪಿಟಿಕ್ಕೆನ್ನದೆ ಮೋದಿ ಸರ್ಕಾರದ ಆರ್ಥಿಕ ನೀತಿಗಳನ್ನು ಏಕಮಾತ್ರವಾಗಿ ದೂಷಿಸುತ್ತಾರೆ. ಈ ಅಭೂತಪೂರ್ವ ಮತ್ತು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ನಿಸ್ಸಂದೇಹವಾಗಿ ಮೋದಿ ಸರ್ಕಾರವು ನಿಂದಾರ್ಹವಾಗಿದೆ. ಆದರೆ, ಅದಕ್ಕಿಂತಲೂ ಮುಖ್ಯವಾಗಿ, ನವ-ಉದಾರವಾದಿ ನೀತಿಗಳನ್ನು ಉತ್ಸಾಹದಿಂದ ಮತ್ತು ನಿರ್ದಯವಾಗಿ ಅಳವಡಿಸಿಕೊಂಡಿರುವುದೇ ಅದರ ಅತಿ ದೊಡ್ಡ ಲೋಪವಾಗುತ್ತದೆ. ಚಲಾವಣೆಯಲ್ಲಿದ್ದ ಕರೆನ್ಸಿಯ ಸುಮಾರು 85% ಭಾಗವನ್ನು ಹಠಾತ್ತಾಗಿ ಮೌಲ್ಯಹೀನಗೊಳಿಸಿದಂತಹ ಕೆಲವು ಅಸಂಬದ್ಧ ಮತ್ತು ಬುದ್ಧಿಹೀನ ಕ್ರಮಗಳನ್ನು ಅದು ಜಾರಿಗೊಳಿಸಿತು, ನಿಜ. ಅರ್ಥವ್ಯವಸ್ಥೆಗೆ ಎಳ್ಳಷ್ಟೂ ಪ್ರಯೋಜನವಾಗದ ಇಂತಹ ಕ್ರಮಗಳು ಜನರಿಗೆ ತೀವ್ರ ಸಂಕಷ್ಟವನ್ನು ಉಂಟುಮಾಡಿದವು ಮತ್ತು ಕಿರು ಉತ್ಪಾದನಾ ವಲಯವನ್ನು ಹಾಳುಗೆಡವಿದವು. ಆದರೂ, ಪ್ರಸ್ತುತ ಆರ್ಥಿಕ ಬಿಕ್ಕಟ್ಟಿನ ಅಗಾಧತೆಗೆ ಈ ಕ್ರಮಗಳು ವಿವರಣೆಯಾಗಲಾರವು. ಅಂತೆಯೇ,

ಪುಟ 14 ಕ್ಕೆ

ಭಾರತದಲ್ಲಿ ಕಟ್ಟಡ ನಿರ್ಮಾಣ..... ಪುಟ 8 ರಿಂದ

ಬದಲಾವಣೆಗಳಿಗೆ ಹೊಂದಿಕೊಳ್ಳಲು ಕೌಶಲ್ಯ ತರಬೇತಿ ಮತ್ತು ವ್ಯವಸ್ಥಾಪಕ ತರಬೇತಿಯ ಹೊಂದಿದ ಕಾರ್ಮಿಕರ ಅಗತ್ಯವಿದೆ.

ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆ ಪಟ್ಟಿ 2022

	ಐಟಂಗಳು	ಕನಿಷ್ಟ ಬೆಲೆ	ಗರಿಷ್ಟ ಬೆಲೆ
1	ಸಿಮೆಂಟ್ (OPC 53 ದರ್ಜೆ)	ರೂ. 300 ಚೀಲ	ರೂ. 400
2	ಮರಳು	ರೂ. 1600 ಪ್ರತಿ ಟನ್	ರೂ. 3300
3	ಜೆಲ್ಲಿ 20 ಎಂಎಂ	ರೂ. 1500 ಪ್ರತಿ ಟನ್	ರೂ. 4000
4	ಕಬ್ಬಿಣ(ಟಿಎಂಟಿ–ಟಿಎಂಎಕ್ಸ್)	ರೂ. 45 ಪ್ರತಿ ಕೆ.ಜಿ	ರೂ. 55
5	ರೆಡಿ ಮಿಕ್ಸ್ ಕಾಂಕ್ರೀಟ್	ರೂ.3000 ಕ್ಯೂಬಿಕ್ ಮೀ	ರೂ. 7500
6	ಟಿಎಂಟಿ ಬೈಡಿಂಗ್ ವೈರ್	ರೂ. 40. ಪ್ರತಿ ಕೆ.ಜಿ	ರೂ. 55
7	ಇಟ್ಟಿಗೆ	ರೂ. 6.00 ಪ್ರತಿ ಇಟ್ಟಿಗೆ	ರೂ. 10.00

ಭಾರತದಲ್ಲಿನ ನಿರ್ಮಾಣ ಕಾರ್ಮಿಕರ ವೇತನಗಳು

1	ಕೆಲಸಗಾರನಿಗೆ – ತಿಂಗಳಿಗೆ ಸರಾಸರಿ	ರೂ. 18800
	ಕನಿಷ್ಠ	ರೂ. 8080.00
	ಗರಿಷ್ಠ	ರೂ. 54,600.00
2	ಆಡಿಟರ್	ರೂ. 12,400.00
3	ಅಸೆಂಬ್ಲರ್	ರೂ. 10.100.00
4	ಬೋಟ್ ಬಿಲ್ಡರ್ ಮತ್ತು ಸಾಗಣಿಕೆ	ರೂ. 15000.00
5	ಇಟ್ಟಿಗೆ ಬಟ್ಟಿ ಕೆಲಸ	ರೂ. 8550.00
6	ಕಟ್ಟಡ ನಿರ್ವಾಹಕ	ರೂ. 13.300.00

ಸಾಮಾಜಿಕ ಭದ್ರತೆಯೇ ಇಲ್ಲ

ಭಾರತೀಯ ನಿರ್ಮಾಣ ಉದ್ಯಮದಲ್ಲಿ ಹೆಚ್ಚಿರುವ ಉಪ–ಗುತ್ತಿಗೆ ವ್ಯವಸ್ಥೆಯಿಂದಾಗಿ ಕಾರ್ಮಿಕರನ್ನು ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾರೆ. ಸರ್ಕಾರ (ರಾಜ್ಯ ಮತ್ತು ಕೇಂದ್ರ ಎರಡೂ) ಘೋಷಿಸಿದ ಕನಿಷ್ಠ ವೇತನವನ್ನು ಕೌಶಲ್ಯಕ್ಕೆ ಅನುಗುಣವಾಗಿ ಕಾರ್ಮಿಕರಿಗೆ ಯಾವುದೇ ಕಂಪನಿಗಳು ನೀಡುತ್ತಿಲ್ಲ. ಬಹುತೇಕ ಯಾವುದೇ ಸಾಮಾಜಿಕ ರಕ್ಷಣೆ ಇಲ್ಲ. ಕಾರ್ಮಿಕರಿಗೆ ಪಿ.ಎಫ್., ಗ್ರಾಚ್ಯುಟಿ, ವೈದ್ಯಕೀಯ ಪ್ರಯೋಜನಗಳಂತಹ ಭದ್ರತಾ ಪ್ರಯೋಜನಗಳು ಇಲ್ಲ. ಕೆಲಸದ ಸಮಯವು ಯಾವಾಗಲೂ ದಿನಕ್ಕೆ 10–12 ಗಂಟೆಗಳವರೆಗೆ ವಿಸ್ತರಿಸುತ್ತದೆ. ಆರೋಗ್ಯ ಮತ್ತು ಸುರಕ್ಷತೆಯ ನಿಬಂಧನೆಗಳನ್ನು ಹೆಚ್ಚಿನ ನಿರ್ಮಾಣ ಕಂಪನಿಗಳು ಕಾರ್ಯಗತಗೊಳಿಸುತ್ತಿಲ್ಲ.

ಕೆಲಸದ ಸ್ಥಳದಲ್ಲಿ ಕೆಲಸಗಾರರಿಗೆ. ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯಗಳು ಎಲ್ಲಾ ನಿರ್ಮಾಣ ಯೋಜನೆಗಳಲ್ಲಿ ಲಭ್ಯವಿಲ್ಲ. ಕಾರ್ಮಿಕರ ಗುಡಿಸಲಿಗೆ ಬೆಳಕು, ಫ್ಯಾನ್, ಎರಡೂ ಸೌಲಭ್ಯಗಳು ಮತ್ತು ಬಹುತೇಕ ಎಲ್ಲಾ ಕೆಲಸದ ಸ್ಥಳಗಳಲ್ಲಿ ಹಾಸಿಗೆಗಳನ್ನು ಒದಗಿಸಲಾಗಿಲ್ಲ.

ಅದೇ ಸಮಯದಲ್ಲಿ ಅಸ್ತಿತ್ವದಲ್ಲಿರುವ 29 ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ಬಿಜೆಪಿ ಹಾಗೂ ಮೋದಿ ನೇತೃತ್ವದ ಭಾರತ ಸರ್ಕಾರ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುತ್ತಿದೆ. ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಳು ಹಲವು ರಾಜ್ಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಇನ್ನೂ ಕಾರ್ಯನಿರ್ವಹಿಸುತ್ತಿಲ್ಲ. ಸೆಸ್ ಸಂಗ್ರಹಣೆಯು ಸಹ ಇದರಿಂದ ತೊಡಕಾಗಿದೆ. ಬಹುಶಃ ಕೇಂದ್ರ ಸರ್ಕಾರವು ಈ ಕಲ್ಯಾಣ ಮಂಡಳಿಗಳನ್ನು ರದ್ದುಪಡಿಸಲು ಮತ್ತು ಕೇಂದ್ರೀಯವಾಗಿ ಒಂದೇ ಕಲ್ಯಾಣ ಮಂಡಳಿಯೊಂದಿಗೆ ವಿಲೀನಗೊಳಿಸಲು ಬಯಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಜೆಟ್‌ನಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಮೀಸಲಿಟ್ಟರೂ ಪ್ರಾಯೋಗಿಕವಾಗಿ ಹಂಚಿಕೆಯಾಗಿಲ್ಲ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ "ಕನ್ಸ್ಟ್ರಕ್ಷನ್ ವರ್ಕರ್ಸ್ ಫೆಡರೇಶನ್ ಆಫ್ ಇಂಡಿಯಾ" ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ನಿರಂತರ ಹೋರಾಟದ ಹಾದಿಯಲ್ಲಿ ಸಾಗುತ್ತಿದೆ. ಕರ್ನಾಟಕದಲ್ಲಿ ನಿರ್ಮಾಣ ವಲಯದ ಕಾರ್ಮಿಕರ ಹಕ್ಕುಗಳ ರಕ್ಷಣೆ ಹಾಗೂ ಕಲ್ಯಾಣ ಮಂಡಳಿ ಅದರಲ್ಲಿ ಸಂಗ್ರಹವಾಗಿರುವ ಸಾವಿರಾರು ಕೋಟಿ ಸೆಸ್ ಹಣ ರಕ್ಷಣೆಗಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಮುಂದಾಳತ್ವ ವಹಿಸಿದೆ.



"ಗೆದ್ದರೆ ಆಡಲು ಬಂದಿದ್ದೆ, ಸೋತರೆ ನೋಡಲು ಬಂದಿದ್ದೆ'..... ಪುಟ 13 ರಿಂದ

ಸರಕು ಮತ್ತು ಸೇವಾ ತೆರಿಗೆಯನ್ನು ಸರ್ಕಾರವು ಜಾರಿಗೆ ತಂದಿತು. ಇದು ಕಿರು ಉತ್ಪಾದನಾ ವಲಯಕ್ಕೆ ಮಾರಣಾಂತಿಕ ಪೆಟ್ಟು ನೀಡಿತು. ಜಿಎಸ್‌ಟಿಯನ್ನು ಜಾರಿಗೊಳಿಸುವಂತೆ ವಿಶ್ವಬ್ಯಾಂಕ್ ಸಲಹೆ ಕೊಟ್ಟಿತ್ತು. ಅದನ್ನು ಮನಮೋಹನ್ ಸಿಂಗ್ ಸರ್ಕಾರವೇ ಪ್ರಸ್ತಾಪಿಸಿತ್ತು. ಮೋದಿಯವರು ಮಾಡಿದ್ದೇನೆಂದರೆ, ತನ್ನ ಎಂದಿನ ನಿರ್ದಯತೆಯೊಂದಿಗೆ ಆ ಮಾರ್ಗದಲ್ಲಿ ಮುಂದುವರಿಯಿತು. ನೋಟುರದ್ದತಿಯ ಜೊತೆಯಲ್ಲಿ ಜಿಎಸ್‌ಟಿ ಜಾರಿಯ ಕ್ರಮವನ್ನು ಸೇರಿಸಿದರೂ ಸಹ, ಪ್ರಸ್ತುತ ಆರ್ಥಿಕ ಬಿಕ್ಕಟ್ಟಿನ ಅಗಾಧತೆಗೆ ಅದು ಒಂದು ಸಮರ್ಪಕವಾದ ವಿವರಣೆಯಾಗುವುದಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ನವ–ಉದಾರವಾದದ ಚೌಕಟ್ಟಿನ ಹೊರಗಿನ ಯಾವುದೇ ಕ್ರಮಗಳನ್ನು ಸರ್ಕಾರದ ವಿರುದ್ಧ ಆಪಾದಿಸಬಹುದಾದರೂ, ಅವು ಎಷ್ಟೇ ಹಾನಿಕಾರಕವಾಗಿದ್ದರೂ, ಬಿಕ್ಕಟ್ಟನ್ನು ಸ್ವತಃ ಅವು ವಿವರಿಸಲಾರವು. ಆರ್ಥಿಕ ಬಿಕ್ಕಟ್ಟನ್ನು ಅನುಭವಿಸುತ್ತಿರುವ ದೇಶ ಭಾರತ ಒಂದೇ ಅಲ್ಲ ಎಂಬ ಅಂಶದಿಂದ ಇದು ಸ್ಪಷ್ಟವಾಗುತ್ತದೆ ಮತ್ತು ಈ ಅಂಶವು ಅದನ್ನು ಒತ್ತಿಹೇಳುತ್ತದೆ. ಈ ಬಿಕ್ಕಟ್ಟು ಎಲ್ಲ ದೇಶಗಳನ್ನೂ ವ್ಯಾಪಿಸಿದೆ. ಇಡೀ ಮೂರನೇ ಜಗತ್ತಿನ ದೇಶಗಳನ್ನು ಪೂರ್ಣವಾಗಿ ಬಾಧಿಸುತ್ತಿದೆ. ಅದು, ನವ–ಉದಾರವಾದಿ ನೀತಿಗಳನ್ನು ಅನುಸರಿಸಿದ ಪರಿಣಾಮವಾಗಿದೆ. ಆದರೂ, ವಿಸ್ಮಯಗೊಳಿಸುವ ರೀತಿಯಲ್ಲಿ, ಪ್ರತಿಯೊಂದು ದೇಶದ ಬಿಕ್ಕಟ್ಟಿನ ಬಗ್ಗೆ ಚರ್ಚಿಸುವಾಗಲೂ ನವ–ಉದಾರವಾದದ ಬಗ್ಗೆ ಪ್ರಸ್ತಾಪ ಆಗುವುದೇ ಇಲ್ಲ. ಶ್ರೀಲಂಕಾದ ಬಿಕ್ಕಟ್ಟಿಗೆ ರಾಜಪಕ್ಸೆಗಳ ಮೂರ್ಖತನವೇ ಕಾರಣ; ಭಾರತದ ಬಿಕ್ಕಟ್ಟಿಗೆ ಮೋದಿ ಆಡಳಿತದ ಮೂರ್ಖತನವೇ ಕಾರಣ; ಆಫ್ರಿಕಾದ ಬಿಕ್ಕಟ್ಟಿಗೆ ಉಕ್ರೇನ್ ಯುದ್ಧವು ವಿಶ್ವ ಧಾನ್ಯಗಳ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ಹೇಳಲಾಗುತ್ತದೆ.

ಎಡಪಂಥೀಯರು ಅನುಕರಿಸಬಾರದು

ಇಂದಿನ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಅಗಾಧ ಕುಶಲತೆ ಅಡಗಿರುವುದು ಈ ಸಂಗತಿಯಲ್ಲಿಯೇ. ಸಾಮ್ರಾಜ್ಯಶಾಹಿಗೆ ಈ ಸನ್ನಿವೇಶವು "ಗೆದ್ದರೆ ಆಡಲು ಬಂದಿದ್ದೆ; ಸೋತರೆ ನೋಡಲು ಬಂದಿದ್ದೆ' ಎನ್ನುವ ರೀತಿಯದ್ದು. ಎಲ್ಲಿಯವರೆಗೆ ಎಲ್ಲವೂ ಸುಗಮವಾಗಿ ನಡೆಯುತ್ತವೆಯೋ ಅಲ್ಲಿಯವರೆಗೂ ಅದರ ಶ್ರೇಯಸ್ಸನ್ನು ನವ–ಉದಾರವಾದಿ ಆಳ್ವಿಕೆಗೆ ಸಲ್ಲಿಸಲಾಗುತ್ತದೆ. ನವ–ಉದಾರವಾದಿ ಆಳ್ವಿಕೆಯು ಜಿಡಿಪಿ ಬೆಳವಣಿಗೆಯ ದರಗಳನ್ನು ತ್ವರಿತಗೊಳಿಸಿದೆ ಎಂದು ಹೇಳಲಾಗುತ್ತದೆ. ಆದರೆ, ಒಂದು ಬಿಕ್ಕಟ್ಟು ಎದುರಾದ ಕೂಡಲೇ, ಅದರ ಹೊಣೆಗಾರಿಕೆಯನ್ನು ನವ–ಉದಾರವಾದಿ ಆಳ್ವಿಕೆಯು ಗಂಟು ಹಾಕಿಕೊಂಡ ನವ–ಫ್ಯಾಸಿಸಂನ ತಲೆಗೆ ಕಟ್ಟಲಾಗುತ್ತದೆ. ಈ ರೀತಿಯಲ್ಲಿ ಸಾಮ್ರಾಜ್ಯಶಾಹಿಯು ದ್ವಿ–ಪಾತ್ರ ವಹಿಸುತ್ತದೆ: ಮೊದಲನೆಯದಾಗಿ, ಧರ್ಮ ಅಥವಾ ಜನಾಂಗೀಯತೆಯ ಆಧಾರದ ಮೇಲೆ ದ್ವೇಷವನ್ನು ಪ್ರಚೋದಿಸುವ ಮೂಲಕ, ಕೆಲವು ಅದೃಷ್ಟಹೀನ ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರನ್ನು ಎತ್ತಿ ಕಟ್ಟುವ ಮೂಲಕ ನವ–ಉದಾರವಾದಿ ಆಡಳಿತವನ್ನು ಇದು ಬಲಪಡಿಸುತ್ತದೆ. ಈ ಕ್ರಮವು ಒಂದು ಹೊಗೆ ಪರದೆಯನ್ನು ನಿರ್ಮಿಸುತ್ತದೆ. ಈ ಹೊಗೆ ಪರದೆಯ ಹಿಂದೆ ಕಾರ್ಪೊರೇಟ್‌ಗಳಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ನೀಡಲಾಗುತ್ತದೆ. ಎರಡನೆಯದಾಗಿ, ಜನರು ದಂಗೆ ಎದ್ದಾಗ ಅದು ತನ್ನ ಕಂಕುಳಲ್ಲಿರುವ ಪಶುವನ್ನು ಬಲಿ ಕೊಡುತ್ತದೆ.

ಮರಾಠಿ ನಾಟಕಕಾರ ವಿಜಯ್ ತೆಂಡೂಲ್ಕರ್ ಅವರ 'ಘಾಸಿರಾಮ್ ಕೊತ್ವಾಲ್' ನಾಟಕದಲ್ಲಿ ಪುಣೆಯ ಆಡಳಿತಗಾರನ ಮಂತ್ರಿ ನಾನಾ ಫಡ್ನವಿಸ್, ತನ್ನ ಆಡಳಿತದ ಎಲ್ಲಾ ದಮನಕಾರಿ ಕ್ರಮಗಳನ್ನು ಕೈಗೊಳ್ಳಲು ಒಬ್ಬ ದಬ್ಬಾಳಿಕೆಯ ಬಂಟನನ್ನು ಬಳಸಿಕೊಳ್ಳುತ್ತಾನೆ. ಆದರೆ, ಅಂತಿಮವಾಗಿ ಅವನ ಈ ದಬ್ಬಾಳಿಕೆಯ ಕ್ರಮಗಳ ವಿರುದ್ಧ ಜನರು ದಂಗೆ ಎದ್ದಾಗ, ಅವನು ಈ ಬಂಟನನ್ನು ಕೆಲಸದಿಂದ ವಜಾ ಮಾಡುತ್ತಾನೆ ಮತ್ತು ಜನರ ಪ್ರಶಂಸೆಯನ್ನೂ ಗಳಿಸುತ್ತಾನೆ. ಮೂರನೆಯ ಜಗತ್ತಿನ ದೇಶಗಳಲ್ಲಿ ನವ–ಫ್ಯಾಸಿಸ್ಟ್‌ಗಳು ಈ ಬಂಟ ಘಾಸಿರಾಮ್‌ನಂತೆಯೇ ಇದ್ದಾರೆ: ಅಧಿಕಾರದಲ್ಲಿದ್ದಾಗ, ನವ–ಉದಾರವಾದವನ್ನು ಎತ್ತಿಹಿಡಿಯುವಾಗಲೂ ತಮ್ಮ ಫ್ಯಾಸಿಸ್ಟಿಕ್ ಕ್ರಮಗಳ ಮೂಲಕ ಸಮಾಜಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತಾರೆ; ಮತ್ತು ಜನರು ಕೋಪಗೊಂಡಾಗ, ನವ–ಉದಾರವಾದಕ್ಕೆ ಯಾವುದೇ ಹಾನಿಯಾಗದಂತೆ ಅವುಗಳನ್ನು ಅಳಿಸಿ ಹಾಕಲೂ ಹೇಸುವುದಿಲ್ಲ.

ನವ–ಫ್ಯಾಸಿಸಂಅನ್ನು ಅದರ ಆರ್ಥಿಕ ಏರಿಳಿತಗಳನ್ನು ಹೊರತುಪಡಿಸಿ ನೋಡುವ, ನವ–ಫ್ಯಾಸಿಸ್ಟ್ ಸರ್ಕಾರವು ವಾಸ್ತವವಾಗಿ ನವ–ಉದಾರವಾದಿ–ನವ–ಫ್ಯಾಸಿಸ್ಟ್ ಮೈತ್ರಿಯ ಮೇಲೆ ಆಧಾರಿತವಾಗಿದೆ ಎಂಬ ಅಂಶವನ್ನು ನಿರ್ಲಕ್ಷಿಸುವ ಮತ್ತು, ಸಾಮಾನ್ಯವಾಗಿ, ರಾಜಕೀಯವನ್ನು ಅರ್ಥವ್ಯವಸ್ಥೆಯೊಂದಿಗೆ ಸಂಪರ್ಕವಿಲ್ಲದೆ ಎಲ್ಲವನ್ನೂ ಒಳಗೊಂಡ ಒಂದು ಸ್ವಯಂಭೂ ವಲಯವಾಗಿ ನೋಡುವ ಉದಾರವಾದೀ ಸ್ವಭಾವವನ್ನು ಎಡಪಂಥೀಯರು ಅನುಕರಿಸಬಾರದು.

ಕರ್ನಾಟಕದಲ್ಲಿ ಕಾರ್ಮಿಕರ ಬವಣೆಗಳು..... ಪುಟ 9 ರಿಂದ

ಮಹಿಲಾ ಕಾರ್ಮಿಕರ ಕೂಲಿ ಸರಾಸರಿ ರೂ.223 ಇದೆ. ಕೂಲಿ ನೀಡಿಕೆಯಲ್ಲಿ ತಾರತಮ್ಯ ಇದೆ. ಅಂತರ ರಾಜ್ಯ ವಲಸೆ ಕಾರ್ಮಿಕರು ಹಾಗು ಮಹಿಳಾ ಕಾರ್ಮಿಕರಿಗೆ ಕೂಲಿ ನಿಗದಿಯಲ್ಲಿ ತಾರತಮ್ಯ ಎಸಗಲಾಗುತ್ತಿದೆ. 2015ರಿಂದೀಚೆಗೆ ಕೆಲಸದ ದಿನಗಳು ಕ್ಷಣಿಸುತ್ತಿದ್ದು, ತಿಂಗಳಲ್ಲಿ 15 ದಿನ ಕೆಲಸ ಸಿಗುವುದು ತೀರ ಕಷ್ಟ ಎಂಬ ಸ್ಥಿತಿ ಇದೆ. ನೋಟ್ ಬ್ಯಾನ್, ಜಿಎಸ್ಟಿ ಹೇರಿಕೆ, ಹಣದುಬ್ಬರ, ಅನಿಯಮಿತ ಬೆಲೆ ಏರಿಕೆ ಹಾಗು ಕೋವಿಡ್ ನಿಂದಾಗಿ ನಿರ್ಮಾಣ ವಲಯ ಕುಸಿಯುತ್ತಿದ್ದು ಉದ್ಯೋಗದ ಅವಕಾಶಗಳು ಕ್ಷೀಣಿಸುತ್ತಿವೆ. ಕೆಲಸ ದಿನಗಳು ಕುಸಿಯುತ್ತಿರುವುದರಿಂದ ಆದಾಯವೂ ಕುಸಿದು ಬದುಕಿನ ಬಂಡಿ ಸಾಗಿಸುವುದು ದುಸ್ತರವಾಗುತ್ತಿದೆ. ಬೆಲೆ ಏರಿಕೆ ಮತ್ತು ಮರು ಗುತ್ತಿಗೆ ಕಾರಣದಿಂದ ಕೂಲಿ ವಂಚನೆ ಪ್ರಕರಣಗಳು ನಗರದಲ್ಲಿ ಅತಿ ಹೆಚ್ಚು ವರದಿಯಾಗುತ್ತಿವೆ. ವಲಸೆ ಕಾರ್ಮಿಕರ ಕಾನೂನಿನ ಪ್ರಕಾರ ವಲಸೆ ಕಾರ್ಮಿಕರ ಪ್ರಯಾಣ ಭತ್ಯೆ ನೀಡಬೇಕೆಂದು ಹೇಳುತ್ತದೆಯಾದರೂ ಭತ್ಯೆ ನೀಡುವುದಿಲ್ಲ.

ನಿರ್ಮಾಣ ವಲಯದಲ್ಲಿ ವಲಸೆ ಕಾರ್ಮಿಕರು

ಕಳೆದ 10 ವರ್ಷಗಳಲ್ಲಿ ನಿರ್ಮಾಣ ವಲಯದಲ್ಲಿ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ತೊಡಗುತ್ತಿದ್ದಾರೆ. ಪ್ರಧಾನವಾಗಿ ಅಂತರ ರಾಜ್ಯ ವಲಸೆ ಕಾರ್ಮಿಕರು ಈ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಆರಂಭದಲ್ಲಿ ಮೆಟ್ರೋ ಸೇರಿದಂತೆ ದೊಡ್ಡ ದೊಡ್ಡ ಪ್ರಾಜೆಕ್ಟ್ ಕೆಲಸ ಮಾಡುತ್ತಿದ್ದ ವಲಸೆ ಕಾರ್ಮಿಕರು, ಸದ್ಯ ಬಿಡಿ ಮನೆಗಳ ನಿರ್ಮಾಣದಲ್ಲೂ ತೊಡಗುತ್ತಿದ್ದಾರೆ. ಕೊರೊನಾ ಸಮಯದಲ್ಲಿ ಹಿಂಬದಿ ವಲಸೆ ಶುರುವಾಗಿತ್ತು. ಬಹುತೇಕ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಿದ್ದರು. ನಿರ್ಮಾಣ ವಲಯದಲ್ಲಿನ ಕಾರ್ಮಿಕರಲ್ಲಿ ಕೇವಲ 1 ಲಕ್ಷ ಕಾರ್ಮಿಕರು ಮಾತ್ರವೇ ವಾಪಸ್ಸಾಗಿದ್ದು (20% ಮಾತ್ರ) ಒಟ್ಟಾರೆ ವಲಸೆ ಕಾರ್ಮಿಕರಲ್ಲಿ 40 ಶೇಕಡ ಕಾರ್ಮಿಕರು ವಾಪಸ್ಸಾಗಿದ್ದಾರೆ ಎಂದು ಎಫ್‌ಕೆಸಿಸಿಐ ಹೇಳುತ್ತದೆ.

ಉತ್ತರ ಭಾರತದ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಕ್ಕಾಗಿ ನಗರಕ್ಕೆ ಬರುತ್ತಿರುವುದು ಸಂಕೀರ್ಣವಾದ ಸಾಮಾಜಿಕ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಹೆಚ್ಚಿನವರು ಹಿಂದಿ ಭಾಷಿಕರಾಗಿರುವುದೂ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. 'ನಮ್ಮ ಕೆಲಸಗಳನ್ನು ಕಿತ್ತುಕೊಳ್ಳುತ್ತಿದ್ದಾರೆ' ಎಂಬ ಭಾವನೆ ಸ್ಥಳೀಯ ಕಾರ್ಮಿಕರಲ್ಲಿ ನಿಧಾನವಾಗಿ ಮೊಳಕೆಯೊಡೆದಿದೆ. ಸರ್ಕಾರಗಳ ಉದಾರಿವಾದಿ ನೀತಿಗಳ ಫಲವಾಗಿ ಈ ಬೆಳವಣಿಗೆಗಳು ನಡೆಯುತ್ತಿವೆ ಎಂಬುದನ್ನು ಸ್ಥಳೀಯ ಕಾರ್ಮಿಕರಿಗೆ ಅರ್ಥ ಮಾಡಿಸುವ ಜವಾಬ್ದಾರಿ ನಮ್ಮ ಸಂಘಟನೆಯ ಮೇಲಿದೆ. ಅಂತರ ರಾಜ್ಯ ವಲಸೆ ಕಾರ್ಮಿಕರನ್ನು ಸಂಘಟಿಸಿ ಸಂಘದ ಅಡಿಯಲ್ಲಿ ತರುವ ಪ್ರಯತ್ನ ಆಗಬೇಕಿದೆ.

2017 ರ ಬಳಿಕ ನಂತರ ಪ್ರಮುಖ ಹೋರಾಟಗಳ ನೋಟ... ಪುಟ 12 ರಿಂದ

ಸಂಘಟನಾತ್ಮಕ ಮುನ್ನಡೆ:

ಮೇಲ್ಕಂಡ ನಮ್ಮ ಮಧ್ಯ ಪ್ರವೇಶದಿಂದಾಗಿ ಸಿಐಟಿಯು ನೇತೃತ್ವದ ನಮ್ಮ ಸಂಘಟನೆ ಬಗ್ಗೆ ಅಧಿಕಾರಿಗಳು, ಸರ್ಕಾರ ಮತ್ತು ಸಾರ್ವಜನಿಕವಾಗಿ ಹಾಗೂ ಕಾರ್ಮಿಕರ ಮಧ್ಯ ಗೌರವ ಹೆಚ್ಚಾಗಿದೆ ನಾವು ಕಲ್ಯಾಣ ಮಂಡಳಿ ಕೈಗೊಂಡ ಹಲವು ಕಾರ್ಯಕ್ರಮಗಳು ಹಾಗೂ ಸೌಲಭ್ಯಗನ್ನು ಪರಿಣಾಮಕಾರಿಯಾಗಿ ನೈಜ ಕಾರ್ಮಿಕರಿಗೆ ತಲುಪಿಸುವ ಕೆಲಸವನ್ನು ಅತ್ಯಂತ ಪ್ರಾಮಾನಿಕವಾಗಿ ಈ ಅವಧಿಯಲ್ಲಿ ಮಾಡಿದ್ದೇವೆ ಅದೆ ವೇಳೆಗೆ ಸರ್ಕಾರ, ಮಂಡಳಿ ಹಾಗು ಅಧಿಕಾರಿಗಳು ಕೈಗೊಳ್ಳುವ ಅಪ್ರಯೋಜನಕಾರಿ, ಅವ್ಯವಹಾರಕ್ಕೆ ದಾರಿ ಮಾಡಿಕೊಡುವ ಹಾಗೂ ಮಂಡಳಿ ಬೊಕ್ಕಸಕ್ಕೆ ಹೊರೆಯಾಗುವ ಕಾರ್ಯಕ್ರಮಗಳ ಬಗ್ಗೆಯೂ ನಮ್ಮ ಸ್ಪಷ್ಟ ಪ್ರತಿರೋಧ ವ್ಯಕ್ತಪಡಿಸುತ್ತಾ ಸ್ವತಂತ್ರವಾಗಿ ಹಾಗೂ ಜಂಟಿಯಾಗಿ ಚಳವಳಿ ರೂಪಿಸುತ್ತಾ ಬಂದಿದ್ದೇವೆ. ನಮ್ಮ ಈ ಸ್ಪಷ್ಟತೆಯು ನಮ್ಮ ಸಂಘಟನೆ ಮುನ್ನಡೆಗೆ ಸಹಾಯಕವಾಗಿವೆ.

ಕಳೆದ ಸಮ್ಮೆಳನದಲ್ಲಿ 30 ತಾಲೂಕಿನಲ್ಲಿ ಅಸ್ತಿತ್ವದಲ್ಲಿದ್ದ ಸಂಘಟನೆ ಇಂದು 80 ತಾಲೂಕಿಗೆ ವಿಸ್ತರಣೆಗೊಂಡಿದೆ. 25–30 ರ ಅಸುಪಾಸಿನಲ್ಲಿದ್ದ ನಮ್ಮ ಸದಸ್ಯತ್ವ ಇದೀಗ 50 ಸಾವಿರದಷ್ಟು ತಲುಪಿದೆ. ರಾಜ್ಯದಲ್ಲಿ ಕನಿಷ್ಟ 50 ಕಡೆಗಳಲ್ಲಿ ನಮ್ಮದೇ ಪೂರ್ಣವಧಿ ಕಾರ್ಯಕರ್ತರು, ಸಿಬ್ಬಂದಿಗಳೊಂದಿಗೆ ಸ್ವತಂತ್ರ ಕಂಪೂಟರ್ ಸಹಿತ ಕಚೇರಿಗಳು ಕೆಲಸ ಮಾಡುತ್ತಿವೆ

ರಾಜ್ಯದಲ್ಲಿ ಮಹಿಳಾ ಉಪಸಮಿತಿ, ವಲಸೆ ಕಾರ್ಮಿಕ ಉಪಸಮಿತಿ, ಕಟ್ಟಡ ಕಾರ್ಮಿಕ ಮಕ್ಕಳ ಸಂಘಟನೆ ಪಲಾನುಭವಿಗಳನ್ನು ಸಂಘಟನೆ ಮತ್ತು ಜಾಗೃತಿ, ಪತ್ರಿಕೆ ಸಾಹಿತ್ಯ ಮಾರಾಟ ಶಿಕ್ಷಣ ತರಬೇತಿ ಹಾಗೂ ಕಟ್ಟಡ ಉದ್ಯಮಕ್ಕೆ ಸಂಬಂಧಿಸಿದ ಅಧ್ಯಯನ, ಸಂಘಟನೆ ಹಣಕಾಸು ನಿರ್ವಹಣಾ ಸಮಿತಿ, ರಚಿಸುವ ಅ ಮೂಲಕ ಕೆಲಸ ಮಾಡಿಸುವ ಕಣ್ಣೋಟದೊಂದಿಗೆ ಕೆಲಸಗಳು ಆರಂಭಗೊಂಡಿವೆ.

ಸದಸ್ಯತ್ವ ಹೆಚ್ಚಳ:

2017 ರಲ್ಲಿದ್ದ 29,967 ಸದಸ್ಯತ್ವ 2021 ರಲ್ಲಿ 49,148 ಕ್ಕೆ ಬೆಳೆದಿದೆ. ವಿಸ್ತರಿಸುವ ಅಪಾರ ಸಾಧ್ಯತೆ ಇದೆ.

ಪೆತ್ರೊ ಕೊಲಂಬಿಯದ ಮೊದಲ ಎಡ ಅಧ್ಯಕ್ಷ: ಲ್ಯಾಟಿನ್ ಅಮೆರಿಕದಲ್ಲಿ ಮತ್ತೆ 'ಎಳೆಗೆಂಪು ಅಲೆ'



ಎಳೆಗೆಂಪು ಅಲೆ 15 ದೇಶಗಳಲ್ಲಿ 9 ರಲ್ಲಿ ಎಡ ಅಥವಾ ನಡು-ಎಡ ಸರಕಾರಗಳು

* ಕೊಲಂಬಿಯದ ಇತಿಹಾಸದಲ್ಲಿ ಮೊದಲ ಎಡ ಅಧ್ಯಕ್ಷ
* ಆಫ್ರೋ-ಕೊಲಂಬಿಯನ್ ಒಂಟಿ ತಾಯಿ ಉಪಾಧ್ಯಕ್ಷೆ
* ಲ್ಯಾಟಿನ್ ಅಮೆರಿಕದ 15 ರಲ್ಲಿ 9 ದೇಶಗಳಲ್ಲಿ ಎಡ, ನಡು-ಎಡ ಅಧ್ಯಕ್ಷರು



ಜಗದ ಸುತ್ತ

ವಸಂತರಾಜ ಎನ್.ಕೆ.

ಲ್ಯಾಟಿನ್ ಅಮೆರಿಕದ ಕೊಲಂಬಿಯದಲ್ಲಿ ಜೂನ್ 19 ರಂದು ಎರಡನೆಯ ಸುತ್ತಿನ ಅಧ್ಯಕ್ಷೀಯ ಚುನಾವಣೆ ನಡೆದಿದ್ದು ಎಡ ಪಂಥೀಯ ಒಕ್ಕೂಟ 'ಹಿಸ್ಟಾರಿಕ್ ಪ್ಯಾಕ್ಟ್' (ಚಾರಿತ್ರಿಕ ಒಪ್ಪಂದ) ನ ಅಭ್ಯರ್ಥಿ ಗುಸ್ತಾವೊ ಪೆತ್ರೊ ಜಯ ಗಳಿಸಿದ್ದಾರೆ. ಆ ಮೂಲಕ ಪೆತ್ರೊ 200 ವರ್ಷಗಳಲ್ಲಿ ಮೊದಲ ಚುನಾಯಿತ ಎಡ ಅಧ್ಯಕ್ಷ ರಾಗುವ ಮೂಲಕ ಕೊಲಂಬಿಯಾದ ಇತಿಹಾಸ ಸೃಷ್ಟಿಸಿದ್ದಾರೆ. ಉಪಾಧ್ಯಕ್ಷರಾಗಿ ಆಫ್ರೋ-ಕೊಲಂಬಿಯನ್ ಮೂಲದ ಮಹಿಳೆ ಫ್ರಾನ್ಸಿಯ ಮಾರ್ಕ್ವೇಝ್ ಚುನಾಯಿತರಾಗುವ ಮೂಲಕ ಮತ್ತೊಂದು ಇತಿಹಾಸ ಸೃಷ್ಟಿಸಿದ್ದಾರೆ. ಅವರು ಹಿಂದೆ ಮನೆಗೆಲಸದವರಾಗಿ ದುಡಿದಿದ್ದ ಒಂಟಿ ತಾಯಿ ಎಂಬುದು ಇನ್ನೂ ವಿಶೇಷವಾಗಿದೆ. ಇವರಿಬ್ಬರೂ ಎರಡನೆಯ ಸುತ್ತಿನಲ್ಲಿ ಮೊದಲ ಸುತ್ತಿಗಿಂತ ಶೇ.10ಹೆಚ್ಚು ಅಂದರೆ ಶೇ.50.5 ಮತಗಳಿಸಿದ್ದಾರೆ. ಪ್ರತಿಸ್ಪರ್ಧಿ ರೀಯಲ್ ಎಸ್ಟೇಟ್ ಕುಳ ಮತ್ತು ಮೆಗಾ ಮನೆಮಾಲಿಕ. ಹೆರ್ನಾಂಡೀಸ್ ಎರಡನೆಯ ಸುತ್ತಿನಲ್ಲಿ 2.26 ಕೋಟಿ (ಮೊದಲ ಸುತ್ತಿಗಿಂತ 12 ಲಕ್ಷ ಹೆಚ್ಚು) ಮತದಾರರು ಮತ ಚಲಾಯಿಸಿದ್ದರು.

ಪೆತ್ರೊ ಕೊಲಂಬಿಯ ಅಧ್ಯಕ್ಷರಾಗುವ ಮೂಲಕ ಲ್ಯಾಟಿನ್ ಅಮೆರಿಕದಲ್ಲಿ ಕಳೆದ ಕೆಲವು ವರ್ಷಗಳಿಂದ ಆರಂಭವಾಗಿರುವ 'ಎಳೆಗೆಂಪು ಅಲೆ' ರಭಸದಿಂದ ಮುನ್ನಡೆದಿದೆ. ಲ್ಯಾಟಿನ್ ಅಮೆರಿಕದ (ದಕ್ಷಿಣ ಮತ್ತು ಮೆಕ್ಸಿಕೊ ಸೇರಿದಂತೆ ಮಧ್ಯ ಅಮೆರಿಕಾ) 15 ದೇಶಗಳು 9 ದೇಶಗಳಲ್ಲಿ ಎಡ ಎಥವಾ ನಡು-ಎಡ ಪಂಥೀಯ ಸರಕಾರಗಳನ್ನು ಹೊಂದಿದೆ. ಬ್ರೆಜಿಲ್‌ನಲ್ಲಿ ಸದ್ಯದಲ್ಲೇ ಚುನಾವಣೆ ನಡೆಯಲಿದ್ದು ಲುಲಾ ಮತ್ತೆ ಎಡ ಅಧ್ಯಕ್ಷರಾಗಿ ಚುನಾಯಿತರಾಗುವ ಎಲ್ಲ ಸಾಧ್ಯತೆಗಳು ಇವೆ. ಆಗ ಹೆಚ್ಚು ಕಡಿಮೆ ಪ್ರಮುಖ ದೇಶಗಳೆಲ್ಲಾ ಎಡಕ್ಕೆ ವಾಲಿದಂತಾಗುತ್ತದೆ. ದಕ್ಷಿಣ ಅಮೆರಿಕದ ಪರಾಗುವೆ, ಉರುಗುವೆ, ಇಕ್ವಡೋರ್ ಹಾಗು ಮಧ್ಯ ಅಮೆರಿಕದ ಎಲ್ ಸಾಲ್ವಡೋರ್, ಗ್ವಾಟೆಮಾಲಾ ನಂತಹ ಸಣ್ಣ ದೇಶಗಳು ಮಾತ್ರ ಬಲಪಂಥಿಯ ಸರಕಾರದಡಿಯಲ್ಲಿ ಇರುತ್ತವೆ. 21ನೆಯ ಶತಮಾನದ ಮೊದಲ ದಶಕದಲ್ಲಿ ಹೊಡೆದಿದ್ದ 'ಎಳೆಗೆಂಪು ಅಲೆ'ಯನ್ನು, ಯು.ಎಸ್ ರಾಜಕೀಯ-ಮಿಲಿಟರಿ ಬುಡಮೇಲು ಚಟುವಟಿಕೆಗಳಿಂದ ಹಿಮ್ಮೆಟ್ಟಿಸಿದ್ದು ಮತ್ತೆ ಈ ದಶಕದಲ್ಲಿ ಅದು ರಭಸದಿಂದ ಮುನ್ನುಗ್ಗುತ್ತಿದೆ ಎಂಬುದು ಗಮನಾರ್ಹ ಜಾಗತಿಕ ಬೆಳವಣಿಗೆ.

ಇತರ ಲ್ಯಾಟಿನ್ ಅಮೆರಿಕದ ದೇಶಗಳಂತಲ್ಲದೆ, ಕೊಲಂಬಿಯ ಅದರ 200ಕ್ಕೂ ಹೆಚ್ಚು ವರ್ಷಗಳ ಸ್ವತಂತ್ರ ಇತಿಹಾಸದಲ್ಲಿ ಎಂದೂ ಪ್ರಗತಿಪರ ಎಡಪಂಥೀಯ ಸರಕಾರಗಳನ್ನು ಕಂಡದ್ದಿಲ್ಲ. ಯಾವತ್ತೂ ಯು.ಎಸ್. ನ ಕೈಗೊಂಬೆಗಳಾದ ಬಲಪಂಥೀಯ ಅಥವಾ ಮಿಲಿಟರಿ ಸರ್ವಾಧಿಕಾರಿಗಳೇ ಇಲ್ಲಿ ಆಡಳಿತ ನಡೆಸಿದ್ದಾರೆ. ಭ್ರಷ್ಟಾಚಾರ ಮತ್ತು ಪಾರಾ ಮಿಲಿಟರಿ ದಬ್ಬಾಳಿಕೆ ತಾಂಡವವಾಡುತ್ತಿತ್ತು. ಅದರ ವಿರುದ್ಧ ಎಡ ಗೆರಿಲ್ಲಾ ಯುದ್ಧ ಅನಿವಾರ್ಯವಾಗಿತ್ತು. ಆದರೆ ದೇಶ ಯು.ಎಸ್. ಬೆಂಬಲಿತ ಸರಕಾರಿ ಸೈನ್ಯ, ಪಾರಾ ಮಿಲಿಟರಿ ಪಡೆ ಮತ್ತು ಎಡ ಗೆರಿಲ್ಲಾಗಳ ನಡುವಿನ ರಣರಂಗವಾಗಿತ್ತು. ಕೆಲವು ವರ್ಷಗಳ ಹಿಂದೆ ಶಾಂತಿ ಒಪ್ಪಂದವಾಗಿದ್ದರೂ ಸರಕಾರ ತಾನು ಒಪ್ಪಿದ ಷರತ್ತುಗಳನ್ನು ಪೂರೈಸದೆ ಶಾಂತಿಸ್ಥಾಪನೆ ಪೂರ್ಣ ಸಫಲವಾಗಿರಲಿಲ್ಲ. ಹಾಗಾಗಿ ಆ ದೇಶದ ಇತಿಹಾಸದಲ್ಲೇ ಮೊದಲ ಎಡಪಂಥೀಯ ಸರಕಾರವನ್ನು ಎದುರು ನೋಡುತ್ತಿದ್ದು, ಅದು ಸಾಧ್ಯವಾಗಿದೆ.



ಕೊಲಂಬಿಯ ಬೀದಿಗಳಲ್ಲಿ ಪಟಾಕಿ

ಚುನಾವಣೆಯ ಮೊದಲು ಮತ್ತು ದಿನ ಸಾಕಷ್ಟು ಅಪಪ್ರಚಾರ, ಚುನಾವಣಾ ಅಕ್ರಮಗಳು, ಹಿಂಸಾಚಾರಗಳು ನಡೆದರೂ ಎಡ ಅಧ್ಯಕ್ಷ ಚುನಾಯಿತರಾಗುವುದನ್ನು ತಡೆಯುವುದು ಸಾಧ್ಯವಾಗಲಿಲ್ಲ. ಈ ವರೆಗಿನ ಸೂಚನೆಗಳ ಪ್ರಕಾರ ಅಗಸ್ಟ್ 7 ರಂದು ಕಾನೂನು ಪ್ರಕಾರ ಪೆತ್ರೊಗೆ ಅಧಿಕಾರ ಹಸ್ತಾಂತರ ಸುಸೂತ್ರವಾಗಿ ನಡೆಯಬಹುದು. ಯು. ಎಸ್. ಸಹ ಚುನಾವಣಾ ಕ್ರಮಬದ್ಧತೆಯ ಕುರಿತು ಯಾವ ಗದ್ದಲವನ್ನೂ ಮಾಡಿಲ್ಲ. ಆದರೆ ಅಧಿಕಾರ ವಹಿಸಿಕೊಂಡ ಮೇಲೆ ಪೆತ್ರೊ ಮುಂದೆ ಗಂಭೀರ ಸವಾಲುಗಳಿವೆ. ಅಧ್ಯಕ್ಷೀಯ ಚುನಾವಣೆಗಳ ಜತೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಪೆತ್ರೊ ಅವರ ಎಡ ಒಕ್ಕೂಟ 'ಹಿಸ್ಟಾರಿಕ್ ಪ್ಯಾಕ್ಟ್' ಗೆ ಬಹುಮತವಿಲ್ಲ. ಕೆಳಮನೆಯಲ್ಲಿ 168ರಲ್ಲಿ 27 ಸೀಟುಗಳು ಮತ್ತು ಮೇಲ್ಮನೆಯಲ್ಲಿ 106ರಲ್ಲಿ 16 ಸೀಟು ಮಾತ್ರ ಗಳಿಸಿದೆ.

ಪೆತ್ರೊ ತಮ್ಮ ಚುನಾವಣಾ ಆಶ್ವಾಸನೆಗಳಾದ ಸಾಮಾಜಿಕ ನ್ಯಾಯ, ಪರಿಸರ ನ್ಯಾಯ, ಕಾನೂನುಬದ್ಧ ಪ್ರಜಾಪ್ರಭುತ್ವ ಆಡಳಿತ, ತೈಲ ಮತ್ತು ಪ್ರಾಕೃತಿಕ ಅನಿಲ ನೀತಿಗಳ ಮರುಪರಿಶೀಲನೆಮುಂತಾದವುಗಳನ್ನು ಜಾರಿ ಮಾಡಲು ಪ್ರಮುಖ ನೀತಿ ಮತ್ತು ಕಾನೂನುಗಳ ಬದಲಾವಣೆಗಳ ಅಗತ್ಯವಿದೆ. ಆದರೆ ಪಾರ್ಲಿಮೆಂಟರಿ ಬಹುಮತ ಇಲ್ಲದಿರುವುದು ತೀವ್ರ ತೊಡಕುಗಳಿವೆ. 2016ರಲ್ಲಿ ಗೆರಿಲ್ಲಾ ಪಡೆಗಳ ಜತೆ ಆದ ಶಾಂತಿ ಒಪ್ಪಂದಗಳನ್ನು ಜಾರಿ ಮಾಡದ ಹಿಂದಿನ ಸರಕಾರಗಳು ಮತ್ತು ಸೈನ್ಯ ಸೃಷ್ಟಿಸಿರುವ ಅವಿಶ್ವಾಸವನ್ನು ಹೋಗಲಾಡಿಸಿ ಅದನ್ನು ಜಾರಿ ಮಾಡುವುದು ಸಹ ಅತ್ಯಂತ ಸವಾಲಿನ ಕೆಲಸವಾಗಿದೆ.

ಆದರೂ ಪೆತ್ರೊ ಸರಕಾರಕ್ಕೆ ದೇಶದೊಳಗೂ ಲ್ಯಾಟಿನ್ ಅಮೆರಿಕದ ಎಡ ಸರಕಾರಗಳು ಹಾಗೂ ಜನತೆಯಿಂದಲೂ ತುಂಬಾ ಭಾರೀ ಬೆಂಬಲ ವ್ಯಕ್ತವಾಗಿದ್ದು, ಈ ಸವಾಲುಗಳನ್ನು ಎದುರಿಸಲು ಸ್ಪೂರ್ತಿ ತುಂಬಿದೆ. ಚುನಾವಣಾ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಕೊಲಂಬಿಯಾದ ತುಂಬಾ ಬೀದಿ ಬೀದಿಗಳಲ್ಲಿ ಪಟಾಕಿ ಸಿಡಿಸಲಾಯಿತು. ಜನ ಸ್ವಯಂ-ಸ್ಫೂರ್ತವಾಗಿ ಹಾಡಿ ಕುಣಿಯುತ್ತಿದ್ದದ್ದು ಕಂಡು ಬಂದಿದೆ ಎಂದು ವರದಿಯಾಗಿದೆ. ಲ್ಯಾಟಿನ್ ಅಮೆರಿಕದ ನಾಯಕರು ಪೆತ್ರೊ ಚುನಾವಣೆಯನ್ನು ಸಂಭ್ರಮದಿಂದ ಸ್ವಾಗತಿಸಿದ್ದಾರೆ. "ಇಡೀ ಲ್ಯಾಟಿನ್ ಅಮೆರಿಕಕ್ಕೆ ಸಂಭ್ರಮದ ವಿಷಯ" ಎಂದು ಟ್ವೀಟ್ ಮಾಡಿದ ಚಿಲಿಯ ಅಧ್ಯಕ್ಷ ಗೇಬ್ರಿಯಲ್ ಬೊರಿಕ್ "ತ್ವರಿತವಾಗಿ ಬದಲಾಗುತ್ತಿರುವ ಜಗತ್ತಿನ ಸವಾಲುಗಳನ್ನು ಎದುರಿಸಲು ನಮ್ಮ ಖಂಡದ ಐಕ್ಯತೆಗಾಗಿ ಕೂಡಿ ದುಡಿಯೋಣ" ಎಂದಿದ್ದಾರೆ. ವೆನೆಜುವೇಲಾದ ಅಧ್ಯಕ್ಷ ಮದುರೊ "ಶಾಂತಿ ಮತ್ತು ಪ್ರಗತಿಯ ಹಾದಿ ಆಯ್ದುಕೊಂಡಿರುವ ಕೊಲಂಬಿಯಾದ ಜನತೆಯ ದನಿ ಗಟ್ಟಿಯಾಗಿ ಕೇಳಿಬಂದಿದೆ" ಎಂದು ಉದ್ಗರಿಸಿದ್ದಾರೆ.

ಶಿಲ್ಪಕಲೆಗಳ ನಾಡಿನಲ್ಲಿ ಕೋಮುವಾದದ ಮೋಡ ಮುಸುಕುತ್ತಿದೆ....... ಪುಟ 16 ರಿಂದ

ಯುವಕರನ್ನು ಕೇಂದ್ರೀಕರಿಸಿ ಜಾತ್ರೆ, ದೇವರ ಕಾರ್ಯಗಳಲ್ಲಿ ಬಜರಂಗದಳ ವ್ಯಾಪಕ ಮಧ್ಯಪ್ರವೇಶ ಮಾಡಿ ಹಳ್ಳಿ ಹಳ್ಳಿಗಳಲ್ಲೂ ಕೇಸರಿ ಧ್ವಜಗಳನ್ನು ಹಾರಿಸುತ್ತಿದೆ. ಈ ಮೂಲಕ ಕೋಮುಭಾವನೆಯನ್ನು ಕೆರಳಿಸಿ ಯುವಕರನ್ನು ದಾರಿತಪ್ಪಿಸುವ ಕೆಲಸವನ್ನು ಮಾಡಲಾಗುತ್ತಿದೆ. ಜೊತೆಗೆ ಇವರ ಬೆಳವಣಿಗೆಗೆ ಪಿಎಫ್ಐ ನಂತಹ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳೂ ಕಾರಣವಾಗಿವೆ ಎಂದು ಸ್ಥಳೀಯರು ದೂರುತ್ತಾರೆ.

ಸಕಲೇಶಪುರದ ಬಾಳ್ಳುಪೇಟೆಯ ರಾಜೇಂದ್ರಪುರ ಎಂಬ ಗ್ರಾಮದಲ್ಲಿ ನೂರಕ್ಕೂ ಹೆಚ್ಚು ಜನ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇದರಲ್ಲಿ ಐದಾರು ಮುಸ್ಲಿಂ ಕುಟುಂಬಗಳೂ ಇವೆ. ಈ ಪ್ರದೇಶದಲ್ಲಿ ಒಂದು ಮರದ ಕೆಳಗೆ ಯಾರೋ ಕಿಡಿಗೇಡಿಗಳು ಹಳೆಯ ಶಾಸನದ ಕಲ್ಲೊಂದನ್ನು ತಂದು ಬಿಸಾಡಿದ್ದಾರೆ. ಈ ಕೆಲಸವನ್ನು ಮುಸ್ಲಿಮರೇ ಮಾಡಿದ್ದು ಅಲ್ಲಿ ಹಿಂದು ದೇವರ ವಿಗ್ರಹಗಳಿದ್ದವು ಅವುಗಳನ್ನು ನಾಶ ಮಾಡಲಾಗಿದೆ ಎಂದು ಪ್ರಚಾರ ಮಾಡಿದ ಬಜರಂಗದಳದವರು ಇವರುಗಳ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ಧಾಖಲಿಸಿ ಅವರನ್ನು ಜೈಲಿಗೆ ಕಳುಹಿಸಿದರು. ಇದಲ್ಲದೆ ಈ ಪ್ರಕರಣವನ್ನು ತಮಗೆ ಬೇಕಾದಂತೆ ಬಳಸಿಕೊಳ್ಳಲು ಬಾಳ್ಳುಪೇಟೆ ಚಲೋ ಮತ್ತು ಬಂದ್ ಗೆ ಕರೆ ಕೊಡಲಾಗಿತ್ತು. ಆದರೆ ಜನಪರ ಸಂಘಟನೆಗಳ ಸೂಕ್ತ ಮಧ್ಯಪ್ರವೇಶದಿಂದಾಗಿ ಇದನ್ನು ವಿಫಲಗೊಳಿಸಲಾಯಿತು. ಮಾತ್ರವಲ್ಲ ಇದಕ್ಕೂ ಆ ಬಡ ಮುಸ್ಲೀಮರಿಗೂ ಯಾವುದೇ ಸಂಭಂದ ಇಲ್ಲ ಎಂಬುದು ಸಾಬೀತಾಯಿತು. ಈ ನಡುವೆ ದತ್ತಮಾಲೆ, ಹನುಮ ಮಾಲಾಧಾರಿಗಳು ಹೆಚ್ಚಾಗುತ್ತಿದ್ದಾರೆ ಮತ್ತು ಧರ್ಮಸ್ಥಳಕ್ಕೆ ಶಿವರಾತ್ರಿಯ ಸಂದರ್ಭದಲ್ಲಿ ನಡೆಯುವ ಪಾದಯಾತ್ರೆಗಳನ್ನು ಹಿಂದು ಸಂಘಟನೆಗಳು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ.

ದೇವರ ವಿಗ್ರಹ ನಾಶದ ಹೆಸರಿನಲ್ಲಿ ಅರಸೀಕೆರೆ ಬಂದ್:

ಅರಸೀಕೆರೆ ತಾಲ್ಲೂಕಿನ ಮಾಲೇಕಲ್ಲು ತಿರುಪತಿ ದೇವಸ್ಥಾನ ಬಳಿ ಹಿಂದೂ ದೇವರ ವಿಗ್ರಹಗಳನ್ನು ವಿರೂಪಗೊಳಿಸಲಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಸಂಘಟನೆಗಳು ಅರಸೀಕೆರೆ ಬಂದ್ ಮಾಡಿ ಈ ಘಟನೆಯನ್ನು ತಮ್ಮ ಕೋಮು ಅಜಂಡಾಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದರು. ಆದರೆ, ಬಜರಂಗದಳದ ಆರೋಪವನ್ನು ಪೊಲೀಸರು ನಿರಾಕರಿಸಿ, ಅದು ಅನ್ಯ ಕೋಮಿನವರು ಮಾಡಿದ ಕೆಲಸವಲ್ಲ ಯಾರೋ ಕಿಡಿಗೇಡಿಗಳು ಮಾಡಿದ ಕೆಲಸ ಎಂದು ಸ್ಪಷ್ಟಪಡಿಸಿದ್ದರು. ದೇವರ ಶಿಲ್ಪ ಕೆತ್ತನೆ ಕೆಲಸಗಾರರು ಊಟಕ್ಕೆ ಹೋಗಿದ್ದ ವೇಳೆ, ಯಾರೂ ಇಲ್ಲದ ಸಂದರ್ಭದಲ್ಲಿ ಒಟ್ಟು 13 ಮೂರ್ತಿ ಭಗ್ನಗೊಳಿಸಿದ್ದಾರೆ. ಅದರಂತೆ ತನಿಖೆ ನಡೆಸಿದ ಪೋಲಿಸರು ಅಭಿಷೇಕ್ ಸೇರಿ ಮೂರು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ದೇವಸ್ಥಾನದ ಬಳಿ ಇರುವ ಕಲ್ಯಾಣಿಯಲ್ಲಿ ಈ ಹುಡುಗರು ಈಜಲು ಬರುತ್ತಿದ್ದರು. ಈಜಾಡಿ ಸಿಗರೇಟ್ ಸೇದುತ್ತಿದ್ದ ಇವರನ್ನು ವಿಗ್ರಹ ಕೆತ್ತನೆ ಮಾಡುತ್ತಿದ್ದ ಕೆಲಸಗಾರರು ಪ್ರಶ್ನೆ ಮಾಡಿದ್ದರು. ಅಲ್ಲದೆ ಕಲ್ಯಾಣಿಯಲ್ಲಿ ಈಜಾಡಬೇಡಿ ಎಂದಿದ್ದಕ್ಕೆ ಈ ರೀತಿ ಕೃತ್ಯ ಎಸಗಿದ್ದಾರೆ ಎಂದು ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ್‌ಗೌಡ ಮಾಹಿತಿ ನೀಡಿದ್ದಾರೆ. ಪೊಲೀಸರ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಶ್ಲಾಘನೆ ವ್ಯಕ್ತವಾಗಿದ್ದು ನಡೆಯಬಹುದಾದ ದೊಡ್ಡ ಅನಾಹುತವನ್ನು ಪೊಲೀಸರ ಕರ್ತವ್ಯ ಪ್ರಜ್ಞೆ ತಪ್ಪಿಸಿದೆ.

ಜಿಲ್ಲೆಯಲ್ಲಿ ನಡೆಯುತ್ತಿರುವ ಈ ಎಲ್ಲಾ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದರ ಹಿಂದೆ ರಾಜಕೀಯ ಅಜೆಂಡಾ ಇರುವುದು ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ಹಾಸನ ವಿಧಾನ ಸಭಾ ಕ್ಷೇತ್ರ ಒಂದರಲ್ಲಿ ಮಾತ್ರ ಬಿಜೆಪಿ ಶಾಸಕ ಗೆದ್ದಿದ್ದರೂ ಮುಂದಿನ ಚುನಾವಣೆಯಲ್ಲಿ ಸಕಲೇಶಪುರ, ಅರಸೀಕೆರೆ ಮತ್ತು ಬೇಲೂರು ಕ್ಷೇತ್ರಗಳನ್ನು ಕೇಂದ್ರೀಕರಿಸಿ ಹಿಂದುತ್ವವಾದಿಗಳು ಕೋಮುಭಾವನೆಗಳನ್ನು ಕೆರಳಿಸುವ ಕೆಲಸಗಳನ್ನು ನಿರಂತರವಾಗಿ ನಡೆಸುತ್ತಿವೆ. ಇವುಗಳಿಗೆ ಇದುವರೆಗೂ ಜಿಲ್ಲೆಯ ಜನ ದೊಡ್ಡಪ್ರಮಾಣದ ಮನ್ನಣೆಯನ್ನು ನೀಡಿಲ್ಲಾ ಎಂಬುದು ಸಮಾಧಾನ ಪಡುವ ಸಂಗತಿಯಾಗಿದ್ದರೂ ಎಚ್ಚರ ತಪ್ಪುವಂತಿಲ್ಲ.

NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 27-JULY 3, 2022 Price: Rs. 10/- Date of Publication: 24 JUNE 2022 RNI No. KARKAN /2006/17926 Posted on 25-06-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



ಶಿಲ್ಪಕಲೆಗಳ ನಾಡಿನಲ್ಲಿ ಕೋಮುವಾದದ ಮೋಡ ಮುಸುಕುತ್ತಿದೆ

ಎಚ್.ಆರ್. ನವೀನ್ ಕುಮಾರ್

ಹಾಸನ ಎಂದರೆ ಅದು ಶಿಲ್ಪಕಲೆಗೆ ಹೆಸರುವಾಸಿಯಾದ ಜಿಲ್ಲೆ. ಜಗತ್ತಿನ ಅತ್ಯಂತ ಎತ್ತರದ ಏಕಶಿಲಾ ವಿಗ್ರಹ ಶ್ರಮಣಬೆಳಗುಳದಲ್ಲಿದೆ, ಅತ್ಯಂತ ನೈಪುಣ್ಯ ಶಿಲ್ಪಕಲೆಗೆ ಖ್ಯಾತಿಪಡೆದ ಯುನೆಸ್ಕೋ ಪಟ್ಟಿಗೆ ಸೇರುತ್ತಿರುವ ಬೇಲೂರು ಹಳೇಬೀಡುಗಳಿವೆ, ಕನ್ನಡದ ಮೊಟ್ಟಮೊದಲ ಶಾಸನ "ಹಲ್ಮಿಡಿ ಶಾಸನ" ಸಿಕ್ಕಿದ್ದು ಹಾಸನ ಜಿಲ್ಲೆಯಲ್ಲಿ, ಇಲ್ಲಿ ಕಾವೇರಿ ಹೇಮಾವತಿ ಯಗಚಿ ನದಿಗಳು ಹರಿಯುತ್ತವೆ, ಮಲೆನಾಡು, ಅರೆ ಮಲೆನಾಡಿನಿಂದ ಕೂಡಿದ ಈ ಜಿಲ್ಲೆಯನ್ನ ಬಡವರ ಊಟಿ ಎಂತಲೂ ಕರೆಯುತ್ತಾರೆ, ಇಲ್ಲಿ ವಿಜ್ಞಾನ ತಂತ್ರಜ್ಞಾನದಲ್ಲಿ ಮುಂದುವರೆದ ಅಂತರಿಕ್ಷ ಉಪಗ್ರಹ ನಿಯಂತ್ರಣಾ ಕೇಂದ್ರ ಎಂಸಿಎಫ್ ಇದೆ, ಇಲ್ಲಿ ಕೃಷಿಯೇ ಪ್ರಧಾನ, ಇದರ ಜೊತೆಗೆ ಸಾಹಿತ್ಯ ಕೃಷಿಯಲ್ಲೂ ಜಿಲ್ಲೆ ಹಿಂದೆ ಬಿದ್ದಿಲ್ಲ. ಚಾವುಂಡರಾಯ, ಮೊದಲನೇ ನಾಗವರ್ಮ, ನಾಗಚಂದ್ರ, ಜನ್ನ, ಕೆರೆಯ ಪದ್ಮರಸ, ಕೇಶಿರಾಜ, ಆಂಡಯ್ಯ ಮುಂತಾದವರು ಪ್ರಾಚೀನ ಸಾಹಿತಿಗಳಾದರೆ, ಕರಿಬಸವ ಶಾಸ್ತ್ರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ವಿ.ರಂಗಣ್ಣ, ಡಿ.ಗೋವಿಂದದಾಸ್, ಅನಾಕೃ, ಎಸ್.ಕೆ.ಕರೀಂಖಾನ್, ಮತ್ತಿಘಟ್ಟ ಕೃಷ್ಣಮೂರ್ತಿ, ವಿಜಯಾ ದಬ್ಬೆ, ಕಿ.ರಂ. ನಾಗರಾಜ್ ಎಸ್.ಎಲ್. ಭೈರಪ್ಪ, ಎಂ.ವಿ.ವಸು, ಜ.ಹೋ.ನಾರಾಯಣಸ್ವಾಮಿ, ಬಾನುಮುಸ್ತಾಕ್, ರೂಪಹಾಸನ ಸೇರಿದಂತೆ ಹಲವರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ಇಲ್ಲಿ ಅಂತರಾಷ್ಟ್ರೀಯ ಖ್ಯಾತಿಕ ಕಲಾವಿಧರಿದ್ದಾರೆ, ಹನ್ನಡದ ಏಕೈಕ ಪ್ರಧಾನಿ ದೇವೇಗೌಡರ ಹುಟ್ಟು ರಾಜಕೀಯ ಜೀವನ ಹಾಸನಜಿಲ್ಲೆಯಲ್ಲೇ ನಡೆದಿದೆ. ಇಷ್ಟೇ ಅಲ್ಲದೆ ಈ ಜಿಲ್ಲೆಯಲ್ಲಿ ವಿವಿಧ ಧಾರ್ಮಿಕ ಪಂಥಗಳು ಸಾಮರಸ್ಯವಾಗಿ ಬಾಳಿ ನಾಡಿನ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

ಹಾಸನ ಜಿಲ್ಲೆಯ ಮೇಲೆ ಗಡಿ ಭಾಗದ ಜಿಲ್ಲೆಗಳ ಪ್ರಭಾವವಿದೆ. ಒಂದೆಡೆ ಕಡಲತಡಿ ಕರಾವಳಿ ಮಂಗಳೂರಿನ ಪ್ರಭಾವ, ಮತ್ತೊಂಡೆಗೆ ಸೌಹಾರ್ದದ ಸಂಕೇತವಾದ ಬಾಬಬುಡನ್ ಗಿರಿಯ ಪ್ರಭಾವ, ಮತ್ತೊಂದೆಡೆ ಮಲೆನಾಡಿನ ಸೊಬಗು ರಾಷ್ಟ್ರಕವಿಯ ನೆಲೆ ಶಿವಮೊಗ್ಗದ ಪ್ರಭಾವ, ಮತ್ತೊಂದೆಡೆ ವೀರಯೋಧರ ನಾಡಾದ ಕೊಡಿನ ಪ್ರಭಾವ, ಸಾಂಸ್ಕೃತಿಕ ನಗರಿ ಮೈಸೂರು ಶೈಷಣಿಕವಾಗಿ ಪ್ರಭಾವಬೀರಿದೆ. ಭೌಗೋಳಿಕವಾಗಿ ಗಡಿಗಳನ್ನು ಹಂಚಿಕೊಂಡಿರುವ ಈ ಜಿಲ್ಲೆಗಳು ಇದುವರೆಗೂ ಅಲ್ಲಿಯ ಸಾಹಿತ್ಯ, ಸಂಸ್ಕೃತಿ ಮತ್ತು ಸೌಹಾರ್ದತೆಯನ್ನು ಹಂಚುತ್ತಿದ್ದವು. ಈಗ ಅದೇ ಜಿಲ್ಲೆಗಳಿಂದ ಕೋಮುವಾದದ ವಿಷಗಾಳಿ ಜಿಲ್ಲೆಯ ಮೇಲೆ ಮೆಲ್ಲಗೆ ಬೀಸುತ್ತಿದೆ.

ಜಿಲ್ಲೆ ಮೊದಲಿನಿಂದಲೂ ಕೋಮುಸೌಹಾರ್ದ ಎನ್ನುವುದು ಜನರ ಮನಗಳಲ್ಲಿ ಹಾಸುಹೊಕ್ಕಾಗಿದೆ. ಆದರೆ ಇತ್ತೀಚಿನ ವರ್ಷಗಳ ರಾಜಕೀಯ ಬೆಳವಣಿಗೆಗಳು ಅರೆಮಲೆನಾಡಿನ ಮೇಲೆ ಮೋಡಕವಿದ ವಾತಾವರಣವನ್ನು ಸೃಷ್ಟಿಸುವ ಕೆಲವು ಘಟನೆಗಳು ನಡೆಯುತ್ತಿವೆ. ಇದರ ಹಿಂದೆ ಸ್ಪಷ್ಟ ರಾಜಕೀಯ ಕಾರಣಗಳು ಢಾಳಾಗಿ ಗೋಚರಿಸಿದರೂ ಅದರ ಪರಿಣಾಮವನ್ನು ಜನಸಾಮಾನ್ಯರು ಅನುಭವಿಸುತ್ತಿದ್ದಾರೆ ಮಾತ್ರವಲ್ಲದೆ ಅನುಮಾನಗಳ ವಿಷಬೀಜ ಮೊಳಕೆಯೊಡೆಯಲು ಪ್ರಾರಂಭಿಸಿದೆ. ಬಾಹ್ಯ ವಾತಾವರಣ ಈ ವಿಷ ಬೀಜವನ್ನು ಬೃಹತ್ ವಿಷವೃಕ್ಷವನ್ನಾಗಿ ಬೆಳೆಸುವ ಮುನ್ನ ಎಚ್ಚೆತ್ತು ಅದನ್ನ ಬುಡಸಮೇತ ಕಿತ್ತು ಹಾಕದಿದ್ದರೆ ಅದು ನಮ್ಮೆಲ್ಲರನ್ನು ಆವರಿಸಿ ಉಸಿರುಗಟ್ಟಿಸುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೆಲವು ಘಟೆಗಳನ್ನು ನೋಡೋಣ.

ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಭಂದ:

ಜಿಲ್ಲೆಯ ಬೇಲೂರಿನ ಚನ್ನಕೇಶವಸ್ವಾಮಿ ದೇವಸ್ಥಾನ ಶಿಲ್ಪಕಲೆಗೆ ಎಷ್ಟು ಪ್ರಸಿದ್ದವೋ ಅಷ್ಟೇ ಪ್ರಸಿದ್ದ ಇಲ್ಲಿ ಪ್ರತೀ ವರ್ಷ ನಡೆಯುವ ಜಾತ್ರೆ. ಈ ಜಾತ್ರೆಗೆ ಸುತ್ತಮುತ್ತಲಿಂದ ಸಾವಿರಾರು ಜನ ಸೇರಿರುತ್ತಾರೆ. ಚನ್ನಕೇಶವಸ್ವಾಮಿ ರಥೋತ್ಸವ ಪ್ರಾರಂಭವಾಗುವ ಮುನ್ನ ಸ್ಥಳೀಯ ದರ್ಗಾದಿಂದ ಮುಸ್ಲಿಂ ಧರ್ಮಗುರುಗಳು ಬಂದು ಕುರಾನಿನ ಕೆಲವು ಭಾಗಗಳನ್ನು ರಥದ ಮುಂದೆ ನಿಂತು ಪಠಿಸುವ ಮೂಲಕವೇ ತೇರಿಗೆ ಚಾಲನೆ ಕೊಡುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ಇಂತಹ ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡಬಾರದೆಂದು ವಿಶ್ವಹಿಂದು ಪರಿಷತ್ ತಾಲ್ಲೂಕು ಆಡಳಿತಕ್ಕೆ ಮನವಿ ಮಾಡುತ್ತದೆ. ಈ ವಿಷಯ ಬೇಲೂರು ಸೇರಿದಂತೆ ಜಿಲ್ಲೆಯಲ್ಲಿ ಉದ್ವಿಗ್ನ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ಇದಕ್ಕೆ ಪಕ್ಕದ ಮಂಗಳೂರಿನಲ್ಲಿ ನಡೆದ ಪ್ರಯೋಗವೇ ಪ್ರೇರಣೆಯೆಂಬುದನ್ನು ಪ್ರತ್ತೇಕವಾಗಿ ಹೇಳಬೇಕಾಗಿಲ್ಲ. ಬೇಲೂರು ಚನ್ನಕೇಶವ ಸ್ವಾಮಿ ದೇವಸ್ಥಾನಕ್ಕೆ ಯಾರಾದರೂ ಬೇಟಿಕೊಟ್ಟಿದ್ದರೆ ಅವರಿಗೆ ದೇವಸ್ಥಾನದ ಎದುರು ಕೊಳಲು ಬಾರಿಸುವ, ವೈಲಿನ್ ಬಾರಿಸುವ ಮತ್ತು ಅವುಗಳನ್ನು ಮಾರಾಟ ಮಾಡುವ, ಅತ್ಯಂತ ಸಣ್ಣ ಗಾತ್ರದ ತಾಮ್ರದ ವಿಗ್ರಹಗಳು, ಹಳೆ ನಾಣ್ಯಗಳನ್ನು ಮಾರಾಟಮಾಡುವವರು ನಿಮ್ಮನು ಸ್ವಾಗತಿಸುತ್ತಾರೆ. ಇವರು ಬೇರಾರೂ ಅಲ್ಲಾ ತಲತಲಾಂತರಗಳಿಂದ ಇದೇ ದೇವಸ್ಥಾನದ ಎದುರು ಪ್ರವಾಸಿಗರನ್ನು ರಂಜಿಸುತ್ತಾ ವ್ಯಾಪಾರ ಮಾಡಿ ಬದುಕುತ್ತಿರುವ ಶ್ರಮಜೀವಿ ಮುಸ್ಲಿಮರು.



ಈ ಇತಿಹಾಸ, ಸಂಸ್ಕೃತಿ ತಿಳಿಯದ ಕಿಡಿಗೇಡಿಗಳು ಇವರ ವ್ಯಾಪಾರಕ್ಕೆ ಅಡ್ಡಿ ಮಾಡಿ ಕೋಮು ಸಾಮರಸ್ಯವನ್ನು ಹಾಳು ಮಾಡುವ ಜೊತೆಗೆ ಇವರ ಬದುಕಿಗೂ ಕಲ್ಲು ಹಾಕಲು ಮುಂದಾದರು. ಜಿಲ್ಲೆಯ ಪ್ರಜ್ಞಾವಂತ ಜನ ಎಚ್ಚೆತ್ತು ಎಲ್ಲಾ ಜನಪರ ಸಂಘಟನೆಗಳನ್ನು ಒಟ್ಟಿಗೆ ಸೇರಿಸಿ ಸಭೆ ಮಾಡಿ ಜಿಲ್ಲಾಡಳಿತ, ತಾಲ್ಲೂಕು



ಆಡಳಿತಗಳ ಎದುರು ಪ್ರತಿಭಟಿಸಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಭಂದ ಹೇರಬಾರದೆಂದು ಒತ್ತಾಯಿಸಿ ಬೇಲೂರು ನಗರದಲ್ಲಿ ಸೌಹಾರ್ದ ನಡಿಗೆಯನ್ನೂ ಮಾಡಿ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಇದೆಲ್ಲದರ ಪರಿಣಾಮವಾಗಿ ಎಂದಿನಂತೆ ಜಾತ್ರೆ ಸುಗಮವಾಗಿ ನಡೆಯಿತು. ಮುಸ್ಲಿಂ ಮೌಲ್ವಿ ಬಂದು ಕುರಾನ್ ಪಠಿಸಿದರು ಚನ್ನಕೇಶವನ ರಥ ಮುಂದೆ ಸಾಗಿತು. ಜನರು ಪರಸ್ಪರ ಬೆರೆತು ಸಂತೋಷಪಟ್ಟರು ಮುಸ್ಲಿಮರು ತಮ್ಮ ವ್ಯಾಪಾರವನ್ನು ಮುಂದುವರೆಸಿದರು. ಮುಸ್ಲಿಮರಲ್ಲದವರೂ ಇವರಿಂದ ಗಣಪತಿ, ನಟರಾಜ, ಚನ್ನಕೇಶವನ ಚಿಕ್ಕವಿಗ್ರಹಗಳನ್ನು ಖರೀದಿಸಿ ತಮ್ಮ ದೇವರ ಕೋಣೆಗಳಲ್ಲಿ ಅಲಂಕರಿಸಿದರು, ತಮ್ಮ ಮಕ್ಕಳಿಗೆ ಇವರಿಂದ ಕೊಂಡ ಕೊಳಲನ್ನು ಊದಿಸಿ ಶ್ರೀಕೃಷ್ಣನನ್ನ ಕಂಡರು.

ಮುಸ್ಲಿಂ ವ್ಯಾಪಾರಿಗಳಿಂದ ಮಾವಿನ ಹಣ್ಣು ಖರೀಧಿಸಬೇಡಿ:

ಮನುಷ್ಯನ ಶತೃವಿನಂತೆ ಬಂದೆರಗಿದ್ದ ಕೋವಿಡ್ ಮಹಾ ಸೋಂಕಿನ ಬಾದೆಯನ್ನು ಜನ ಅನುಭವಿಸುತ್ತಿರುವಾಗಲೇ ಅದರ ಬೆನ್ನಲ್ಲೇ ಅಂಟಿಕೊಂಡ ಕೋಮುವಾದದ ವೈರೆಸ್ ಕೂಡ ಅಷ್ಟೇ ವ್ಯಾಪಕವಾಗಿ ದೇಶದಾದ್ಯಂತ ಹರಡಿತು. ತಬ್ಲಿಕ್‌ಗಳು ಕರೋನಾ ಹರಡುತ್ತಿದ್ದಾರೆ, ಅವರು ಮಾರಾಟ ಮಾಡುವ ಹಣ್ಣುಗಳಿಗೆ ಎಂಜಲನ್ನು ಸೇರಿಸುತ್ತಿದ್ದಾರೆ, ಇಂತಹದ್ದೇ ಸುದ್ದಿಗಳನ್ನೂ ಜಿಲ್ಲೆಯಲ್ಲಿಯೂ ಹಬ್ಬಿಸಲಾಗಿದೆ.. ಇದು ಹಣ್ಣುಗಳ ರಾಜ ಮಾವಿನ ಹಣ್ಣಿನ ಕಾಲ ಜಿಲ್ಲೆಯಲ್ಲಿ ಅತಿ ಹೆಚ್ಚು ಮಾವಿನ ಹಣ್ಣು ಬೆಳೆಯದಿದ್ದರೂ ರಾಜ್ಯದ ಇತರೆಡೆಗಳಿಂದ ಬರುವ ರೈತರು ಬೆಳೆದ ಮಾವಿನ ಹಣ್ಣುಗಳನ್ನು ಮಾರಾಟ ಮಾಡುವವರು ಬಹುತೇಕರು ಮುಸ್ಲಿಮರು. ಇದ್ದಕ್ಕಿದ್ದಂತೆ ಒಂದು ದಿನ ಧರ್ಮರಕ್ಷಕರ ಹೆಸರಿನ ಕೆಲವು ಕೇಸರೀಧಾರಿಗಳು ಜಿಲ್ಲೆಯಲ್ಲಿ ಮುಸ್ಲಿಮರಿಂದ ಮಾವಿನ ಹಣ್ಣುಗಳನ್ನು ಖರೀದಿಸಬೇಡಿ, ಅವರು ಅದಕ್ಕೆ ವಿಷ ಬೆರೆಸುತ್ತಾರೆ ಎಂಬ ಸುದ್ದಿಯನ್ನು ಹರಡಿದರು. ಆದರೆ ಅವರ ಈ ಪ್ರಯೋಗ ಯಶಸ್ಸು ಕಾಣಲಿಲ್ಲ. ಮೂರ್ಖರ ಮಾತುಗಳನ್ನು ಕೇಳಿ ಮಾವಿನ ಹಣ್ಣುಗಳನ್ನು ತಿನ್ನದಿರುವಷ್ಟು ದಡ್ಡರಲ್ಲಾ ನಮ್ಮ ಜನ. ಮಾವಿನ ಹಣ್ಣನ್ನು ಮಾರುತ್ತಿರುವವರು ಯಾರು ಎಂಬುದು ಅವರಿಗೆ ಮುಖ್ಯವಾಗಲಿಲ್ಲ ಬದಲಾಗಿ ಯಾರ ಬಳಿ ರುಚಿಕರವಾಗ ಮಾವಿನ ಹಣ್ಣು ಸಿಗುತ್ತದೆ, ಇದನ್ನು ಬೆಳೆದವನು ರೈತ ತಾನೆ ಎಂಬುದೇ ಮುಖ್ಯವಾಯಿತು.

ಮಂಜ್ರಾಬಾದ್ ಕೋಟೆಯಲ್ಲಿ ಕೇಸರಿ ಧ್ವಜ:

ಟಿಪ್ಪುಸುಲ್ತಾನ್ 1792 ರಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಕಟ್ಟಿಸಿದ ಮಂಜರಾಬಾದ್ ಕೋಟೆ ಅದರ ವಿನ್ಯಾಸ ಮತ್ತು ವಾಸ್ತು ಶಿಲ್ಪದಲ್ಲಿ ಅತ್ಯಂತ ವಿಶಿಷ್ಟವಾಗಿದೆ. ನಕ್ಷತ್ರಾಕಾರದಲ್ಲಿರುವ ಈ ಕೋಟೆಯನ್ನು ನೋಡಲು ಇಂದಿಗೂ ಸಾವಿರಾರು ಪ್ರವಾಸಿಗರು ಭೇಟಿನೀಡುತ್ತಾರೆ. ಈ ಕೋಟೆಯನ್ನು ಟಿಪ್ಪುವೇ ಕಟ್ಟಿಸಿದ್ದು ಎಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳಿದ್ದರೂ ಇದು ಮಂಜಿನ ಕೋಟೆ, ಇದನ್ನು ಪಾಳೆಗಾರ ಕಟ್ಟಿಸಿದ್ದು, ಇದು ಹಿಂದುಗಳಿಗೆ ಸೇರಬೇಕಾದದ್ದು ಎಂದು ಧರ್ಮವನ್ನು ತಲೆಗೇರಿಸಿಕೊಂಡ ಬಜರಂಗದಳದವರು ಇಲ್ಲಿ ಕೇಸರಿ ದ್ವಜವನ್ನು ಹಾರಿಸಲು ನಿರಂತರ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಸಕಲೇಶಪುರ ಮಂಗೂಳರಿನ ಗಡಿ ಭಾಗದಲ್ಲಿರುವುದರಿಂದ ಬಹಳ ಬೇಗ ಇಲ್ಲಿಗೆ ಪ್ರಭಾವ ಬಿರುತ್ತದೆ. ಸಕಲೇಶಪುರದ ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**